ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 7 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 317 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ

16ನೇ ಬಜೆಟ್ ಮಂಡನೆ

ಮುಡಾ ತಲೆನೋವು, ಕಾಲು ನೋವಿನ ನಡುವೆಯೂ ಬಜೆಟ್ ರೂಪಿಸುವಲ್ಲಿ ವಿಶೇಷ ಆಸ್ಥೆ

ಬೆಂಗಳೂರು, ಮಾ.6(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ದಾಖಲೆಯ 16ನೇ ಬಜೆಟ್ ಅನ್ನು ನಾಳೆ (ಶನಿವಾರ ವಿಧಾನಸಭೆಯಲ್ಲಿ ಮಂಡನೆ ಮಾಡಲಿದ್ದಾರೆ.

ಜನರ ಮನದಲ್ಲಿ ಶಾಶ್ವತ ನೆನಪು ತರುವ ಮುಂಗಡಪತ್ರ ನೀಡಲು ಸಿದ್ದರಾಮಯ್ಯ ಕಳೆದ ಎರಡು ತಿಂಗಳಿಂದ ಕಸರತ್ತು ನಡೆಸಿದ್ದಾರೆ. ಐದು ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುವ ಜೊತೆಗೆ ಕೆಲವು ಹೊಸ ಕಾರ್ಯಕ್ರಮಗಳ ಅನುಷ್ಠಾನ ಮತ್ತು ರಾಜ್ಯದ ಅಭಿವೃದ್ಧಿಗೆ ಹಣ ಮೀಸಲಿಡಲು ಮುಂದಾಗಿದ್ದಾರೆ. ಇದಕ್ಕಾಗಿ ರಾಜ್ಯದ ಜನತೆ ಮೇಲೆ ಯಾವುದೇ ಹೊಸ ಹೊರೆ ಹಾಕದೆ ಮತ್ತೆ ಸಾಲದ ಮೊರೆ ಹೋಗಿ ತಮ್ಮ ಬಜೆಟ್ ಗಾತ್ರವನ್ನು ನಾಲ್ಕು ಲಕ್ಷ ಕೋಟಿ ರೂ. ಸಮೀಪಕ್ಕೆ ಕೊಂಡೊಯ್ಯುತ್ತಿದ್ದಾರೆ. ಮುಡಾ ಹಗರಣದ ಸಂಕಷ್ಟ ಹಾಗೂ ಕಾಲುನೋವಿನ ನಡುವೆಯೇ ಆರ್ಥಿಕ ತಜ್ಞರು ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ■6ನೇ ಪುಟಕ್ಕೆ



ಮೈಸೂರಿನ ನಿರೀಕ್ಷೆಗಳು

■ದಸರಾ ವಿಶೇಷ ಪ್ರಾಧಿಕಾರ ರಚನೆ ■ರಾಷ್ಟ್ರೀಯ ಪ್ರವಾಸಿತಾಣಕ್ಕೆ ವಸತಿ ಯೋಜನೆ ■ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿ ಆಸ್ಪತ್ರೆ ನಿರ್ಮಾಣ ■ಕೃಷಿ ಉತ್ಪನ್ನಗಳ ಉತ್ತೇಜನಕ್ಕೆ ಸೂಕ್ತ ಯೋಜನೆ ■ಕೇಂದ್ರ ಸಹಭಾಗಿತ್ವದಲ್ಲಿ ಬೃಹತ್ ಕೈಗಾರಿಕಾ ಘಟಕ ಸ್ಥಾಪನೆ ■ಮೈಸೂರಿನ ಐತಿಹಾಸಿಕ ಪಾರಂಪರಿಕ ಕಟ್ಟಡ ಹಾಗೂ ಸ್ಮಾರಕ ಉಳಿವಿಗೆ ರಾಷ್ಟ್ರೀಯ ಕಾರ್ಯತಂಡ ■ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ಕಂಪನಿಯನ್ನು ಕೇಂದ್ರದ ಸಹಭಾಗಿತ್ವದಲ್ಲಿ ಮೇಲ್ದರ್ಜೆಗೇರಿಸುವುದು ■ಬೃಹತ್ ಮೈಸೂರು ಮಹಾನಗರಪಾಲಿಕೆ ರಚನೆ ■ಶತಮಾನ ಪೂರೈಸಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿಶೇಷ ಅನುದಾನ ■ಮೈಸೂರು ಬಹುನಿರೀಕ್ಷಿತ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ■ಮೈಸೂರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಸ್ಥಾಪನೆ ■ಭವಿಷ್ಯದ ದೃಷ್ಟಿಯಿಂದ ಮೈಸೂರಿಗೆ ವಿಶೇಷ ಕುಡಿಯುವ ನೀರಿನ ಯೋಜನೆ

ನಿಮ್ಮ ಪತ್ರಗಳು

ಬನ್ನಿಮಂಟಪ ಹೊಸ ಬಸ್ ನಿಲ್ದಾಣಕ್ಕೆ ಅರಮನೆ ಮಾದರಿ ವಿನ್ಯಾಸ ತಕ್ಕದ್ದಲ್ಲ!



ಮಾನ್ಯರೇ,

ಮೈಸೂರಿನ ಬನ್ನಿಮಂಟಪ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಪ್ರಸ್ತಾಪಿತ ವಿನ್ಯಾಸವು ಅತ್ಯಂತ ಅಸಹ್ಯಕರ. ವಿಸ್ತೃತ ಯೋಜನಾ ವರದಿ(ಡಿಪಿಆರ್)ಯಲ್ಲಿ ಇಂಡೋ ಸಾರ್ಸೆನಿಕ್ ವಾಸ್ತುಶಿಲ್ಪ ವಿನ್ಯಾಸಕ್ಕೆ ಉತ್ತಮ ಉದಾಹರಣೆಯಾದ ಮೈಸೂರು ಅರಮನೆಯ ಪ್ರತಿರೂಪದಂತೆ ಬಿಂಬಿಸಿರುವ ಉದ್ದೇಶಿತ ಕಟ್ಟಡದ ವಿನ್ಯಾಸ ಅತ್ಯಂತ ಕೆಟ್ಟದಾಗಿದೆ.



ವಿಜಯಶಂಕರ್

ಮೈಸೂರು ಅರಮನೆ ವಿನ್ಯಾಸವು ರಾಜಮನೆತನದ ಅವಶ್ಯಕತೆಗನುಸಾರವಾಗಿದೆ. ಆದರೆ, ಬನ್ನಿಮಂಟಪ ಬಸ್ ನಿಲ್ದಾಣ ನಿರ್ದಿಷ್ಟ ಸೌಲಭ್ಯಗಳೊಂದಿಗೆ ಸಾರ್ವಜನಿಕರ ಬಳಕೆಗಾಗಿದೆ. ಅದಕ್ಕೆ ಹೋಗಿ ಹೋಗಿ ಮೈಸೂರು ಅರಮನೆಯ ವಿನ್ಯಾಸ ಕಲ್ಪಿಸಿರುವುದು ಕೆಟ್ಟ ಉದಾಹರಣೆಯಾಗುತ್ತದೆ.

ಒಂದು ಆಧುನಿಕ ಕಟ್ಟಡವು ಸಾರ್ವಜನಿಕರ ಬಳಕೆಗೆ ಅನುಗುಣವಾಗಿರಬೇಕು. ಎಲ್ಲಾ ಕಟ್ಟಡಗಳಿಗೂ ಮೈಸೂರು ಅರಮನೆಯ ವಿನ್ಯಾಸವನ್ನು ಸಾರಾಸಗಟಾಗಿ ನಕಲು ಮಾಡುವುದು ಸರಿಯಲ್ಲ. ಸಾರ್ವಜನಿಕರಿಗೆ ಆಯಾ ಕಟ್ಟಡದ ಉಪಯುಕ್ತತೆ, ಬಳಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಧುನಿಕವಾಗಿ ವಿನ್ಯಾಸಗೊಳಿಸುವ ಅಗತ್ಯವಿದೆ.

ಈ ವಿಚಾರದಲ್ಲಿ ಹೇಳುವುದಾದರೆ, ಮೈಸೂರು ನಗರದಲ್ಲಿ ಮೂರು ಕಾಲೇಜುಗಳಿವೆ. ಉತ್ತಮ ವಿನ್ಯಾಸವನ್ನು ನೀಡಬಹುದಾದ ಹಲವಾರು ಹೆಸರಾಂತ ವಾಸ್ತುಶಿಲ್ಪಿಗಳೂ ಇದ್ದಾರೆ. ಅವರ ಸಹಕಾರ ಪಡೆಯಬಹುದಿತ್ತು. ಒಟ್ಟಾರೆ, ಪ್ರಸ್ತಾಪಿತ ಬಸ್ ನಿಲ್ದಾಣದ ರಚನೆಯ ವಿನ್ಯಾಸವನ್ನು ಬದಲಾಯಿಸಲೇಬೇಕಿದೆ. –ಎಂ.ಎಸ್.ವಿಜಯಶಂಕರ್, ಎಂಜಿನಿಯರ್‌ಗಳ ಸಂಸ್ಥೆಯ ಮಾಜಿ ಅಧ್ಯಕ್ಷರು, ಮೈಸೂರು ಕೇಂದ್ರ

ಮೈಕ್ರೋ ಫೈನಾನ್ಸ್‌ಗಳಿಗೆ ಕಡಿವಾಣಕ್ಕೆ ಮಸೂದೆ ಮಂಡನೆ

ಬೆಂಗಳೂರು, ಮಾ.6–ಕಿರುಸಾಲ, ಸಣ್ಣ ಸಾಲ, ಖಾಸಗಿ ಹಣಕಾಸು ಮತ್ತು ಇತರೆ ಅನಿಯಂತ್ರಿತ ಲೇವಾದೇವಿ ಮಾಫಿಯಾಗಳಿಂದ ಸಾಲ ಪಡೆದವರಿಗೆ ಉಂಟಾಗುವ ಕಿರುಕುಳ ತಪ್ಪಿಸಿ ರಕ್ಷಣೆ ನೀಡುವ ಉದ್ದೇಶದಿಂದ ಕರ್ನಾಟಕ ಕಿರು (ಮೈಕ್ರೋ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ 2025ನ್ನು ವಿಧಾನಸಭೆಯಲ್ಲಿ ಇಂದು ಮಂಡಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಈ ವಿಧೇಯಕವನ್ನು ಮಂಡಿಸಿದರು.

ಈ ವಿಧೇಯಕದಲ್ಲಿ ಸಾಲಗಳನ್ನು ಪಡೆಯುವ ಮತ್ತು ಸಾಲಗಳಲ್ಲೇ ಮುಳುಗಿ ಹೋಗಿರುವ ಅಸಹಾಯಕರನ್ನು ಕಾಪಾಡುವ ಮತ್ತು ರಕ್ಷಿಸುವ ಉದ್ದೇಶವಿದೆ. ಬಡ ಗ್ರಾಮೀಣ ನಿರ್ಗತಿಕರು, ನಗರ ಕಾರ್ಮಿಕರು, ಸಮಾಜದ ಅಶಕ್ತ ಮತ್ತು ದುರ್ಬಲ ವರ್ಗದವರನ್ನು ಪೀಡಿಸುತ್ತಿವೆ ಮತ್ತು ಉಸಿರುಗಟ್ಟಿಸುತ್ತಿವೆ. ಸಾಲಗಾರನಿಗೆ ಕೆಲವೊಮ್ಮೆ ಹೆಚ್ಚಿನ ಬಡ್ಡಿಯನ್ನು ಪಾವತಿಸಲು ಒತ್ತಾಯಿಸಲಾಗುತ್ತಿದೆ. ಲೇವಾದೇವಿದಾರರ ಕಾರಣದಿಂದಾಗಿ ಸಾಲಗಾರರು ಬೀದಿಗೆ ಬರುವಂತೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುವಂತೆ ಒತ್ತಾಯಪಡಿಸಲಾಗುತ್ತಿದೆ ಎಂದು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಅಥವಾ ಸಾಲ ನೀಡಿಕೆ ಸಂಸ್ಥೆಗಳು ರೈತರಿಂದ ಕೃಷಿ ಉತ್ಪನ್ನಗಳನ್ನು ಪಡೆದು, ಕೃಷಿ ಸರಕುಗಳ ಖರೀದಿ ಮತ್ತು ಮಾರಾಟದಲ್ಲಿ ತೊಡಗಿರುವ ಅಥವಾ ಬಡವರಿಗೆ ಸಾಲವನ್ನು ನೀಡುವ ಮತ್ತು ಅಸಲನ್ನು ಬಡ್ಡಿಯೊಂದಿಗೆ ನಗದು ಅಥವಾ ವಸ್ತು ರೂಪದಲ್ಲಿ ತೆಗೆದುಕೊಳ್ಳುವ ಸಂದರ್ಭದಲ್ಲಿ ದುಬಾರಿ ಬಡ್ಡಿದರಗಳು, ಅನುಚಿತ ತೊಂದರೆ, ಬಲವಂತ ಮತ್ತು ಅಮಾನವೀಯ ವಸೂಲಾತಿ ಮಾಡುವುದು ಕಂಡುಬಂದಿದೆ. ಆರ್ಥಿಕವಾಗಿ ದುರ್ಬಲ ಗುಂಪುಗಳು ಮತ್ತು ವ್ಯಕ್ತಿಗಳು, ವಿಶೇಷವಾಗಿ ಮಹಿಳೆಯರು ಹಾಗೂ ಮಹಿಳಾ ಸ್ವಸಹಾಯ ಗುಂಪುಗಳನ್ನು ರಕ್ಷಿಸಲು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಅಥವಾ ಸಾಲ ನೀಡಿಕೆ ಏಜೆನ್ಸಿಗಳು ಇಲ್ಲವೇ ■6ನೇ ಪುಟಕ್ಕೆ



ಹೆಚ್.ಕೆ.ಪಾಟೀಲ್

ಮುಡಾ ನಿವೇಶನ ಹಂಚಿಕೆ ಪ್ರಕರಣ; ಸಿಬಿಐ ತನಿಖೆಗೆ ವಹಿಸುವಂತೆ ಸ್ನೇಹಮಯಿ ಕೃಷ್ಣ

ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಕೆ



ಕೃಷ್ಣ

ಬೆಂಗಳೂರು, ಮಾ.6(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ.

ಇದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತೆ ಸಂಕಷ್ಟ ಎದುರಾಗಿದೆ. ಸಿದ್ದರಾಮಯ್ಯ ಕುಟುಂಬ ಮುಡಾದಿಂದ ಪಡೆದಿದ್ದ 14 ನಿವೇಶನಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ, ಲೋಕಾಯುಕ್ತರು ನೀಡಿರುವ ವರದಿ ಸರಿಯಿಲ್ಲ. ಮುಖ್ಯಮಂತ್ರಿ ಅವರ ಒತ್ತಡಕ್ಕೆ ಮಣಿದು ಲೋಕಾಯುಕ್ತ ವರದಿ ಸಿದ್ಧಪಡಿಸಿದೆ. ಪ್ರಕರಣವನ್ನು ಸಿಬಿಐಗೆ ವಹಿಸಿದರೆ, ಸತ್ಯ ಹೊರಬರುತ್ತದೆ ಮತ್ತು ನ್ಯಾಯ ದೊರೆಯುತ್ತದೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮತ್ತೆ ಸಂಕಷ್ಟ!

ತನಿಖೆ ಕೇವಲ 14 ನಿವೇಶನಗಳಿಗೆ ಸೀಮಿತವಾಗದೆ ಮುಡಾದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಬಿಡಿ ನಿವೇಶನಗಳ ಹಂಚಿಕೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂ. ■6ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ

ರಾಜ್ಯ ಸರ್ಕಾರ ಅನುದಾನ ನೀಡುವಲ್ಲಿ ವಿಳಂಬ ಧೋರಣೆ

●ಮೈಸೂರು ವಿಮಾನ ನಿಲ್ದಾಣ ರನ್‌ವೇ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತ; ಶೀಘ್ರ ಅನುದಾನ ಬಿಡುಗಡೆಗೆ ಸಂಸದ ಯದುವೀರ್ ಆಗ್ರಹ ●ಮೈಸೂರು–ಕೊಡಗು ರಸ್ತೆ ಅಭಿವೃದ್ಧಿಗೂ ಹಣ ನೀಡುವಂತೆ ಮನವಿ





ಯದುವೀರ್

ಮೈಸೂರು, ಮಾ.6(ಜಿಎ)–ಮೈಸೂರಿನ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗಾಗಿ ಭೂಸ್ವಾಧೀನಕ್ಕೆ ಅನುದಾನ ನೀಡಲು ರಾಜ್ಯ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರು ವಾಣಿಜ್ಯ ಕೇಂದ್ರವಾಗಿದ್ದು, ಜೊತೆಗೆ ವಿದೇಶಿ ಪ್ರವಾಸಿಗರಿಗೆ ಹೆಬ್ಬಾಗಿಲಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಆರ್ಥಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸುವಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ತ್ವರಿತವಾಗಿ ಮಾಡಬೇಕಿದೆ. ಆದರೆ, ಅನುದಾನ ಬಿಡುಗಡೆ ವಿಳಂಬದಿಂದಾಗಿ ಪ್ರಮುಖ ಯೋಜನೆಗಳು ವಿಳಂಬವಾಗುತ್ತಿವೆ ಎಂದರು. ಮೈಸೂರು ವಿಮಾನ ನಿಲ್ದಾಣದ ರನ್ ವೇ ಮೊದಲ ಹಂತದ ವಿಸ್ತರಣೆಗೆ 46 ಎಕರೆ ಜಮೀನು ಅಗತ್ಯವಿದೆ. ಆದರೆ ಭೂಸ್ವಾಧೀನ ಪ್ರಕ್ರಿಯೆ ಆಗದೇ ವಿಳಂಬವಾಗುತ್ತಿದೆ. ಕೂಡಲೇ ರಾಜ್ಯ ಸರ್ಕಾರವು ಭೂಮಾಲೀಕರಿಗೆ ಬಾಕಿ ಹಣವನ್ನು ಪಾವತಿಸಿ, ಭೂಮಿಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ತ್ವರಿತವಾಗಿ ವರ್ಗಾಯಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. ಆಗ ಮಾತ್ರ ರನ್ ವೇ ವಿಸ್ತರಣೆಗೊಂಡು, ಬೃಹತ್ ವಿಮಾನಗಳು ಮೈಸೂರಲ್ಲಿ ಹಾರಾಟ ಆರಂಭಿಸಲಿವೆ ಎಂದು ತಿಳಿಸಿದರು.

ಹೆದ್ದಾರಿ ಭೂ ಸ್ವಾಧೀನಕ್ಕೆ ಗ್ರಹಣ: ಮತ್ತೊಂದೆಡೆ ಬೆಳಗೊಳದಿಂದ ಕುಶಾಲನಗರ ಸಂಪರ್ಕಿಸುವ ರೈಲು ಮಾರ್ಗದ ಭೂಸ್ವಾಧೀನ ಪ್ರಕ್ರಿಯೆಯೂ ವಿಳಂಬವಾಗುತ್ತಿದೆ. ರಾಜ್ಯ ಸರ್ಕಾರ ಭೂಸ್ವಾಧೀನ ಸ್ಥಗಿತಗೊಳಿಸಿದೆ. ವಿಮಾನ ನಿಲ್ದಾಣ ರನ್ ವೇ ವಿಸ್ತರಣೆ ಮತ್ತು ಬೆಳಗೊಳ–ಕುಶಾಲನಗರ ರೈಲು ಮಾರ್ಗದ ಭೂಸ್ವಾಧೀನ ಪ್ರಕ್ರಿಯೆಗೆ ರಾಜ್ಯ ಸರ್ಕಾರದ ಹೊರತಾಗಿ ಬೇರೆ ಯಾವುದಾದರೂ ಮಾರ್ಗದಿಂದ ಅನುದಾನ ತರಬಹುದೇ ಎಂದು ಚಿಂತಿಸುತ್ತಿದ್ದೇನೆ ಎಂದರು.

ಮೈಸೂರು ಮತ್ತು ಕೊಡಗಿನ ರಸ್ತೆಗಳ ಶೋಚನೀಯ ಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಅವರು, ಮೈಸೂರಿನಿಂದ ಕೊಡಗಿಗೆ ಹೋಗುವ ರಸ್ತೆಗಳು, ಜಿಲ್ಲೆಯಾದ್ಯಂತ ವಿವಿಧ ರಸ್ತೆಗಳು ಗುಂಡಿಮಯವಾಗಿದ್ದು, ವಾಹನ ಸವಾರರು ಸಂಚರಿಸುವುದೇ ಕಷ್ಟಕರವಾಗಿದೆ. ರಸ್ತೆ ನಿರ್ವಹಣೆ ರಾಜ್ಯ ಸರ್ಕಾರದ ಮೂಲಭೂತ ಕರ್ತವ್ಯವಾಗಿದ್ದು, ವಿಳಂಬ ಮಾಡದೆ ಹಣ ಬಿಡುಗಡೆ ಮಾಡಬೇಕು. ಸಿಎಂ ಸಿದ್ದರಾಮಯ್ಯ ಅವರು ಕೊಡಗು ಮತ್ತು ಅವರ ತವರು ಮೈಸೂರು ಎರಡರಲ್ಲೂ ರಸ್ತೆ ಸುಧಾರಣೆಗೆ ■6ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 7 ಮಾರ್ಚ್ 2025

ಶ್ರೀ ರಾಘವೇಂದ್ರ ಸ್ವಾಮಿಗಳ 430ನೇ ಜನ್ಮ ದಿನೋತ್ಸವ; ಜನಪ್ರಿಯ ಸಾಧಕರು ಪುಸ್ತಕ ಲೋಕಾರ್ಪಣೆ



ಲೇಖಕ ಎಸ್.ನಾಗರಾಜ ಅವರ 'ಜನಪ್ರಿಯ ಸಾಧಕರು' ಪುಸ್ತಕ ಲೋಕಾರ್ಪಣೆ.

ಮೈಸೂರು,ಮಾ.6–ಮೈಸೂರು ನಗರದ ಶ್ರೀ ರಾಘವೇಂದ್ರ ಪ್ರಕಾಶನದ ವತಿಯಿಂದ ಮಾ.6(ಗುರುವಾರ)ರಂದು ಬೆಳಗ್ಗೆ ಶ್ರೀ ರಾಘವೇಂದ್ರ ಸ್ವಾಮಿಗಳ 430ನೇ ಜನ್ಮ ದಿನೋತ್ಸವವನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಲೇಖಕ ಎಸ್.ನಾಗರಾಜ ಅವರ 'ಜನಪ್ರಿಯ ಸಾಧಕರು' ಪುಸ್ತಕವನ್ನು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಡ್ಡೀಕೆರೆ ಗೋಪಾಲ್ ಲೋಕಾರ್ಪಣೆ ಮಾಡಿದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಕಸಾಪ ಮಾಜಿ ಅಧ್ಯಕ್ಷ ಎನ್.ಚಂದ್ರಶೇಖರ್, ಲೇಖಕ ಎಸ್.ನಾಗರಾಜ, ಸಮಾಜ ಸೇವಕರಾದ ಕೆ.ರಘುರಾಮ್ ವಾಜಪೇಯಿ, ಆದರ್ಶ ಸೇವಾ ಸಂಘದ ಜಿ.ಆರ್.ನಾಗರಾಜ ಉಪಸ್ಥಿತರಿದ್ದರು.

ಈ ವೇಳೆ ಮಡ್ಡೀಕೆರೆ ಗೋಪಾಲ್ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಸಾಧಕರ ಬಗ್ಗೆ ಪುಸ್ತಕ ಒಳಗೊಂಡಿದೆ. ಈ ಸಾಧಕರ ಸಾಧನೆಗಳು ಎಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರನ್ನು ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು.

ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಬಹುಮಾನ



ಮೈಸೂರಿನ ಟೆರೇಷಿಯನ್ ಕಾಲೇಜಿನಲ್ಲಿ ನಡೆದ ಮೈಸೂರು ಓಪನ್ ನ್ಯಾಷನಲ್ ಲೆವಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಕರಾಟೆ ಪಟುಗಳು ಬಹುಮಾನ ಪಡೆದಿದ್ದಾರೆ. (ಎಡದಿಂದ ಕುಳಿತಿರುವವರು): ನೂರ್ ಮೊಹಮದ್, ರಜಿತ್ ರಾಜ್ ಅರಸ್, ಬಿ.ಎನ್.ಪೂರ್ವಿ, ಹೃತ್ವಿಕ್, ದಾನ್ವಿ, ಎಂ.ಆರ್.ಸಾಮ್ರಾಟ್, ರೋಹಿತ್, ಸಮರೀನ್, ರಿತಿಕ್ ಸಿಂಗ್ (ಮಂಡಿಯೂರಿ ಕುಳಿತಿರುವವರು ಎಡದಿಂದ): ಉನೇಷಾ ಹಮೀದ್ ಆಲ್ ಸೈಯದ್, ಮೋಹಿತ್ ಮೊನ್ನಪ್ಪ, ರೆನ್ಸಿ ಅಬ್ದುಲ್ ವಾಸಿಂ, ರೋಹನ್ ತಿಮ್ಮಯ್ಯ, ಎಸ್.ರಾಹುಲ್ (ನಿಂತಿರುವವರು ಎಡದಿಂದ): ಲಾಮಯ್ಯ ಹುಡಾ ಖಾನ್, ಫಾತಿಮಾ ತುಜ್ ಜಹಾರಾ, ಸೆನ್‌ಪೈ–ಮೋಹಿತ್ ಕೃಷ್ಣ, ಧೀರಜ್ ರಾವ್, ಸಿ.ಜಯಂತ್, ಪೂಜಾ, ಉನೈಮಾ ಹಮೀದ್ ಆಲ್ ಸೈಯದ್ ಚಿತ್ರದಲ್ಲಿದ್ದಾರೆ.

ಮೂಕ ಸ್ಪಂದನ ಅಭಿಯಾನದ ಪೋಸ್ಟರ್ ಬಿಡುಗಡೆ

ಪ್ರಾಣಿ ಪಕ್ಷಿ ಸಂಕುಲ ರಕ್ಷಣೆಗೆ ನಟ ಪ್ರಜ್ವಲ್ ದೇವರಾಜ್ ಕರೆ



ಮೈಸೂರಿನ ಚಾಮುಂಡಿಪುರಂನಲ್ಲಿ ಮೂಕ ಸ್ಪಂದನ ಅಭಿಯಾನದ ಪೋಸ್ಟರ್ ಅನ್ನು ಚಲನಚಿತ್ರ ನಟ ಪ್ರಜ್ವಲ್ ದೇವರಾಜ್ ಬಿಡುಗಡೆಗೊಳಿಸಿದರು.

ಮೈಸೂರು, ಮಾ. 6– ಮನುಷ್ಯನ ಒಡನಾಡಿಯಾಗಿರುವ ಪ್ರಾಣಿ–ಪಕ್ಷಿ ಜೀವ ಸಂಕುಲವನ್ನುಳಿಸಲು ಸಮಾಜದಲ್ಲಿರುವ ಸಹೃದಯಿ ನಾಗರಿಕರು ಮುಂದಾಗಬೇಕೆಂದು ಚಲನಚಿತ್ರ ನಟ ಪ್ರಜ್ವಲ್ ದೇವರಾಜ್ ಕರೆ ನೀಡಿದರು.

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಎರಡು ತಿಂಗಳ ಕಾಲ ಮೂಕ ಸ್ಪಂದನೆ 'ನೀರುಣಿಸಿ–ಜೀವವನ್ನುಳಿಸಿ, ಅಭಿಯೋಜನೆಯನ್ನು ಮೈಸೂರು ನಗರದಲ್ಲಿ ಹಮ್ಮಿಕೊಂಡಿದ್ದು, ನಗರದ ಚಾಮುಂಡಿಪುರಂನಲ್ಲಿರುವ ಟ್ರಸ್ಟ್ ಕಚೇರಿಯಲ್ಲಿ ಮೂಕ ಸ್ಪಂದನ ಅಭಿಯಾನದ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಬೇಸಿಗೆಯ ರಣಬಿಸಿಲಿನ ತಾಪಮಾನದ ತೀವ್ರತೆಯಿಂದಾಗಿ ಪ್ರಾಣಿ ಪಕ್ಷಿಸಂಕುಲ ತತ್ತರಿಸಿವೆ. ಕುಡಿಯುವ ನೀರು ಆಹಾರಕ್ಕಾಗಿ ಪರಿತಪಿಸುತ್ತವೆ. ಆದ್ದರಿಂದ ಪರಿಸರ ರಕ್ಷತಿ ರಕ್ಷಿತಃ ಪರಿಸರ ಸ್ನೇಹಿ ತಂಡ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಎರಡು ತಿಂಗಳ ಕಾಲ ಮೂಕ ಸ್ಪಂದನೆ ಎಂಬ 'ನೀರುಣಿಸಿ–ಜೀವವನ್ನುಳಿಸಿ' ಅಭಿಯಾನವನ್ನು ಮೈಸೂರು ನಗರದ ಸುತ್ತಮುತ್ತ ಪ್ರದೇಶಗಳಲ್ಲಿ ರೂಪಿಸುತ್ತಿರುವುದು ಉತ್ತಮವಾದ ಕೆಲಸ. ಪ್ರಾಣಿ ಪಕ್ಷಿಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುವ ಹಾದಿಯಲ್ಲಿರುತ್ತವೆ. ಜನವಸತಿ ಮತ್ತು ಜನಸಂಖ್ಯೆಗನುಗುಣವಾಗಿ ಮೊಬೈಲ್ ಮತ್ತು ಇತರೆ ತರಂಗದಿಂದ ಪಕ್ಷಿಗಳು ನಶಿಸಿ ಹೋಗುತ್ತಿವೆ. ಉಳಿದ ಪ್ರಾಣಿ–ಪಕ್ಷಿ ಸಂಕುಲ ತಿನ್ನಲು ಆಹಾರ ಮತ್ತು ಕುಡಿಯಲು ನೀರಿಗಾಗಿ ಪರಿತಪಿಸುವ ಕಾಲ ಇದಾಗಿದ್ದು, ಅವುಗಳ ರಕ್ಷಿಸಬೇಕಾದ್ದು ನಮ್ಮ ಕರ್ತವ್ಯ ಎಂದರು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಪರಿಸರ ಪ್ರೇಮಿ ಪ್ರದೀಪ್‌ಗೌಡ, ಅಮಿತ್ ಕುಮಾರ್, ಮಹಾನ್ ಶ್ರೇಯಸ್, ಸಚಿನ್ ನಾಯಕ್, ಹಾಗೂ ಇನ್ನಿತರರು ಹಾಜರಿದ್ದರು.

ಕವಿಗೋಷ್ಠಿ, ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಮಾ.6–ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಆಶ್ರಯದಲ್ಲಿ ಎಂ.ಬಿ.ಸಂತೋಷ್ ಅವರ ಹುಟ್ಟುಹಬ್ಬದ ಪ್ರಯುಕ್ತ ವಚನ ವೈವಿಧ್ಯ, 6ನೇ ಆಧುನಿಕ ವಚನಗಳ ಸಂಕಲನ, ಶ್ರೀಮತಿ ಶೋಭಾ ಅವರ ಮನದ ಹಾಯ್ಕುಗಳು, ಚೊಚ್ಚಲ ಹಾಯ್ಕುಗಳ ಸಂಕಲನ ಲೋಕಾರ್ಪಣೆ, ಕವಿಗೋಷ್ಠಿ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾ.9ರಂದು ಬೆಳಗ್ಗೆ 10 ಗಂಟೆಗೆ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಕಾರ್ಯಕ್ರಮದಲ್ಲಿ ಮಹಿಪಾಲ ರೆಡ್ಡಿ ಮುನ್ನೂರ್ ಅವರಿಗೆ 'ಕರುನಾಡ ಸಾಧನಾ ರತ್ನ' ಪ್ರಶಸ್ತಿ, ಡಾ.ಮಲ್ಲಿನಾಥ ಎಸ್.ತಳವಾರ ಅವರಿಗೆ 'ಕರುನಾಡ ಸಾಹಿತ್ಯ ರತ್ನ' ಪ್ರಶಸ್ತಿ, ಡಾ.ಸೋಮಶೇಖರ್ ಅವರಿಗೆ 'ವಿದ್ಯಾ ವಾರಿಧಿ' ಪ್ರಶಸ್ತಿ, ಶ್ರೀಮತಿ ಉಳುವಂಗಡ ಕಾವೇರಿ ಉದಯ ಅವರಿಗೆ 'ಬಹುಭಾಷಾ ಸಾಹಿತ್ಯ ಚೇತನ' ಪ್ರಶಸ್ತಿ, ಚಿ.ಹಿತೈಶ್ ಭೂಷಣ್, ರೋನಿತ್ ಟಿ.ಗಿರೀಶ್ ಅವರಿಗೆ 'ಬಾಲಶ್ರೀ' ಪ್ರಶಸ್ತಿ, ಕು.ನಾಗಸಿರಿ ಮತ್ತು ವಿ.ಭುವಂತ್ ಅವರಿಗೆ 'ಯುವಶ್ರೀ' ಪ್ರಶಸ್ತಿ ನೀಡಲಾಗುವುದು. ಮಾಹಿತಿಗೆ ಮೊ. 9886341957 ಸಂಪರ್ಕಿಸಬಹುದು.

ಇಂದಿನಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ

ಮೈಸೂರು,ಮಾ.6–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.7ರಿಂದ 31ರವರೆಗೆ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೊಜ್ಜು ನಿವಾರಣಾ ಸೂತ್ರಗಳು, ಪಂಚಕರ್ಮ, ಆಯುರ್ವೇದ, ಪ್ರಕೃತಿ ಚಿಕಿತ್ಸೆಯ ಜೀವನ ಶೈಲಿ, ಆಯುರ್ವೇದ ಚಿಕಿತ್ಸೆ, ಪ್ರಕೃತಿ ಚಿಕಿತ್ಸೆ, ವ್ಯಾಯಾಮ, ಯೋಗ, ಪ್ರಾಣಾಯಾಮ ಮತ್ತು ಧ್ಯಾನ ಒಳಗೊಂಡಿರುತ್ತದೆ. ಮಾಹಿತಿಗೆ ಮೊ. 9632000697, ದೂ. 0821–2548231 ಸಂಪರ್ಕಿಸಬಹುದು.

ಮೈಸೂರಲ್ಲಿ ಡಾ.ಅಗರ್ವಾಲ್ಸ್ ಐ ಹಾಸ್ಪಿಟಲ್‌ನ 3ನೆಯ ಶಾಖೆ ಆರಂಭ

ಶುಭ ಹಾರೈಸಿದ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್ ವತಿಯಿಂದ ಮೂರನೇ ಶಾಖೆಯನ್ನು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು, ಮಾ.6(ಜಿಎ)–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್ ವತಿಯಿಂದ ಮೂರನೇ ಶಾಖೆ ಆರಂಭಗೊಂಡಿದೆ.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಟ್ರಾಫಿಕ್ ವಿಭಾಗದ ಎಸಿಪಿ ಶಿವಶಂಕರ್, ಡಾ.ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಮುಖ್ಯ ಬ್ಯುಸಿನೆಸ್ ಆಫೀಸರ್ ಡಾ.ಅಶರ್ ಅಗರ್ವಾಲ್, ಪ್ರಾದೇಶಿಕ ವೈದ್ಯಕೀಯ ನಿರ್ದೇಶಕ ಡಾ.ಶ್ರೀನಿವಾಸನ್‌ರಾವ್ ಮತ್ತು ಜಯಲಕ್ಷ್ಮಿಪುರಂ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥರಾದ ಸರ್ವೀಸಸ್‌ನ ಡಾ.ಪವನ್ ಜೋಶಿ ಅವರು ಗುರುವಾರ ನೂತನ ಶಾಖೆಯನ್ನು ಉದ್ಘಾಟಿಸಿದರು.

ನಂತರ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ದೇಶದಲ್ಲಿ ಮೈಸೂರು ಸಂಸ್ಥಾನ ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದು, ಅದರಂತೆ ಆರೋಗ್ಯಕ್ಕೆ ಒತ್ತು ನೀಡಿದೆ. ಅದರಂತೆ 1902ರಲ್ಲಿ ಕಣ್ಣಿನ ಬಗ್ಗೆ ಕಾಳಜಿ ವಹಿಸುವ ನಿಟ್ಟಿನಲ್ಲಿ ಮೈಸೂರು ರಾಜ್ಯದಲ್ಲಿ ಪ್ರಥಮ ಕಣ್ಣಿನ ಆಸ್ಪತ್ರೆಯಾದ ಮಿಂಟೋ ಆರಂಭಿಸಲಾಯಿತು ಎಂದರು.

ದೃಷ್ಟಿ ಅತ್ಯಂತ ಅಮೂಲ್ಯವಾದದ್ದು. ಪ್ರತಿಯೊಬ್ಬರೂ ತಮ್ಮ ಕಣ್ಣಿನ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಯಾವುದೇ ಅನಾರೋಗ್ಯ ಕಂಡು ಬಂದರೂ ಮೊದಲು ವೈದ್ಯಕೀಯ ಚಿಕಿತ್ಸೆ ಪಡೆಯಬೇಕು. ಡಾ.ಅಗರ್ವಾಲ್ಸ್ ಐ ಹಾಸ್ಪಿಟಲ್ಸ್‌ನ ಪರಿಣತ ವೈದ್ಯರಿಂದ ಉನ್ನತ ಗುಣಮಟ್ಟದ ಕಣ್ಣಿನ ಆರೈಕೆಯನ್ನು ಸಮುದಾಯಕ್ಕೆ ಒದಗಿಸುವ ಮೂಲಕ ಈ ಕೇಂದ್ರವು ಉತ್ತಮ ಚಿಕಿತ್ಸೆ ನೀಡಲಿ ಎಂದ ಅವರು, ಸಿಎಸ್‌ಆರ್ ಚಟುವಟಿಕೆ ಮೂಲಕ ಈಗಾಗಲೇ ಸಂಸ್ಥೆ ಸಾಕಷ್ಟು ಕೆಲಸ ಮಾಡಿದೆ. ಅದನ್ನು ಹಾಡಿಗಳಿಗೂ ವಿಸ್ತರಿಸಿ ಅವರಿಗೂ ಉತ್ತಮ ಚಿಕಿತ್ಸೆ ನೀಡಿ ಎಂದು ಸಲಹೆ ನೀಡಿದರು.

ಡಾ.ಅಗರ್ವಾಲ್ಸ್ ಐ ಹಾಸ್ಪಿಟಲ್ಸ್‌ನ ಮುಖ್ಯ ಬ್ಯುಸಿನೆಸ್ ಅಧಿಕಾರಿ ಡಾ.ಅಶರ್ ಅಗರ್ವಾಲ್ ಮಾತನಾಡಿ, ನಮ್ಮ ಆಸ್ಪತ್ರೆಯೂ ವಿಶ್ವದರ್ಜೆಯ ಕಣ್ಣಿನ ಆರೈಕೆ ಸೇವೆಯನ್ನು ಒದಗಿಸುವ ಬದ್ಧತೆ ಹೊಂದಿದ್ದು, ಆಸ್ಪತ್ರೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಪರಿಣತ ನೇತ್ರಶಾಸ್ತ್ರಜ್ಞರ ತಂಡದ ಮೂಲಕ ಉನ್ನತ ಗುಣಮಟ್ಟದ ಆರೈಕೆಯನ್ನು ಒದಗಿಸಲು ನಾವು ನಿರಂತರ ಪ್ರಯತ್ನ ನಡೆಸುತ್ತೇವೆ. ಪರಿಣತಿ ಕೇಂದ್ರವಾಗುವುದು, ದೃಷ್ಟಿ ರಕ್ಷಣೆ ಮಾಡುವುದು ಮತ್ತು ಅಂಧತ್ವವನ್ನು ತಡೆಯುವುದು ನಮ್ಮ ಗುರಿಯಾಗಿದೆ ಎಂದರು.

ಮೈಸೂರಿನ ಡಾ.ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥ ಡಾ.ಪವನ್ ಜೋಶಿ ಕಣ್ಣಿನ ಬಗ್ಗೆ ಮಾತನಾಡಿ, ಸಮಾಜದ ವಿವಿಧ ಸ್ತರದ ಜನರಿಗೆ ಗುಣಮಟ್ಟದ ಮತ್ತು ಕೈಗೆಟುಕುವ ದರದಲ್ಲಿ ಕಣ್ಣಿನ ಆರೈಕೆ ಸೇವೆಯು ಸಿಗಲಿ ಎಂಬ ಉದ್ದೇಶದಿಂದ ಮೈಸೂರಿನಲ್ಲಿ ನಮ್ಮ ಸೇವೆ ವಿಸ್ತರಿಸುತ್ತಿದ್ದೇವೆ. ಜಯಲಕ್ಷ್ಮಿಪುರಂ ಹೊಸ ಕೇಂದ್ರದಲ್ಲಿ ಸುಧಾರಿತ ಸೌಲಭ್ಯಗಳಿವೆ. ಅತ್ಯಾಧುನಿಕ ಆಪರೇಶನ್ ಥಿಯೇಟರ್ ಮತ್ತು ಅತ್ಯಂತ ಅನುಭವಿ ನೇತ್ರಶಾಸ್ತ್ರಜ್ಞರ ತಂಡ, ಆಪ್ಟೋಮೆಟ್ರಿಸ್ಟ್‌ಗಳು ಮತ್ತು ರೋಗಿಯನ್ನು ಆರೈಕೆ ಮಾಡುವ ವೃತ್ತಿಪರರ ತಂಡವಿದೆ ಎಂದು ತಿಳಿಸಿದರು.

ವಿದ್ಯುತ್ ಲೈನ್‌ಗೆ ರೈತರ ಭೂಮಿ ಬಳಸಿಕೊಳ್ಳದಂತೆ ರೈತಪರ ಹೋರಾಟಗಾರರ ಆಗ್ರಹ

ಮೈಸೂರು, ಮಾ.6(ಎಂಟಿವೈ)– ಕಡಕೊಳದಿಂದ ಬಸ್ತಿಪುರದವರೆಗೆ 400 ಕೆವಿ ಹೈಟೆನ್ಷನ್ ಲೈನ್ ಅಳವಡಿಕೆಗೆ ರೈತರ ಭೂಮಿ ಬಳಸದೇ ಸರ್ಕಾರಿ ಹಾಗೂ ಅರಣ್ಯ ಇಲಾಖೆ ಭೂಮಿ ಬಳಸಿಕೊಳ್ಳುವಂತೆ ಚಾಮುಂಡೇಶ್ವರಿ ಮತ್ತು ಹುಣಸೂರು ವಿಧಾನಸಭಾ ಕ್ಷೇತ್ರದ ನೊಂದ ರೈತರು ಮತ್ತು ಜಮೀನು ಮಾಲೀಕರ ಹಿತರಕ್ಷಣಾ ಸಮಿತಿ ಗೌರವ ಸಲಹೆಗಾರ ಹಾಗೂ ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಎಂ. ಮೋಹನ್‌ಕುಮಾರ್‌ಗೌಡ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಟಿಸಿಎಲ್ ಅಧಿಕಾರಿಗಳು ರೈತರಿಂದ ಮಾಹಿತಿ ಪಡೆಯದೇ ಕಡಕೊಳದಿಂದ ಬಸ್ತಿಪುರದವರೆಗೆ 400 ಕೆವಿ ಸಾಮರ್ಥ್ಯದ ಹೈಟೆನ್ಷನ್ ಲೈನ್ ಅಳವಡಿಕೆಗೆ ಡ್ರೋನ್ ಮೂಲಕ ಸರ್ವೆ ನಡೆಸಿ, ಗುರುತು ಮಾಡಿದ್ದಾರೆ. ಗುರುತು ಮಾಡಿದ ಮಾರ್ಗದಲ್ಲಿ 1 ಅಥವಾ 2 ಎಕರೆ ಜಮೀನು ಹೊಂದಿರುವ ಸಣ್ಣ ರೈತರೇ ಹೆಚ್ಚಾಗಿದ್ದಾರೆ. ಹೈಟೆನ್ಷನ್ ಕಂಬ ನಿರ್ಮಾಣಕ್ಕೆ ಅರ್ಧದಷ್ಟು ಭೂಮಿ ಕಸಿದುಕೊಂಡಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಹೈ ಟೆನ್ಷನ್ ಲೈನ್ ಅಳವಡಿಕೆ ಮಾರ್ಗ ಬದಲಿಸಬೇಕು ಎಂದು ಒತ್ತಾಯಿಸಿದರು.

ಸರ್ವೆ ಮಾಡಿರುವ ಮಾರ್ಗದಲ್ಲಿರುವ ಜಮೀನಿನಲ್ಲಿ ತೆಂಗು, ಮಾವು, ಬಾಳೆ ಸೇರಿದಂತೆ ವಾಣಿಜ್ಯ ಬೆಳೆ ಬೆಳೆಯಲಾಗುತ್ತಿದೆ. ಸರ್ವೆ ಮಾಡಿರುವ ಭಾಗದಲ್ಲಿ ಲೈನ್ ಅಳವಡಿಸದೇ ಮಾರ್ಗ ಬದಲಿಸಿದರೆ 60–70 ರೈತರ ಭೂಮಿಗೆ ಹಾನಿಯಾಗುವುದಿಲ್ಲ. ಅಲ್ಲದೆ, ಆ ಭಾಗದಲ್ಲಿ ಸರ್ಕಾರಿ ಹಾಗೂ ಅರಣ್ಯ ಇಲಾಖೆಗೆ ಸೇರಿದ ಭೂಮಿ ಇರುವುದರಿಂದ ಕೆಪಿಟಿಸಿಎಲ್‌ಗೆ ವೆಚ್ಚವೂ ಕಡಿಮೆಯಾಗುತ್ತದೆ. ಪ್ರಸ್ತುತ ಗುರುತಿಸಿದ ಮಾರ್ಗದಲ್ಲಿ 180 ಬೃಹತ್ ಕಂಬ ಅಳವಡಿಸಬೇಕಾಗುತ್ತದೆ. ಮಾರ್ಗ ಬದಲಿಸಿದರೆ 70 ಕಂಬಗಳನ್ನು ಮಾತ್ರ ಅಳವಡಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ವೆ ಮಾಡಿರುವ ಸ್ಥಳದಲ್ಲಿ ವಿದ್ಯುತ್ ಲೈನ್ ಅಳವಡಿಸುವುದನ್ನು ವಿರೋಧಿಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುತ್ತಿದೆ. ಭಾಗದ ಜನಪ್ರತಿನಿಧಿಗಳೂ ಈ ರೈತರ ನೆರವಿಗೆ ಬರಬೇಕೆಂದು ಮನವಿ ಮಾಡಿದರು.

ರೈತರ ಜಮೀನುಗಳಲ್ಲೇ ಲೈನ್ ಎಳೆಯುವುದಾದರೆ ಕೆಪಿಟಿಸಿಎಲ್‌ನಲ್ಲಿ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ರೈತರ ಮಕ್ಕಳಿಗೆ ಖಾಯಂ ಉದ್ಯೋಗ ನೀಡಬೇಕು. ಜಮೀನಿಗೆ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಪರಿಹಾರ ನೀಡಬೇಕು. ಅಳವಡಿಸಿದ ಕಂಬದ ಸ್ಥಳಕ್ಕೆ ಮಾಸಿಕ ಬಾಡಿಗೆ ನೀಡಬೇಕು. ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಚಂದ್ರು, ಇನ್ನಿತರ ಪದಾಧಿಕಾರಿಗಳಾದ ಪುಟ್ಟಸ್ವಾಮಿಗೌಡ, ಭೈರೇಗೌಡ, ಜಯಶಂಕರ್ ಮೊದಲಾದವರು ಮತ್ತು ನೊಂದ ರೈತರು ಇದ್ದರು.

ಗಾಲ್ಫ್ ಕ್ಲಬ್‌ನಲ್ಲಿ ಅಕ್ರಮ ಕಟ್ಟಡ ನಿರ್ಮಾಣ; ಎಂಆರ್‌ಸಿಗೆ ಮೈಸೂರು ಪಾಲಿಕೆ ನೋಟಿಸ್ ಜಾರಿ



ಗಾಲ್ಫ್‌ಕ್ಲಬ್‌ನಲ್ಲಿ ನಿಯಮಾವಳಿ ಧಿಕ್ಕರಿಸಿ ನಿರ್ಮಾಣ ಮಾಡಲಾಗುತ್ತಿರುವ ಕಟ್ಟಡ.

ಮೈಸೂರು, ಮಾ.6– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ವ್ಯಾಪ್ತಿಯಲ್ಲಿ ಬರುವ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ)ನಲ್ಲಿ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 1ರ ವಲಯ ಆಯುಕ್ತರು ಎಂಆರ್‌ಸಿ ಆಡಳಿತಾಧಿಕಾರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಕಟ್ಟಡ ನವೀಕರಣ ಮತ್ತು ನಿರ್ಮಾಣ ಮಾಡಲು ಮೈಸೂರು ಮಹಾನಗರ ಪಾಲಿಕೆಯಿಂದ ಯಾವುದೇ ಅನುಮತಿಯನ್ನಾಗಲೀ, ನಕ್ಷೆ ಅನುಮೋದನೆಯನ್ನಾಗಲೀ ಮತ್ತು ಕಟ್ಟಡ ರಹದಾರಿ ಪಡೆಯದೇ ಹಳೇ ಕಟ್ಟಡವನ್ನು ನವೀಕರಿಸಿಕೊಂಡು, ಹೊಸದಾಗಿ ಕೆಲವು ಭಾಗಗಳನ್ನು ನಿರ್ಮಾಣ ಮಾಡುತ್ತಿರುವುದು ತೀವ್ರ ಗಂಭೀರ ವಿಷಯವಾಗಿದೆ ಎಂದು ನೋಟೀಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಹಾಗಾಗಿ ಈ ಪತ್ರ ತಲುಪಿದ ತಕ್ಷಣ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಿ, ನಗರಪಾಲಿಕೆಯಿಂದ ನಕ್ಷೆ ಮಂಜೂರು ಮಾಡಿಸಿಕೊಂಡು ಕಾಮಗಾರಿಯನ್ನು ಮುಂದುವರೆಸುವುದು. ತಪ್ಪಿದಲ್ಲಿ ನಗರಪಾಲಿಕೆ ವತಿಯಿಂದಲೇ ಈಗ ನಿರ್ಮಾಣವಾಗಿರುವ ಕಟ್ಟಡವನ್ನು ತೆರವುಗೊಳಿಸಿ, ಅದಕ್ಕೆ ತಗಲುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದಲೇ ವಸೂಲಿ ಮಾಡಲಾಗುವುದು. 1976 ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ ಸೆಕ್ಷನ್ 321ರ ಪ್ರಕಾರ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ನೋಟೀಸ್‌ನಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.03.2025 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025 ರಿಂದ 16.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ಮೈಸೂರು:** ರೋವರ್ಸ್ ಮತ್ತು ರೇಂಜರ್ಸ್‌ಗಳ ಸಮಾವೇಶ, ಉದ್ಘಾಟನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಚಲನಚಿತ್ರ ನಟ ಸುರೇಶ್‌ಹೆಬ್ಳೀಕರ್, ಸಹಾಯಕ ರಾಜ್ಯ ಆಯುಕ್ತ ಬಿ.ಕೆ.ಬಸವರಾಜು, ಜಿಲ್ಲಾ ಮುಖ್ಯ ಆಯುಕ್ತ ಪಿ.ವಿಶ್ವನಾಥ್, ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್, ಜಿಲ್ಲಾ ಖಜಾಂಚಿ ಡಾ.ಕೆ.ಬಿ.ಗುರುಮೂರ್ತಿ, ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಿವಲಿಂಗೇಗೌಡ, ಪ್ರಸಾರಾಂಗ ಮಾಜಿ ನಿರ್ದೇಶಕ ಪ್ರೊ.ಸಿ. ನಾಗಣ್ಣ, ಪ್ರಾಧ್ಯಾಪಕ ಪ್ರೊ.ಕೃಷ್ಣ ಹೊಂಬಾಳ್, ಎನ್‌ಐಇ ಸೊಸೈಟಿ ನಿರ್ದೇಶಕ ಡಾ.ಅಶೋಕ್‌ರಾವ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಂಯೋಜಕ ಜಿ.ಎಲ್.ತ್ರಿಪುರಾಂತಕ, ಪ್ರಾಧ್ಯಾಪಕ ಡಾ.ಹೆಚ್.ಜಿ.ಲಿಂಗರಾಜು, ಸ್ಥಳ: ಹೆಚ್.ಕೆಂಪೇಗೌಡ ಒಳಾಂಗಣ ಕ್ರೀಡಾಂಗಣ, ವಿವಿಸಿಇ ಆವರಣ, ಗೋಕುಲಂ 3ನೇ ಹಂತ, ಬೆಳಗ್ಗೆ 9.30ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ :** ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಪ್ರಾಸ್ತಾವಿಕ ನುಡಿ : ವಿಶ್ರಾಂತ ಕುಲಪತಿ ಪ್ರೊ. ಎಸ್.ಎಸ್. ಚಹಾಲ್, ಮುಖ್ಯ ಅತಿಥಿಗಳು : ಡಾ.ಪಿ.ಕೆ. ಚಕ್ರವರ್ತಿ, ಪ್ರೊ. ಹೆಚ್. ಶೇಖರ್ ಶೆಟ್ಟಿ, ಪ್ರೊ. ಜಿ.ಆರ್. ಜನಾರ್ಧನ್, ಪ್ರೊ. ರಾಜ್‌ಕುಮಾರ್ ಹೆಚ್. ಗರಂಪಲ್ಲಿ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ :** ಶ್ರೀ ಮನೆ ಮಂಚಮ್ಮ ದಂಡಿನಮಾರಮ್ಮ ಮತ್ತು ಬಿಸಿಲುಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ, ಕನ್ನಡ ವಿಭಾಗ, ಐಕ್ಯೂಎಸಿ :** ಸರಣಿ ಉಪನ್ಯಾಸ ಮಾಲಿಕೆ, ಅಲ್ಲಮನ ವಚನಗಳ ಚಿಂತನೆ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ಪ್ರೊ. ನರೇಂದ್ರ ಕುಮಾರ್ ಅವರಿಂದ ಅಂಬಿಗರ ಚೌಡಯ್ಯನ ವಚನಗಳಲ್ಲಿಯ ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಮಂಜು, ಸ್ಥಳ: ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು, ಬೆಳಗ್ಗೆ 10.30ಕ್ಕೆ.

■ **ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್‌ವಿರಾನ್‌ಮೆಂಟ್, ನವದೆಹಲಿ, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ :** ಕ್ಲೈಮೇಟ್ ರಿಸೈಲೆಂಟ್ ಸಿಟಿಸ್: ಅಡಾಪ್ಟಿವ್ ಅಂಡ್ ಮಿಟಿಗೇಟಿವ್ ಅಪ್ರೋಚಸ್ ಫಾರ್ ಎ ವಾರ್ಮಿಂಗ್ ಹ್ಯಾಬಿಟೇಟ್ ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ಆಲ್‌ಟೆಕ್ ಕನ್‌ಸೋರ್ಟಿಯಮ್ ಛೇರ್ಮನ್ ಡಾ. ಚಂದ್ರಶೇಖರ ಹರಿಹರನ್, ಮುಖ್ಯ ಅತಿಥಿಗಳು : ಪ್ರೋಗ್ರಾಮ್ ಡೈರೆಕ್ಟರ್ ರಜನೀಶ್ ಸರೀನ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೋಗ್ರಾಮ್ ಮ್ಯಾನೇಜರ್ ಮಿಟಾಶಿ ಸಿಂಗ್, ಸ್ಥಳ: ಪ್ರೊ.ಕೆ.ಎಸ್. ರಂಗಪ್ಪ ಸಭಾಂಗಣ, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮಧ್ಯಾಹ್ನ 12ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ, 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಕಲೀಂವುಲ್ಲ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ. ಎಸ್.ಕುಮಾರ್, ಎಂ.ಎ.ಶೋಭಾ, ವ್ಯಾಖ್ಯಾನ–ಡಾ.ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಶ್ರವಣ ದಿನದ ಸಂದೇಶ ಮತ್ತು ಮಹತ್ವ ಕುರಿತು ಡಾ. ಅಜಿತ್ ಕುಮಾರ್ ಮತ್ತು ವಿಶ್ವ ಬೊಜ್ಜುತನ ಜಾಗೃತಿ ದಿನದ ಸಂದರ್ಭದಲ್ಲಿ ಬೊಜ್ಜುತನ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.35 ದೇವರನಾಮ, 12.45 ಕಾದಂಬರಿ ವಿಹಾರ –ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ರಾಷ್ಟ್ರೀಯ ಜೇನುಸಾಕಣೆ ಹಾಗೂ ಜೇನು ಮಿಷನ್ ಕುರಿತು ಮಾಹಿತಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ರೂಪಕ, ಸಹನೆಯ ದೀಪ, ರಚನೆ–ಕಲಾವತಿ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಮನೋವಿಜ್ಞಾನ ಅಂದರೆ ಸೈಕಾಲಜಿ ವಿಷಯದಲ್ಲಿ ಇರುವ ಅಧ್ಯಯನ ಹಾಗೂ ವೃತ್ತಿಪರ ಅವಕಾಶಗಳು ಕುರಿತು ಹುಣಸೂರಿನ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಮಂಜು ಹೆಚ್.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಸಹಜ ಕೃಷಿಯ ಪ್ರಾಮುಖ್ಯತೆ ಕುರಿತು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯ ಸಹಜ ಕೃಷಿಕ ಶಿವನಂಜಯ್ಯ ಬಾಳೆಕಾಯಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ–ಎಐ ತಂತ್ರಜ್ಞಾನದ ಸಾಧಕ–ಬಾದಕಗಳ ಕುರಿತು ಖ್ಯಾತ ವಿಜ್ಞಾನ ಬರಹಗಾರ ಕೊಳ್ಳೇಗಾಲ ಶರ್ಮ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು :** ದತ್ತಿ ಕಾರ್ಯಕ್ರಮ, ಸಾಹಿತಿ ಪ್ರೊ. ಕೆ. ಅನಂತರಾಮು ಅವರಿಂದ ವಚನ ಸಾಹಿತ್ಯ ಮತ್ತು ಮಾನವೀಯ ಮೌಲ್ಯಗಳು ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಉಪಸ್ಥಿತರು : ಪ್ರಾಂಶುಪಾಲ ಡಾ. ರೇಚಣ್ಣ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮಧ್ಯಾಹ್ನ 2.30ಕ್ಕೆ.

■ **ಭಾರತ ಸರ್ಕಾರ ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ, ಆಕಾಶವಾಣಿ :** ಮೈಸೂರು ಆಕಾಶವಾಣಿ 90, ನುಡಿ ನಾದ ಸಂಗಮ, ಉದ್ಘಾಟನೆ : ಆಕಾಶವಾಣಿ ಮಹಾನಿರ್ದೇಶಕ ಡಾ. ಪ್ರಜ್ಞಾ ಪಾಲೀವಾಲ್ ಗೌರ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು : ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಹಿರಿಯ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಸಹಾಯಕ ನಿರ್ದೇಶಕ ಟಿ.ವಿ. ವಿದ್ಯಾಶಂಕರ್, ಸಹಾಯಕ ಅಭಿಯಂತರ ಪಿ. ಆನಂದನ್, ಅಧ್ಯಕ್ಷತೆ : ಆಕಾಶವಾಣಿ ಮುಖ್ಯಸ್ಥ ಎಸ್.ಎಸ್. ಉಮೇಶ್, ಸ್ಥಳ: ಆಕಾಶವಾಣಿ, ಯಾದವಗಿರಿ, ಸಂಜೆ 5

■ **ಗಾನಭಾರತೀ :** ತರುಣಭಾರತಿ ಕಾರ್ಯಕ್ರಮ, ವಿದುಷಿ ಕುಶಲಾ ಅವರಿಂದ ಹಿಂದೂಸ್ಥಾನಿ ಗಾಯನ, ವಿದ್ವಾನ್ ಡಿ.ಎನ್. ಇಂದುಕುಮಾರ್–ಹಾರ್ಮೋನಿಯಂ, ವಿದ್ವಾನ್ ಪರಮೇಶ್ ಹೆಗ್ಡೆ–ತಬಲಾ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಧ್ವಜಾರೋಹಣ, ರಾತ್ರಿ ಸಿಂಹವಾಸನಾರೋಹಣ, ಸ್ಥಳ: ದೇವಸ್ಥಾನ, ಹಳೇ ಸಂತೇಪೇಟೆ.

ಕ್ಯಾತಮಾರನಹಳ್ಳಿ ಜಾತ್ರಾ ಮಹೋತ್ಸವ

ನಾಲ್ಕನೆ ದಿನ ನಿಶಾನೆ ಮರಕ್ಕೆ ಪೂಜೆ; ಹುಲಿ ವೇಷ ತೊಟ್ಟು ಭರ್ಜರಿ ಕುಣಿತ

ಮೈಸೂರು, ಮಾ.6(ಎಂಕೆ)- ಗ್ರಾಮೀಣ ಸಂಸ್ಕೃತಿಯ ಪರಂಪರೆಯ ಪ್ರತೀಕವಾಗಿರುವ 10 ದಿನಗಳ ಕ್ಯಾತಮಾರನಹಳ್ಳಿ ಹುಲಿಯಮ್ಮ ಜಾತ್ರಾ ಮಹೋತ್ಸವದ 4ನೇ ದಿನವಾದ ಗುರುವಾರ ಜಾತ್ರೆಯ ವಿಶೇಷತೆಯಾದ ನಿಶಾನೆ ಮರವನ್ನು ನಿಲ್ಲಿಸಿ, ಪೂಜೆ ಸಲ್ಲಿಸುವ ಹಾಗೂ ಹುಲಿ ವೇಷ ತೊಟ್ಟು ಕುಣಿದು ಸಂಭ್ರಮಿಸುವ ಕಾರ್ಯಕ್ರಮಗಳು ಅತ್ಯಂತ ವೈಭವಯುತವಾಗಿ ನಡೆದವು.

ಮಧ್ಯಾಹ್ನದ ವೇಳೆಗೆ ಜಾತ್ರಾ ಮಹೋತ್ಸವಕ್ಕೆ ಮಧುವನದಿಂದ ತಂದಿದ್ದ ಅಡಿಕೆ ಮರಕ್ಕೆ (ಈ ಮರವನ್ನು ಸಂಪ್ರದಾಯದಂತೆ ನಿಶಾನಿ ಮರ ಎಂತಲೇ ಕರೆಯುತ್ತಾರೆ) ವಿಶೇಷ ಪೂಜೆ ಸಲ್ಲಿಸಿ, ಸುಣ್ಣ ಬಣ್ಣ ಬಳಿದು ಹಾಗೂ ವಿಶೇಷ ದೀಪಾಲಂಕಾರದಿಂದ ಸಿಂಗರಿಸಿ ದೇವಾಲಯದ ಮುಂಭಾಗದಲ್ಲಿ ನೆಟ್ಟಗೆ ನಿಲ್ಲಿಸಲಾಯಿತು.

ಸುಮಾರು 65-70 ಅಡಿ ಎತ್ತರದ ನಿಶಾನೆ ಮರವನ್ನು ನಿಲ್ಲಿಸುವಾಗ ಕೈ ಜೋಡಿಸಿದ ಅಪಾರ ಭಕ್ತ ಸಮೂಹ ಹುಲಿಯಮ್ಮ ದೇವಿಗೆ ಜೈಕಾರ ಕೂಗುತ್ತಾ ಹಬ್ಬದ ಸಂಭ್ರಮದಲ್ಲಿ ಮಿಂದೆದ್ದರು. ನಿಶಾನೆ ಮರವು ಹುಲಿಯಮ್ಮ ಜಾತ್ರಾ ಮಹೋತ್ಸವ ಕಳಸವಾಗಿದ್ದು, ಶ್ರದ್ಧಾ-ಭಕ್ತಿಯಿಂದ ಮರಕ್ಕೆ ಪೂಜೆ ಸಲ್ಲಿಸಿ, ನಿಲ್ಲಿಸಲಾಗುವುದು. ಹತ್ತು ದಿನಗಳ ಜಾತ್ರೆಯಲ್ಲಿ ನಿಶಾನೆ ಮರ ನಿಲ್ಲಿಸುವುದು ವಿಶೇಷವಾಗಿದೆ ಎಂದು ಗ್ರಾಮದ ಮುಖಂಡ ನಾರಾಯಣ ಲೋಲಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಕ್ಯಾತಮಾರನಹಳ್ಳಿ ಹುಲಿಯಮ್ಮ ಜಾತ್ರಾ ಮಹೋತ್ಸವದಲ್ಲಿ ನಿಶಾನೆ ಮರ ನಿಲ್ಲಿಸುತ್ತಿರುವ ಭಕ್ತ ಸಮೂಹವನ್ನು ಕಾಣಬಹುದು.

ಕುಣಿದು ಕುಪ್ಪಳಿಸಿದ ಭಕ್ತ ಸಮೂಹ: ಸಂಜೆ 7.30 ರಿಂದ 8.30 ಗಂಟೆಯವರೆಗೆ ತಮಟೆ ಸದ್ದಿಗೆ ಕಡ್ಡಿ ಕುಣಿತ ನಡೆಯಿತು. ಇದರಲ್ಲಿ ಚಿಕ್ಕ ವಯಸ್ಸಿನ ಮಕ್ಕಳು ಸೇರಿದಂತೆ ಹಿರಿಯರ ತನಕ ಕುಣಿತದಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಹಾಗೆಯೇ ನಾಳೆ (ಮಾ.7) ದೇವಾಲಯದ ಆವರಣದಲ್ಲಿ ತಮಟೆ ವಾದ್ಯದೊಂದಿಗೆ ಕುಣಿತ ಪ್ರಾರಂಭವಾಗಲಿದ್ದು, ರಾತ್ರಿ 8 ಗಂಟೆಯಿಂದ 9ರ ತನಕ ಮಕ್ಕಳು ಕೋಲಾಟದೊಂದಿಗೆ ಕುಣಿಯುತ್ತಾರೆ. 9 ಗಂಟೆಯಿಂದ ರಾತ್ರಿ 12ರ ತನಕ ದೊಡ್ಡವರು ಕೋಲಾಟದೊಂದಿಗೆ ವಿವಿಧ ವೇಷಭೂಷಣ ಧರಿಸಿ ಹೆಜ್ಜೆ ಹಾಕಲಿದ್ದು, ಕುಣಿತವನ್ನು ನೋಡಲು ಗ್ರಾಮದ ಮಕ್ಕಳು, ಹೆಂಗಸರು, ರಾತ್ರಿ 11ರ ತನಕ ದೇವಸ್ಥಾನಕ್ಕೆ ಆಗಮಿಸಲಿದ್ದಾರೆ.

20 ಜೋಡಿ ಕುಸ್ತಿ ಪಂದ್ಯಾವಳಿ...!

ಕ್ಯಾತಮಾರನಹಳ್ಳಿ ಗ್ರಾಮ ದೇವತೆ ಹುಲಿಯಮ್ಮ ತಾಯಿಯ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.11 ರಂದು 20 ಜೋಡಿಗಳ ನಾಡಕುಸ್ತಿ ಪಂದ್ಯಾವಳಿ ನಡೆಯಲಿದೆ. ಪಂದ್ಯಾವಳಿಯಲ್ಲಿ ರಾಷ್ಟ್ರಮಟ್ಟದ ಮಹಿಳಾ ಕುಸ್ತಿ ಪಟುಗಳಾದ ಪಲ್ಲವಿ, ಸಂಜನಾ, ಯೋಗೇಶ್ವರಿ ಹಾಗೂ ಪ್ರೀತಿ ಗೆಲುವಿಗಾಗಿ ಸೆಣಸಲಿದ್ದಾರೆ. ಹಾಗೆಯೇ ಘಟಾನುಘಟಿ ಪೈಲ್ವಾನರನ್ನೊಳಗೊಂಡ ಐದು ಜೋಡಿ ಕುಸ್ತಿ ನಡೆಯಲಿದೆ ಎಂದು ದೇವಸ್ಥಾನದ ಅರ್ಚಕರೂ ಆದ ಹಿರಿಯ ರಾಷ್ಟ್ರಮಟ್ಟದ ಕುಸ್ತಿ ಪೈಲ್ವಾನ್ ಕೃಷ್ಣ ತಿಳಿಸಿದರು.

ಸ್ಕೂಟರ್ ಚಾಲನೆ ತರಬೇತಿ ವೇಳೆ ಶುಶ್ರೂಷಕಿ ಸರ ಕಳವು

ಮೈಸೂರು, ಮಾ.6(ಎಸ್‌ಬಿಡಿ)- ಸ್ಕೂಟರ್ ಚಾಲನೆ ಕಲಿಯುತ್ತಿದ್ದ ಶುಶ್ರೂಷಕಿಯ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿರುವ ಘಟನೆ ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ನಡೆದಿದೆ.

ಕುಂಬಾರಕೊಪ್ಪಲು ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಯಲಕ್ಷ್ಮೀ ಅವರ ಮಾಂಗಲ್ಯ ಸರದ ಒಂದು ಭಾಗ(20 ಗ್ರಾಂ) ಕಳ್ಳನ ಪಾಲಾಗಿದ್ದು, ಘಟನೆ ವೇಳೆ ಅವರ ಕುತ್ತಿಗೆಗೆ ಗಾಯವಾಗಿದೆ.

ಮನೆಯಿಂದ ಆಸ್ಪತ್ರೆಗೆ ಆಟೋದಲ್ಲಿ ಓಡಾಡುವುದರಿಂದ ಖರ್ಚು ಹೆಚ್ಚಾಗುತ್ತಿದೆ ಎಂದು ಜಯಲಕ್ಷ್ಮೀ ಅವರು ಸ್ಕೂಟರ್ ಚಾಲನೆ ಕಲಿಯಲು ನಿರ್ಧರಿಸಿದ್ದರು. ಹಾಗೆಯೇ ಹೆಬ್ಬಾಳದಲ್ಲಿರುವ ಮಹಿಳಾ ತರಬೇತುದಾರೊಬ್ಬರ ಬಳಿ ತಿಂಗಳಿಂದ ಸ್ಕೂಟರ್ ಚಾಲನೆ ಕಲಿಯುತ್ತಿದ್ದರು. ಒಬ್ಬರೇ ಸ್ಕೂಟರ್ ಓಡಿಸುವುದನ್ನು ಅಭ್ಯಾಸ ಮಾಡಿಕೊಳ್ಳಲೆಂದು ಮಾ.4ರಂದು ಸಂಜೆ ಸುಬ್ರಮಣ್ಯನಗರದ ಹೈಟೆನ್ಷನ್ ಮಾರ್ಗದ ಪಾರ್ಕ್ ಬಳಿ ಬಂದಿದ್ದರು.

ಜಯಲಕ್ಷ್ಮೀ ಅವರು ನಿಧಾನವಾಗಿ ಸ್ಕೂಟರ್ ಓಡಿಸುವುದನ್ನು ಯುವಕನೊಬ್ಬ ಗಮನಿಸುತ್ತಿದ್ದ. ಆ ವೇಳೆ ತನ್ನ ಸ್ಕೂಟರ್‌ನಲ್ಲಿ ಪಾರ್ಕ್ ಅನ್ನು ಎರಡು ಸುತ್ತು ಹಾಕಿ, ಹೆಚ್ಚು ಜನ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡ. ಬಳಿಕ ಜಯಲಕ್ಷ್ಮೀ ಅವರ ಸ್ಕೂಟರ್ ಹಿಂಬಾಲಿಸಿ, ಏಕಾಏಕಿ ಅವರ ಮಾಂಗಲ್ಯ ಸರ ಕಿತ್ತುಕೊಳ್ಳಲು ಯತ್ನಿಸಿದ. ಆಗ ಜಯಲಕ್ಷ್ಮೀ ಸರವನ್ನು ಬಿಗಿಯಾಗಿ ಹಿಡಿದುಕೊಂಡು ಕಿರುಚಿಕೊಂಡರು. ಆದರೂ ಬಿಡದ ಖದೀಮ, ಸರವನ್ನು ಬಲವಾಗಿ ಎಳೆದಿದ್ದರಿಂದ ತುಂಡಾಗಿ ಒಂದು ಭಾಗ ಆತನ ಕೈಸೇರಿದೆ. ಬಳಿಕ ಆತ ತನ್ನ ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾನೆ. ಕಳ್ಳಸರ ಕಿತ್ತುಕೊಳ್ಳುವ ವೇಳೆ ಜಯಲಕ್ಷ್ಮೀ ಅವರ ಕುತ್ತಿಗೆಗೆ ಗಾಯವಾಗಿದೆ. ಅಲ್ಲದೆ ಆ ವೇಳೆ ಸ್ಕೂಟರ್ ಸಹಿತ ಕೆಳಗೆ ಬಿದ್ದು ಪೆಟ್ಟಾಗಿದೆ.

ಈ ಸಂಬಂಧ ಜಯಲಕ್ಷ್ಮೀ ಅವರು ನೀಡಿದ ದೂರಿನನ್ವಯ ಹೆಬ್ಬಾಳು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಖದೀಮನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಪಾರ್ಕ್ ಸಂಪರ್ಕಿಸುವ ಎಲ್ಲಾ ಮಾರ್ಗಗಳಲ್ಲಿ ಅಳವಡಿಸಿರುವ ಸಿಸಿ ಟಿವಿ ಕ್ಯಾಮರಾಗಳ ಪರಿಶೀಲನೆ ನಡೆಸಿದ್ದಾರೆ.

ನಕಲಿ ಕೀ ಬಳಸಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ನಗದು ದರೋಡೆ

ಮೈಸೂರು, ಮಾ.6(ಎಸ್‌ಬಿಡಿ)- ಮನೆಯಲ್ಲಿ ಯಾರೂ ಇಲ್ಲದ ವೇಳೆ ನಕಲಿ ಕೀ ಬಳಸಿ, ಲಕ್ಷಾಂತರ ರೂ. ನಗದು ಹಾಗೂ ಚಿನ್ನಾಭರಣ ದೋಚಿರುವ ಘಟನೆ ಮೈಸೂರಿನ ನಂದಿನಿ ಲೇಔಟ್‌ನಲ್ಲಿ ನಡೆದಿದೆ. ಇಲ್ಲಿನ ಮೊದಲ ಹಂತದ ನಿವಾಸಿ, ಮಾಯಾಂಗ ಅವರ ಮನೆಗೆ ನುಗ್ಗಿರುವ ಖದೀಮರು 3.50 ಲಕ್ಷ ರೂ. ನಗದು ಹಾಗೂ ಸುಮಾರು 25 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ್ದಾರೆ.

ಮಾಯಾಂಗ ಅವರು ಪತ್ನಿ ಹಾಗೂ ಪುತ್ರನೊಂದಿಗೆ ಮಾ.1ರಂದು ಕಾರ್ಯಕ್ರಮ ನಿಮಿತ್ತ ಮಂಡ್ಯಕ್ಕೆ ಹೋಗಿದ್ದರು. ಅಲ್ಲಿಂದ ತಿ.ನರಸೀಪುರ ತಾಲೂಕು ಮೇದನಿ ಗ್ರಾಮಕ್ಕೆ ತೆರಳಿ, ಅಲ್ಲಿಯೇ ತಂಗಿದ್ದರು. ಮರುದಿನ ಸಂಜೆ ಮನೆಗೆ ವಾಪಸ್ ಬಂದಾಗ ವಾರ್ಡೋಬ್ ಬಾಗಿಲು ಸ್ವಲ್ಪ ತೆರೆದಿತ್ತು. ಆತಂಕದಿಂದ ಪರಿಶೀಲಿಸಿದಾಗ ಅದರದಲ್ಲಿದ್ದ 3 ಲಕ್ಷ ರೂ. ನಗದು ಹಾಗೂ ಒಂದು ಜೊತೆ ಓಲೆ, ಚಿನ್ನದ ಸರ, ಬ್ರೈಸ್ ಲೈಟ್ ಸೇರಿದಂತೆ ಸುಮಾರು 25 ಗ್ರಾಂ ತೂಕದ ಚಿನ್ನಾಭರಣ ಇರಲಿಲ್ಲ. ಅಲ್ಲದೆ ಮತ್ತೊಂದು ಕಬ್ಬಿಣದ ಬೀರುವಿನ ಲಾಕರ್‌ನಲ್ಲಿಟ್ಟಿದ್ದ 50 ಸಾವಿರ ನಗದು ಕಳುವಾಗಿತ್ತು.

ಆದರೆ ಮನೆಯ ಮುಂಬಾಗಿಲು ಹಾಗೂ ಹಿಂಬಾಗಿಲಿಗೆ ಹಾಕಿದ್ದ ಬೀಗಗಳಿಗೆ ಯಾವುದೇ ಹಾನಿಯಾಗಿರಲಿಲ್ಲ. ಅಂದರೆ ಖದೀಮರು ಹೊಂಚು ಹಾಕಿ ನಕಲಿ ಕೀ ಮೂಲಕ ಮನೆಯೊಳಗೆ ನುಗ್ಗಿ ಕಳ್ಳತನ ಮಾಡಿದ್ದಾರೆ. ಬಳಿಕ ಅದೇ ಅದೇ ಕೀಯಿಂದ ಬೀಗ ಹಾಕಿ, ಪರಾರಿಯಾಗಿರಬಹುದು ಎಂದು ಶಂಕಿಸಲಾಗಿದೆ. ಈ ನಿಗೂಢ ಕಳ್ಳತನ ಸಂಬಂಧ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : ಮದುವೆ ಆಗ್ತಾ ಇದೆಯಂತೆ, ಏನಪ್ಪಾ ಬಹಳ ಖುಷಿಯಾಗಿರಬೇಕು ಅಲ್ವಾ!

ಮತ್ತೊಬ್ಬ ಗೆಳೆಯ : ಚಿನ್ನದಂತ ಹೆಂಡ್ತಿ ಸಿಕ್ಕರೆ ಮನೆಯಿಂದ ಹೊರಗೆ ಹೋಗೋಕೆ ಬೇಜಾರು, ಚಿನ್ನ ಕೇಳುವ ಹೆಂಡ್ತಿ ಸಿಕ್ಕರೆ ಹೊರಗಡೆಯಿಂದ ಮನೆಗೆ ಹೋಗೋಕೆ ಬೇಜಾರು... ಯೋಚ್ನೆ ಮಾಡ್ತಾ ಇದ್ದೀನಿ...

ಮೈಸೂರು ಮಿತ್ರ

ಶುಕ್ರವಾರ, 7 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನೂರು ಮನಸ್ಸುಗಳ ನೋಯಿಸಿ, ಹಚ್ಚಿದರೇನು ದೇವರ ಮುಂದೆ ದೀಪ, ತಡೆಯುವುದೇನು ಅದು ನೊಂದ, ಮನಸ್ಸುಗಳು ನೀಡುವ ಶಾಪ...!!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಯಿ ಬೊಗಳಿದರೆ ಭೂಲೋಕ ಹಾಳಾಗುತ್ತಾ

ನಿಮ್ಮ ಪತ್ರಗಳು

■ ಮೈಸೂರು ವಿವಿ ಕುಲಪತಿಗಳ ನಿವಾಸದ ಮುಂಭಾಗ ಬೀಳುವ ಹಂತದಲ್ಲಿರುವ ಬಸ್ ನಿಲ್ದಾಣಗಳು



ಮಾನ್ಯರೆ,

ಮೈಸೂರಿನ ರಾಮಸ್ವಾಮಿ ಸರ್ಕಲ್ ಬಳಿ ಕುಲಪತಿಗಳ ನಿವಾಸದ ಮುಂಭಾಗ ಹುಣಸೂರಿನ ಕಡೆಗೆ ಹೋಗುವ ರಸ್ತೆಯಲ್ಲಿ ಮೂರು ಬಸ್ ನಿಲ್ದಾಣಗಳು ಇವೆ. ಈ ನಿಲ್ದಾಣಗಳು ಬೀಳುವ ಹಂತದಲ್ಲಿವೆ. ಇವುಗಳು ಸಾರ್ವಜನಿಕರ ಹಣ ಪೋಲಾಗಿರುವುದಕ್ಕೆ ಒಂದು ಜ್ವಲಂತ ನಿದರ್ಶನ. ಈ ಬಸ್ ನಿಲ್ದಾಣದಲ್ಲಿ ಪ್ರತಿದಿನ ನೂರಾರು ವಿದ್ಯಾರ್ಥಿಗಳು, ಪ್ರಯಾಣಿಕರು ಕಾಯುತ್ತಿರುತ್ತಾರೆ. ಒಂದು ನಿಲ್ದಾಣದ ಬೋರ್ಡುಗಳೆಲ್ಲ ಹಾಳಾಗಿ ನೇತಾಡುತ್ತಿದ್ದು, ಅಪಾಯಕ್ಕೆ ಆಹ್ವಾನ ನೀಡುವಂತಿದೆ.

ಮೈಸೂರು ಅರಮನೆಗಳ ನಗರ, ಸ್ವಚ್ಛ ನಗರ ಎಂದು ಹೇಳಲು ನಮಗೆ ನಾಚಿಕೆಯಾಗುತ್ತದೆ. ಸಾರ್ವಜನಿಕರಿಗೆ ಕಾಣುವಂತ ಇಂತಹ ಲೋಪದೋಷಗಳು ಅಧಿಕಾರಿಗಳಿಗಾಗಲೀ, ಸಂಬಂಧಪಟ್ಟವರಿಗಾಗಲೀ ಏಕೆ ಕಾಣುವುದಿಲ್ಲ ಎಂಬ ಪ್ರಶ್ನೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದನ್ನು ಗಮನಿಸಿ ಮುಂದೆ ಆಗುವ ಅನಾಹುತ ತಪ್ಪಿಸಬೇಕಾಗಿ ಈ ಮೂಲಕ ಮನವಿ. **–ಮೈಕ್ ಪ್ರಕಾಶ್, ಪ್ರಚಾರಕರು**

■ ಒಂಬತ್ತು ವಿಶ್ವವಿದ್ಯಾನಿಲಯಗಳನ್ನು ಮುಚ್ಚುವ ನಿರ್ಧಾರ ಕೈಬಿಡಲು ಮನವಿ

ಮಾನ್ಯರೆ,

ರಾಜ್ಯ ಸರ್ಕಾರ ಹಿಂದಿನ ಸರ್ಕಾರದ ಅವಧಿಯಲ್ಲಿ ಆರಂಭಿಸಿದ್ದ ಒಂಭತ್ತು ವಿಶ್ವವಿದ್ಯಾನಿಲಯಗಳನ್ನು ಮುಚ್ಚಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಲ್ಲು ಹಾಕಲು ಮುಂದಾಗಿರುವುದು ಸರಿಯಲ್ಲ. ಹಿಂದಿನ ಸರ್ಕಾರ 9 ವಿವಿಗಳನ್ನು ಆರಂಭಿಸಿ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿತ್ತು. ಆದರೆ ಇಂದಿನ ಸರ್ಕಾರ ವಿವಿಧ ಕಾರಣಗಳನ್ನು ನೀಡಿ ವಿಶ್ವವಿದ್ಯಾನಿಲಯಗಳನ್ನು ಮುಚ್ಚಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ. ಏಕೆಂದರೆ ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಇದರಿಂದ ತೊಂದರೆಯಾಗಲಿದೆ. ಅದರಲ್ಲೂ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ತೊಡಕಾಗಲಿದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಸ್ಥಳೀಯ ವಿಶ್ವವಿದ್ಯಾನಿಲಯಗಳಿರುವುದು ಸೂಕ್ತವಾಗಿವೆ. ಗ್ರಾಮೀಣ ಭಾಗದ ಜನರು ತಮ್ಮ ಹೆಣ್ಣು ಮಕ್ಕಳು ಉನ್ನತ ಶಿಕ್ಷಣಕ್ಕೆ ಹೊರಗೆ ಕಳುಹಿಸುವುದಕ್ಕೆ ಬಯಸುವುದಿಲ್ಲ.

ಕೆಲ ಬಡ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಈಗಿರುವ ವಿವಿ ಗಳನ್ನು ಮುಚ್ಚಿದರೆ ಅವರುಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಮುಚ್ಚಲು ಹೊರಟಿರುವ ವಿಶ್ವವಿದ್ಯಾನಿಯಕ್ಕೆ ಹಂತ ಹಂತವಾಗಿ ಮೂಲಭೂತ ಸೌಕರ್ಯ ಗಳನ್ನು ನೀಡಿ, ಈಗಿರುವ ವಿಶ್ವವಿದ್ಯಾನಿಲಯಗಳನ್ನು ಮುಚ್ಚದೆ ಹೆಣ್ಣು ಮಕ್ಕಳು ಮತ್ತು ಬಡ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕು. ಈ ವಿಚಾರವಾಗಿ ಗ್ರಾಮೀಣ ಪ್ರದೇಶದ ಜನರ ಸಂಕಷ್ಟದ ಬಗ್ಗೆ ಅರಿತಿರುವ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಿ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳ ಹಿತ ಕಾಯಬೇಕಾಗಿದೆ.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಪಾರ್ಕ್‌ಗಳಲ್ಲಿ ಬೆಳಗ್ಗೆ 6.30ಕ್ಕೆ ಲೈಟ್ ಆಫ್ ಮಾಡುವ ವ್ಯವಸ್ಥೆ ಮಾಡಲಿ



ಮಾನ್ಯರೆ,

ಮೈಸೂರಿನಲ್ಲಿ ಬಹುತೇಕ ಪಾರ್ಕು ಮತ್ತು ರಸ್ತೆ ಬದಿಯ (ಸ್ಟ್ರೀಟ್ ಲೈಟ್) ದೀಪಗಳನ್ನು ಬೆಳಿಗ್ಗೆ 6 ಗಂಟೆಗೆ ಮೊದಲೇ ಆಫ್ ಮಾಡುತ್ತಾರೆ. ಇದು ಬೆಳಗ್ಗೆ ಎದ್ದು ಪಾರ್ಕ್‌ಗಳಲ್ಲಿ ವಾಕ್ ಮಾಡುವವರಿಗೆ ಅದರಲ್ಲೂ ವಿಶೇಷವಾಗಿ ಹಿರಿಯ ನಾಗರಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಕಾರಣ ಈ ದಿನಗಳಲ್ಲಿ ಸೂರ್ಯ ಉದಯವಾಗುವುದೇ ಬೆಳಿಗ್ಗೆ 6.45ಕ್ಕೆ. ಬಹುತೇಕ ಹಿರಿಯ ನಾಗರಿಕರು ಬೆಳಗ್ಗೆ 5 ಗಂಟೆಯ ಸುಮಾರಿಗೆ ವಾಕ್ ಹೋಗುವ ಅಭ್ಯಾಸ ಇದೆ. ಇನ್ನೂ ಕತ್ತಲೆ ಇರುವಾಗಲೇ ಪಾರ್ಕ್‌ಗಳ ಲೈಟ್‌ಗಳನ್ನು ಆಫ್ ಮಾಡುವುದರಿಂದ ಹಿರಿಯ ನಾಗರಿಕರು ಕತ್ತಲೆಯಲ್ಲಿ ವಾಕ್ ಮಾಡುವುದಾದರೂ ಹೇಗೆ?

ಇತ್ತೀಚೆಗೆ ಮೈಸೂರಿನ ಶ್ರೀರಾಂಪುರದ ಶಿವನ ದೇವಸ್ಥಾನದ ಎದುರಿನ ಪಾರ್ಕ್‌ನಲ್ಲಿ ವಾಕ್ ಮಾಡುತ್ತಿದ್ದ ಹಿರಿಯ ನಾಗರಿಕರೊಬ್ಬರು 6 ಗಂಟೆಗೆ ಲೈಟ್ ಆಫ್ ಆದ ತಕ್ಷಣ ಕತ್ತಲೆಯಲ್ಲಿ ಮುಗ್ಗರಿಸಿ ಬಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಮೈಸೂರಿನ ಎಲ್ಲಾ ಪಾರ್ಕ್‌ಗಳ ಕಥೆಯು ಇದೇ ಆಗಿದೆ. ಸಂಬಂಧಿಸಿದ ಅಧಿಕಾರಿಗಳು ಮುಂದಿನ ಎರಡು ತಿಂಗಳ ಕಾಲ ಬೆಳಗ್ಗೆ 6.30ಕ್ಕೆ ಲೈಟ್ ಆಫ್ ಮಾಡುವ ವ್ಯವಸ್ಥೆ ಮಾಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ತಂದೆ–ತಾಯಿ ಹತ್ತು ಮಕ್ಕಳ ಸಾಕಬಹುದು ಅದೇ ಹತ್ತು ಮಕ್ಕಳು ತಂದೆ–ತಾಯಿ ಸಾಕಲಾರರೇ...!!

ಭಾರತೀಯ ಮನಸ್ಸುಗಳು ಎಲ್ಲರನ್ನು ಹಾಗೂ ಎಲ್ಲವನ್ನೂ ದೈವಿಕ ನೆಲೆಯಲ್ಲಿ ಕಾಣುವುದು ಅವರ ವಿಶಾಲ ಹೃದಯದ ಕೈಗನ್ನಡಿ ಹಾಗೂ ಅವರಲ್ಲಿ ಮೊಳೆತಿರುವ ಸಂಸ್ಕಾರಯುತ ಹೃದಯ ಪ್ರೇಮದ ಬೆಳಕಿನ ರೂಪವಾಗಿದೆ ಇಂತಹ ಪ್ರತಿ ಜೀವಾತ್ಮವು ಜೀವಜಲದ ದೈವಾತ್ಮದ ಭಾವ ಮೂರ್ತವು ಅನುರಣಿತಗೊಂಡು ಮೂರ್ತವಾದಾಗ ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ ಎಂದು ಪ್ರತಿಯೊಬ್ಬರಿಗೂ ತುಂಬ ಗೌರವ ನೀಡುವ ಉತ್ತಮ ಸಂಸ್ಕೃತಿಯಲ್ಲಿ ಬೆಳೆದು ಬಂದಿರುವುದು ಬಳುವಳಿಯ ಸಂಗತಿ. ದೇಶವನ್ನು ಬಯಲಿಗೆಳೆಯುವ, ಬೀದಿಯಲ್ಲಿ ನಿಲ್ಲಿಸಿ ಛೀಮಾರಿ ಹಾಕುತ್ತಿರುವುದು ಯಾಕಾಗಿ ಎಂದು ಕೇಳಿಕೊಳ್ಳಬೇಕಾದ ಪ್ರಶ್ನೆಈಗ ಉದ್ಭವಿಸಿರುವುದಾದರೂ ಯಾಕೆ?. ವಿದೇಶಗಳ ಮನಸ್ಸುಗಳು ನಮ್ಮ ಭಾರತೀಯ ಜೀವಾಳವಾದ ಸಂಸ್ಕೃತಿ–ಆಚಾರ ವಿಚಾರಗಳನ್ನು ಅಪ್ಪಿಕೊಳ್ಳುತ್ತಿರುವ ಬಾಬ್ತು ಒಂದು ಕಡೆಯಾದರೆ, ಮತ್ತೊಂದು ಕಡೆ ವಿದೇಶಿ ವ್ಯಾಮೋಹದ ಅಲೆಯಲ್ಲಿ ಬಾಂಧವ್ಯದ ಬಳ್ಳಿಯನ್ನೆ ಕತ್ತರಿಸಿ ಹೃದಯಹೀನವಾಗಿ ವರ್ತಿಸುತ್ತಿರುವ ಸನ್ನಿವೇಶಕ್ಕೆ ಈಗ ಸಾಕ್ಷಿಪ್ರಜ್ಞೆಯ ಅಗತ್ಯವಿಲ್ಲ. ಭಾರತೀಯ ಸಮಾಜದ ಪರಂಪರೆಯಲ್ಲಿ ಉಸಿರಾಡುತ್ತಿರುವ ನಮಗೆ ಹೆತ್ತವರೆ ಭಾರವಾದಂತೆ ಗೋಚರವಾಗಿ ಅವರನ್ನು ನೋಡಿಕೊಳ್ಳಲಾಗದೇ ವೃದ್ಧಾಶ್ರಮಗಳಿಗೆ ಸೇರಿಸುತ್ತಿರುವುದು ನಿಜಕ್ಕೂ ವಿಷಾದದ ಸಂಗತಿಯಾಗಿದೆ. **ತಾಯಿಯೊಬ್ಬಳು ಹತ್ತು ಮಕ್ಕಳನ್ನು ಸಾಕಬಲ್ಲಳು, ಅದೇ ಹತ್ತು ಮಕ್ಕಳು ಸೇರಿಕೊಂಡು ಒಬ್ಬ ತಾಯಿಯನ್ನು ಸಾಕಲಾಗದಂತಹ ಮಟ್ಟಕ್ಕೆ ಬಂದು ನಿಂತಿರುವೆವು ಎಂದರೆ ಅದಕ್ಕಿಂತ ದೊಡ್ಡ ಹೊಣೆಗೇಡಿತನ ಮತ್ತೊಂದು ಇರಲಾರದು.**

ನಾಗರಿಕತೆ ಎಂಬ ಪೋಷಾಕನ್ನು ಧರಿಸಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದೇವೆ ಎಂಬ ಭ್ರಮನಿರಸನದಲ್ಲಿ ಬದುಕು ನಡೆಸುತ್ತಾ ನಿಜವಾಗಿಯೂ ನಮ್ಮ ಜವಾಬ್ದಾರಿ, ಕರ್ತವ್ಯವನ್ನು ಮರೆಯುತ್ತಲಿರುವುದು ಶುದ್ಧ ಅವಿವೇಕಿತನ. ಮಕ್ಕಳಿಗಾಗಿ ಇಡೀ ತಮ್ಮ ಬದುಕನ್ನೇ ಮುಡುಪಾಗಿಟ್ಟ ತಂದೆ–ತಾಯಿಯ ಶ್ರಮ, ತ್ಯಾಗವನ್ನು ಅರ್ಥ ಮಾಡಿಕೊಳ್ಳದೆ ಅವರನ್ನು ಕಡೆಗಣಿಸಿ ವೃದ್ಧಾಶ್ರಮವೆಂಬ ಸೆರಮನೆಗೆ ದೂಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಶೋಚನೀಯ ಸಂಗತಿಯಾಗಿದೆ. ವೃದ್ಧಾಶ್ರಮಕ್ಕೆ ಸೇರಿಸುವ ಮುನ್ನ ಮಕ್ಕಳಾದವರು ಕೆಲವು ಸಂಗತಿಗಳನ್ನು ನೆನಪಿಸಿಕೊಳ್ಳಬೇಕು.

ವಿದ್ಯಾವಂತರಲ್ಲೇ ಕಣ್ಮರೆಯಾಗುತ್ತಿರುವ ಮಾನವೀಯ ಮೌಲ್ಯ: ಕೇಳುವುದಕ್ಕೆ ಕಠಿಣವೆನಿಸಿದರೂ ಇದು ಸತ್ಯ. ಅವಿದ್ಯಾವಂತರಿಗಿಂತ ವಿದ್ಯಾವಂತರೆ ತಮ್ಮ ತಂದೆ–ತಾಯಿಯರನ್ನು ನೋಡಿಕೊಳ್ಳಲಾಗದೇ ವೃದ್ಧಾಶ್ರಮಗಳಿಗೆ ಸೇರಿಸುತ್ತಿರುವುದು ಬೇಸರದ ಸಂಗತಿಯಾಗಿದೆ.ನನ್ನ ಮಗ/ ಮಗಳು ವಿದೇಶದಲ್ಲಿದ್ದಾರೆಂದು ಹೆಮ್ಮೆ ಪಡುವ ಪೋಷಕರು ವೃದ್ಧಾಶ್ರಮಗಳಲ್ಲಿದ್ದುಕೊಂಡು ಬದುಕಿನ ಕೊನೆ ಕ್ಷಣಗಳನ್ನು ಕಳೆಯುತ್ತಿರುವುದಕ್ಕೆ ವಿದ್ಯಾವಂತರೇ ಪ್ರಮುಖವಾಗಿರುವುದು ನಾಚಿಕೆಗೇಡಿತನವಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ ಅವಿದ್ಯಾವಂತರು ವೃದ್ಧಾಶ್ರಮಕ್ಕೆ ಸೇರಿಸುವುದೇ ಇಲ್ಲವೆಂದಲ್ಲ ಕಲಿತ ವಿದ್ಯೆ ಮಾನವೀಯತೆಯನ್ನು ಕಲಿಸಿಲ್ಲವೆಂದ ಮೇಲೆ ಏನು ಓದಿದರೇನು ಉಪಯೋಗ!

ಲಕ್ಷಗಟ್ಟಲೇ ಹಣವನ್ನು ನೀಡಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ ವಿದೇಶಗಳಲ್ಲಿ ನೌಕರಿ ಪಡೆದು, ಲಕ್ಷ, ಕೋಟಿಗಟ್ಟಲೇ ಹಣವನ್ನು ಸಂಪಾದನೆ ಮಾಡುತ್ತಾ ಆಸ್ತಿ, ಅಂತಸ್ತುಗಳನ್ನು ಮಾಡಿ ತಮ್ಮ ಹೆತ್ತವರನ್ನು ವೃದ್ಧಾಶ್ರಮಗಳಲ್ಲಿ ಬಿಟ್ಟು ತಾವು ಅವರಿಂದ ದೂರ ಉಳಿದು ಸಂತೋಷಪಡುವ ಜನರಿಗೇನು ಕಡಿಮೆ ಇಲ್ಲ. ಹೆತ್ತ ತಾಯಿಯನ್ನು, ಸಾಕಿ ಸಲಹಿದ ತಂದೆಯನ್ನು ನೋಡಿಕೊಳ್ಳದಿದ್ದರೆ ನಾವು ಪಡೆದ ಶಿಕ್ಷಣ, ಪಡೆದ ಪದವಿಗಳ ಮೌಲ್ಯ ಶೂನ್ಯ ಎಂದೇ ಅರ್ಥ. ತಮ್ಮ ಮಕ್ಕಳನ್ನು ಪ್ರೀತಿಯಿಂದ ಬೆಳೆಸುವುದು ತಂದೆ–ತಾಯಂದಿರ ಕರ್ತವ್ಯ ಹೇಗೋ ಹಾಗೆಯೇ ಪ್ರತಿಯೊಬ್ಬ ಮಕ್ಕಳು ತಮ್ಮ ತಂದೆ ತಾಯಂದಿಯರನ್ನು ನೋಡಿಕೊಳ್ಳುವುದು ಅಷ್ಟೇ ಆದ್ಯ ಕರ್ತವ್ಯವಾಗಿರುತ್ತದೆ. ಹಣ, ಆಸ್ತಿ, ಕೀರ್ತಿ ಯಾರಿಗೆ ಯಾವಾಗ ಬೇಕಾದರೂ ಸಿಗಬಹುದು ಆದರೆ ವಿನಯವಂತಿಕೆ, ಮಾನವೀಯತೆಯನ್ನು ಸಂಪಾದಿಸಿ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳುವುದು ತೀರಾ ಅಗತ್ಯ ಮತ್ತು ಅನಿವಾರ್ಯವಾದುದಾಗಿದೆ.

ಲಕ್ಷಗಟ್ಟಲೇ ಖರ್ಚು ಮಾಡಿ ಓದಿಸಿದ ಹೆತ್ತವರನ್ನು ಮರೆತು ವಿದೇಶಗಳಲ್ಲಿ ಹೋಗಿ ವಾಸ ಮಾಡುತ್ತಾ ಹೆತ್ತವರನ್ನು ನೋಡಿಕೊಳ್ಳಲಾಗದೇ ವೃದ್ಧಾಶ್ರಮಗಳಲ್ಲಿ ಸೇರಿಸುವ ಮಕ್ಕಳನ್ನು ನೋಡಿದರೆ ತಿಳಿಯುತ್ತದೆ ಇಂದಿನ ಯುವಜನತೆಗೆ ಮೊದಲು ವಿದ್ಯಾಭ್ಯಾಸಕ್ಕಿಂತ ವಿನಯವಂತಿಕೆಯನ್ನು, ಮಾನವ ಸಂಬಂಧಗಳ ಮೌಲ್ಯವನ್ನು ದೊರಕಿಸಿಕೊಡಬೇಕಾದ ಅನಿವಾರ್ಯತೆಯಂತೂ ಅಗತ್ಯವಾಗಿ ಬೇಕಾಗಿದೆ.



ತಾನು ಅಚ್ಚುಕಟ್ಟಾದ ಬಟ್ಟೆ ತೊಡಲಾಗದಿದ್ದರೂ ಮಕ್ಕಳಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಕೊಡಿಸುವ, ತಾನು ಸರಿಯಾಗಿ–ಹೊಟ್ಟೆ ತುಂಬ ತಿನ್ನದಿದ್ದರೂ ತನ್ನ ಮಕ್ಕಳಿಗಾಗಿ ಎಲ್ಲದರಲ್ಲೂ ಉಳಿಸಿ ಅವರಿಗಾಗಿ ತಮ್ಮ ಬದುಕನ್ನೇ ಸವೆಸುವ ಪೋಷಕರ ಮನೋಭಾವ ಇಂದಿನ ಮಕ್ಕಳಿಗೆ ಅರ್ಥವೇ ಆಗಲಾರದು. ಹಣ, ಇಷ್ಟಪಟ್ಟ ಉದ್ಯೋಗ, ಮನ ಮೆಚ್ಚುವ ಮಡದಿ ಸಿಕ್ಕರೆ ಸಾಕು ಹೆತ್ತವರು ಬೇಡವಾಗುತ್ತಾರೆ. ಇಂತಹ ಗುಣ ಉಳ್ಳವರಿಗೆ ಮೊದಲು ತ್ಯಾಗ, ಪರಿಶ್ರಮವನ್ನು ತಿಳಿಸಬೇಕಾಗಿದೆ. ಹೆತ್ತವರ ಮನೋಭಾವ ಮಕ್ಕಳಿಗೆ ಅರ್ಥವಾಗುವುದು ಬಹುಶಃ ಅವರು ಪೋಷಕರಾದಾಗ ಮಾತ್ರವೇ ಎಂದೆನಿಸುತ್ತದೆ.

ಹೆತ್ತವರ ಸ್ಥಾನದಲ್ಲೊಮ್ಮೆ ನಿಂತು ಆಲೋಚಿಸಿ: ವೃದ್ಧಾಶ್ರಮಕ್ಕೆ ಸೇರಿಸುವ ಮುನ್ನ ಒಂದೇ ಒಂದು ಕ್ಷಣ ಹೆತ್ತವರ ಜಾಗದಲ್ಲಿ ನಿಂತು ಆಲೋಚಿಸಿ ನೋಡಿ ಆ ನೊಂದ ಜೀವಗಳಿಗೆ ಆಗಬಹುದಾದ ದುಃಖದ ತೀವ್ರತೆ ಅರಿವಾಗುತ್ತದೆ. ಇಂದು ನೀವು ಲಕ್ಷ ಹಣವನ್ನೇ ಸಂಪಾದಿಸಿರಬಹುದು, ಒಳ್ಳೆಯ ಅಧಿಕಾರದಲ್ಲಿಯೇ ಇರಬಹುದು. ನಿಮ್ಮ ಇವತ್ತಿನ ಯಶಸ್ವಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಿಮ್ಮ ಹೆತ್ತವರ ಕಾಣಿಕೆ ಇದ್ದೇ ಇರುತ್ತದೆ. ಮಕ್ಕಳ ಭವಿಷ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಅವರ ಯಶಸ್ಸನ್ನು ನೋಡಿ ಮನಃಪೂರ್ವಕವಾಗಿ ಸಂತಸಪಡುವ ಹೆತ್ತವರ ಭಾವನೆಗಳು ನಮಗರ್ಥವಾಗದಿದ್ದರೆ ನಮ್ಮ ಬದುಕೇ ವ್ಯರ್ಥ.

ಕಾರಣಗಳು ಸಾವಿರವಿರಲಿ ನಿಮ್ಮ ಕರ್ತವ್ಯ ನೆನಪಿರಲಿ : ನಿಮಗೇನು ಗೊತ್ತು?! ವಯಸ್ಸಾಗಿದೆ ಎಂದ ಮೇಲೆ ಸುಮ್ಮನೆ ಒಂದು ಕಡೆ ಕುಳಿತು ನೆಮ್ಮದಿಯಾಗಿರಿ ಎಂದರೆ ಕೇಳುವುದಿಲ್ಲ, ಬೇಡದಿರುವುದನ್ನೇ ಮಾಡುತ್ತಾರೆ. ಕೆಲಸಕ್ಕೆ ಹೋಗಿ ಬರುವ ನಮಗೆ ಇವರ ಕಾಟವನ್ನು ಸಹಿಸಲು ಸಾಧ್ಯವಿಲ್ಲ, ಹೇಳಿದ್ದನ್ನು ಕೇಳೊಲ್ಲ, ಅವರು ಹೇಳಿದಾಗೆ ನಡೆಯಬೇಕೆಂದು ಬಯಸುತ್ತಾರೆ.... ಹೀಗೆ ಕಾರಣಗಳ ದೊಡ್ಡ ಪಟ್ಟಿಯನ್ನೇ ನೀಡುವ ಮಕ್ಕಳು ಒಂದೇ ಒಂದು ಕ್ಷಣ ತಾವು ಮಕ್ಕಳಾಗಿದ್ದಾಗ, ಯೌವನಾವಸ್ಥೆಯಲ್ಲಿದ್ದಾಗ, ಬೇಕು ಬೇಡಗಳ ತಿಳುವಳಿಕೆ ಬದುಕು ನಡೆಸುವಾಗ ಬದುಕಿನ ಪ್ರಮುಖ ಘಟ್ಟಗಳಲ್ಲಿಯೂ ಬೆನ್ನೆಲುಬಾಗಿ ನಿಂತು ತಮ್ಮ ಆಸೆ, ಕನಸುಗಳನ್ನು ಬದಿಗೊತ್ತಿ ಮಕ್ಕಳ ಪಾಲನೆ,ಪೋಷಣೆಗಾಗಿಯೇ ಜೀವನ ಮೀಸಲಾಗಿಟ್ಟ ಹೆತ್ತವರ ಬಗ್ಗೆ ನೆನೆಯುವುದು,ಅವರನ್ನು ಎಷ್ಟೇ ಕಷ್ಟಗಳು,ಸಮಸ್ಯೆಗಳು ಇದ್ದರೂ ಸಾಧ್ಯವಾದಷ್ಟು ಮನೆಯಲ್ಲಿಯೇ, ನಮ್ಮ ಜೊತೆಯಲ್ಲಿಯೇ ಉಳಿಸಿಕೊಂಡು ಸಾಕುವುದು ಪ್ರತಿಯೊಬ್ಬ ಮಕ್ಕಳ ಆದ್ಯ ಕರ್ತವ್ಯವಾಗಿರುತ್ತದೆ. ಅಮ್ಮ, ಅಪ್ಪ ಮಾಡಿರುವ ಆಸ್ತಿ ಬೇಕು,ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಬೇಡ ಎಂಬ ಮನೋಭಾವ ಮೊದಲು ತೊಲಗಬೇಕು.

ಹೆತ್ತವರ ಋಣ ತೀರಿಸಲಾಗದು: ಜಗತ್ತಿನಲ್ಲಿ ಯಾರ ಋಣ ಬೇಕಾದರೂ ತೀರಿಸಬಹುದು. ಆದರೆ ಹೆತ್ತವರ ಋಣ ತೀರಿಸಲಾಗದು. ತಾಯಿಯ ತ್ಯಾಗಕ್ಕೆ, ತಂದೆಯ ಶ್ರಮಕ್ಕೆ ಯಾವ ಬೆಲೆಯನ್ನು ಕಟ್ಟಲು ಸಾಧ್ಯವಾಗದು. ಹುಟ್ಟಿನಿಂದ ಹಿಡಿದು ಬೆಳೆದು ತಮ್ಮ ಕಾಲಮೇಲೆ ತಾವು ನೆಲೆನಿಲ್ಲುವವರೆಗೂ ಜೊತೆಯಾಗಿ ನಿಲ್ಲಬಲ್ಲ ಪೋಷಕರು ಎಲ್ಲ ದೇವರಿಗಿಂತಲೂ ಮಿಗಿಲಾದವರು. ಇಂತಹ ಪೋಷಕರನ್ನು ಅವರು ಇರುವಷ್ಟು ಕಾಲ ಅದು ಎಂತಹ ಸಂದರ್ಭ ಎದುರಾದರೂ ಅವರನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಮಕ್ಕಳ ಕರ್ತವ್ಯವಾಗಿದೆ.

ಅವರಿಗೇನು ಕಷ್ಟವಿಲ್ಲ, ತಿಂಗಳು ತಿಂಗಳಿಗೆ ಹಣ ಕಳಿಸುತ್ತೇವೆ, ಐಷಾರಾಮಿ ವೃದ್ಧಾಶ್ರಮಕ್ಕೆ ಸೇರಿಸಿದ್ದೇವೆ, ಟಿ.ವಿ.ಮೊಬೈಲ್, ಖರ್ಚು ಮಾಡಲು ಹಣ ಎಲ್ಲ ಇದೆ, ಇನ್ನೇನೂ ಬೇಕು ಎಂದೆಲ್ಲ ಸಮಜಾಯಿಷಿ ಕೊಡುವ ಗುಣವುಳ್ಳವರು ಮಾನವೀಯ ನೆಲೆಯಲ್ಲಿ ನಿಂತು ಆಲೋಚಿಸಬೇಕು – ವೃದ್ಧಾಶ್ರಮ ವೃದ್ಧಾಶ್ರಮವೇ ಹೊರತು ಮನೆಯಾಗಲಾರದು.ಅಲ್ಲಿ ನೋಡಿಕೊಳ್ಳುವವರು ಮಕ್ಕಳಾಗಲಾರರು.

ಪ್ರೀತಿಯನ್ನು ನೀಡಿ : ಮಕ್ಕಳಾಗಿದ್ದಾಗ ನಾವು ಮಾಡುವ ಎಲ್ಲಾ ತಪ್ಪುಗಳನ್ನು ತಿದ್ದಿ ಬದುಕು ಹಸನಾಗುವಂತೆ ಮಾಡಿದ ಹೆತ್ತವರಿಗೆ ನಾವು ಕೊಡ ಬಹುದಾದ ಅತಿ ದೊಡ್ಡ ಕೊಡುಗೆ ಎಂದರೆ ಅದು ಪ್ರೀತಿ. ವಯಸ್ಸಾದಂತೆ ಮಕ್ಕಳಂತೆ ವರ್ತಿಸುವ ಹೆತ್ತವರಿಗೆ ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳಬೇಕು. ತಮ್ಮ ಬಿಡುವಿಲ್ಲದ ಸಮಯದಲ್ಲಿಯೂ ಕೂಡ ತಾನು ಅತ್ಯಂತ ಕಡಿಮೆ ವೇತನ ಪಡೆಯುತ್ತಲಿದ್ದರೂ ನನ್ನ ಮಗ/ ಮಗಳನ್ನು ಒಳ್ಳೆಯ ಶಾಲೆಯಲ್ಲಿಯೇ ಓದಿಸಬೇಕು ಎಂದು, ಹೆಚ್ಚುವರಿ ಸಂಪಾದನೆಗಾಗಿ ವಿಶ್ರಾಂತಿಯನ್ನೇ ಮರೆತು ಮಕ್ಕಳ ಭವಿಷ್ಯಕ್ಕೆ ಭದ್ರವಾದ ಅಡಿಪಾಯವನ್ನು ನಿರ್ಮಿಸಿಕೊಡುವ ಹೆತ್ತವರಿಗೆ ಪ್ರೀತಿಯಿಂದ ಮಾತನಾಡಿ ಅವರೊಂದಿಗೆ ಸಮಯ ಕಳೆದರೆ ಸಾಕು ಅದು ಸಾರ್ಥಕವಾದ ಭಾವನೆಯನ್ನು ಉಂಟು ಮಾಡಬಲ್ಲದು.

ಮೊಮ್ಮಕ್ಕಳ ಬೆಳವಣಿಗೆಯಲ್ಲಿ ಅಜ್ಜಿ, ತಾತರ ಮಹತ್ವ ಹೆಚ್ಚು: ತಂದೆ–ತಾಯಿ ತಮ್ಮ ಮಕ್ಕಳನ್ನು ಎಷ್ಟೇ ಚೆನ್ನಾಗಿ ನೋಡಿಕೊಂಡರೂ ಅದು ಅಜ್ಜ–ಅಜ್ಜಿ ಕೊಡುವ ತೋರುವ ಪ್ರೀತಿ, ಜೀವನಾನುಭವದ ಮುಂದೆ ಕಡಿಮೆಯೇ. ಇಂದು ಗಂಡ– ಹೆಂಡತಿ ಇಬ್ಬರೂ ದುಡಿದು, ಜೀವನವನ್ನು ನಡೆಸ ಬೇಕಾಗಿರುತ್ತದೆ. ನಮ್ಮ ಮಕ್ಕಳೊಂದಿಗೆ ಕಾಲ ಕಳೆಯಲು ನಮಗೆ ಸಮಯ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿರುವ ಇಂತಹ ಸಂದರ್ಭ ಗಳಲ್ಲಿ ಮಕ್ಕಳಿಗೆ ನೀತಿಕಥೆಗಳನ್ನು ಹೇಳುವ, ಮಾನವೀಯ ಮೌಲ್ಯಗಳನ್ನು ಕಲಿಸುವ ,ಬದುಕಿಗೆ ಬೇಕಾದ ತತ್ವಗಳನ್ನು ತಿಳಿಸುವ ಕೆಲಸವನ್ನು ತಾತ,ಅಜ್ಜಿ ಮಾಡಬಲ್ಲರು.ಇಂತವರನ್ನು ವೃದ್ಧಾಶ್ರಮಕ್ಕೆ ತಳ್ಳಿ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಕೆಲಸದಾಳುಗಳನ್ನು ಇಟ್ಟು ಕೊಳ್ಳುವವರಿಗೆ ಏನು ಹೇಳಬೇಕೊ ತಿಳಿಯದು! ನಾಗರಿಕತೆಯ ಹೆಸರಿನಲ್ಲಿ ಮನುಷ್ಯ ಸಂಬಂಧಗಳ ಮರೆತ ಜನಗಳಿಗೆ ಮಾನವೀಯತೆಯ ಮೌಲ್ಯಗಳನ್ನು ಕಲಿಸಬೇಕಾಗಿದೆ. ಇಷ್ಟೆಲ್ಲಾ ಹೇಳಿದ ಮಾತ್ರಕ್ಕೆ ಈ ಲೇಖನವನ್ನು ಓದಿ ವೃದ್ಧಾಶ್ರಮದಲ್ಲಿ ಬಿಟ್ಟಿರುವ ತಮ್ಮ ಪೋಷಕರನ್ನು ಮರಳಿ ತಮ್ಮ ಮನೆಗೆ ಕರೆತರುವರೆಂಬ ಭ್ರಮೆಯಾಗಲೀ ಅಥವಾ ಸೇರಿಸಬೇಕೆಂಬ ಮನೋಭಾವಯುಳ್ಳ ವರು ಬದಲಾಗುತ್ತಾರೆಂಬ ನಂಬಿಕೆಯಾಗಲೀ ನನಗಿಲ್ಲ. ಜಿ.ಎಸ್. ಶಿವರುದ್ರಪ್ಪ ಅವರ ಅಭಿಮಾನಿಯಾದ ಎನಗೆ ಅವರೇ ಹೇಳಿದ ಸಾಲುಗಳು ನೆನಪಿನಲ್ಲಿದೆ. **ಹಣತೆ ಹಚ್ಚುತ್ತೇನೆ ನಾನು; ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ, ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ;ಹಣತೆ ಆರಿದ ಮೇಲೆ, ನೀನು ಯಾರೋ, ಮತ್ತೆ ನಾನು ಯಾರೋ!**

ಕನಿಷ್ಠ ಪಕ್ಷ ಈ ಲೇಖನ ಓದಿದ ಒಬ್ಬರಿಗಾದರೂ ಹೌದು ಇವೆಲ್ಲವೂ ಸತ್ಯ, ನಾನು ಹೀಗೆ ಮಾಡಬಾರದು ಎಂದು ಅನಿಸಿದರೆ ಸಾಕು ಈ ಬದುಕು ಸಾರ್ಥಕವಾಗುತ್ತದೆ. ಒಂದು ದೇಶದ ಪ್ರಗತಿ ನಿಂತಿರುವುದು ಬಾಂಧವ್ಯಗಳನ್ನು ಹಂಚುವ ಹೃದಯ ಸಿರಿವಂತಿಕೆಯಿಂದ, ಆಪತ್ತಿನ ಸಂದರ್ಭದಲ್ಲಿ ಕೈ ಹಿಡಿದು ಕಾಪಾಡುವ ಮನಸ್ಸಿನ ಸ್ಥಿತಪ್ರಜ್ಞೆಯಿಂದ, ಹಸಿದಿರುವ ಜೀವಗಳಿಗೆ ಅನ್ನ–ನೀರುಣಿಸುವ ಭಾವಕೋಶದಿಂದ, ನವನಾಗರಿಕತೆ ಕಾಲಿರಿಸಿದಂತೆ ಎಲ್ಲವೂ ಹಣದ ಕಾಲು ನೆಕ್ಕುವ ಗುಲಾಮಿ ಪ್ರವೃತ್ತಿಗೆ ಇವತ್ತಿನ ಮನಸ್ಸುಗಳು ಕೆಲಸ ಮಾಡುತ್ತಾ ಈ ಜಗತ್ತನ್ನು ಕಾಣಲು ಕಾರಣರಾದವರನ್ನು ಅಸಡ್ಡೆಯಿಂದ ಕಾಣುತ್ತಾ ನಮ್ಮನ್ನೇ ಮಾರಿಕೊಂಡು ಬದುಕನ್ನು ಹರಾಜಿಗೆ ಈಡುಮಾಡುವ ಪ್ರವೃತ್ತಿ ಭರವಸೆಯ ಜೀವದ ಕತ್ತು ಇಸುಕಿದಂತೆ ಆ ಬಗೆಯ ನೋವಿನ ಸಂಗತಿಗೆ ಕಡಿವಾಣ ಹಾಕಿ ಹೆತ್ತವರ, ಹೊತ್ತು ಬೆಳೆಸಿದವರ ಕಣ್ಣಲ್ಲಿ ನೋವಿನ ಹನಿ ಇಣುಕಿ ನೋಡದಂತೆ ಕಾಪಾಡಿಕೊಳ್ಳುವ ಜೀವಭಾವ ನಮ್ಮದಾದರೆ ಅದರಷ್ಟು ಯೋಗಾಯೋಗ ಮತ್ತೊಂದು ಇರಲಾರದು, 'ಈ ಬಂಧನ' ಚಲನಚಿತ್ರವು ಇದೇ ಬಗೆಯ ನೋವಿನ ಸಂಗತಿಯನ್ನು ದೃಶ್ಯಕಾವ್ಯವಾಗಿ ನಿರೂಪಿಸಿದರೆ, ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರ 'ಒಂದು ಹೂ ಹೆಚ್ಚಿಗೆ ಇಡುತ್ತೀನಿ' ಎಂಬ ಕವಿತೆಯು ಮಾರ್ಮಿಕವಾದ ಹೃದಯಹೀನ ಮಕ್ಕಳ ಕೃತಕ ಜವಾಬ್ದಾರಿಯಿಂದ ಕೊಚ್ಚಿಹೋಗುವ ಬಾಂಧವ್ಯದ ನಂಟನ್ನು, ವೃದ್ಧರ ತವಕ ತಲ್ಲಣವನ್ನು ಹೃದಯದ ಕಣ್ಣಲ್ಲು ನೋವು ಬಸಿಯುವಂತೆ ಚಿತ್ರಿಸಿರುವ ಭಾವ ಅಸದಳವಾದುದು, ಅವರ್ಣನೀಯವಾದುದು. ಇವತ್ತಿನ ಸಣ್ಣ ಮನಸ್ಸುಗಳಿಗೆ ಈ ಎಲ್ಲವೂ ಅಕ್ಷರ ಧರ್ಮದಿಂದ ಒದಗಿಸುತ್ತಿರುವ ಒಂದಂಶದ ಉಪದೇಶವಾಗದೆ ಕಾಪಾಡಿದವರನ್ನು ಕಾಪಾಡುವ, ಜೀವ ಕೊಟ್ಟವರ ಜೀವಕ್ಕೆ ನೆರಳಾಗಿ ನೆರವಾದರೆ ಅದರಷ್ಟು ಭಾಗ್ಯದ ಬಾಬ್ತು ಇನ್ನೊಂದು ಇರಲಾರದು ಎಂಬ ಸದಾಶಯದ ಭಾವ ನನ್ನದು ಅಷ್ಟೇ.

ವಿಶೇಷ ಮಕ್ಕಳಿಗೆ ನಮ್ಮ ಪ್ರೀತಿ–ವಿಶ್ವಾಸದ ಸ್ಪರ್ಶ ಅಗತ್ಯ

ವಿಶೇಷ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ಅಧಿಕಾರಿ ಜಿ.ಜಯರಾಮ್ ಅಭಿಮತ

ಮೈಸೂರು,ಮಾ.6(ಪಿಎಂ)– ವಿಶೇಷ ಮಕ್ಕಳಿಗೆ ನಮ್ಮ ಅನುಕಂಪ ಅಗತ್ಯವಿಲ್ಲ. ಬದಲಿಗೆ ಅವರಿಗೆ ನಿಜಕ್ಕೂ ದೊರಕಬೇಕಿರುವುದು ನಮ್ಮ ಪ್ರೀತಿ–ವಿಶ್ವಾಸದ ಸ್ಪರ್ಶ ಎಂದು ನಿವೃತ್ತ ಅಧಿಕಾರಿ ಜಿ.ಜಯರಾಮ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಂಸ್ಥೆಯ ವಿಶೇಷ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾರಾದರೂ ವಿಶೇಷ ಮಕ್ಕಳು ನಿಮ್ಮ ಸಂಪರ್ಕಕ್ಕೆ ಬಂದಾಗ ಅವರ ಬಗ್ಗೆ ಅನುಕಂಪ ತೋರುವುದು ಬೇಡ, ಬದಲಿಗೆ ಆತ್ಮವಿಶ್ವಾಸ ತುಂಬುವಂತೆ ಅವರ ಕೈಕುಲುಕಿ ಮಾತನಾಡಿಸಿ. ಉಳಿದಿದ್ದನ್ನು ಅವರ ಪೋಷಕರು ನೋಡಿಕೊಳ್ಳುತ್ತಾರೆ. ಅವರಿಗೆ ನೆರವಾಗಲೂ ಒಂದು ಸಮಾಜ ಸಹ ಇದ್ದೇ ಇರುತ್ತದೆ. ಅವರನ್ನು ಬೇರೆ ರೀತಿ ಎಂದು ಭಾವಿಸಬಾರದು. ತಾಯಂದಿರು ಗರ್ಭಿಣಿ ಇದ್ದಾಗ ತಮ್ಮ ಮಕ್ಕಳನ್ನು ಎಲ್ಲರಂತೆ ಜನ್ಮತಾಳುತ್ತಾರೆ ಎಂಬ ಆಕಾಂಕ್ಷೆ ಹೊಂದಿರುತ್ತಾರೆ. ಆದರೆ ಕೆಲ ಬದಲಾವಣೆಗಳು ಆಗಿ ಹೋಗುತ್ತದೆ. ಏನೇ ಆದರೂ ವಿಶೇಷ ಮಕ್ಕಳು ನಮ್ಮಂತೆಯೇ ಹೊರತು ಅವರೇನು ಬೇರೆ ರೀತಿಯಲ್ಲ ಎಂದರು.



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗುರುವಾರ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ಸಮರ್ಥನಂ ವಿಶೇಷ ಮಕ್ಕಳ ಶಾಲೆಯ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ನಾವು ವಿಶೇಷ ಮಕ್ಕಳಿಗೆ ಕೊಡಬೇಕಿರುವುದು ಆತ್ಮಸ್ಥೈರ್ಯ. ಪ್ರೀತಿಯಿಂದ ಅವರನ್ನು ಮಾತನಾಡಿಸಿದರೆ ಅವರು ನಮಗೆ ಅತ್ಯಂತ ಪ್ರೀತಿ ಕೊಡುತ್ತಾರೆ. ಬಹುಶಃ ನಮ್ಮ ಸ್ವಂತ ಮಕ್ಕಳು ಅಷ್ಟು ಪ್ರೀತಿ ತೋರುವುದಿಲ್ಲವೇನೋ. ಈ ಮಕ್ಕಳು ತೋರಿಸುವ ಪ್ರೀತಿ ವಿಶೇಷವೇ ಸರಿ. ವಿಶೇಷ ಮಕ್ಕಳ ಪೋಷಣೆಯಲ್ಲಿ ತಾಯಂದಿರ ಪಾತ್ರ ಮಹತ್ವದ್ದು. ನಾನು ವಿಶೇಷಚೇತನರ ಕಲ್ಯಾಣ ಇಲಾಖೆಯಲ್ಲಿ ಎರಡು ವರ್ಷ ಕೆಲಸ ಮಾಡಿದ್ದು, ಅವರ ಶ್ರೇಯೋಭಿವೃದ್ಧಿ ಕಾರ್ಯಕ್ರಮಗಳಿಗಾಗಿ 30 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೆ. ನನ್ನ 42 ವರ್ಷಗಳ ಸೇವಾವಧಿ ಪೈಕಿ ನನಗೆ ಬಹಳ ತೃಪ್ತಿ ಕೊಟ್ಟಿದ್ದು ಈ ಇಲಾಖೆಯಲ್ಲಿ ಮಾಡಿದ ಕೆಲಸಗಳಾಗಿವೆ ಎಂದು ಹೇಳಿದರು.

ಚಾಮರಾಜನಗರದ ಧೀನಬಂಧು ಸಂಸ್ಥೆಯಲ್ಲಿ ಡಾ.ಜಯದೇವ ಅವರೊಂದಿಗೆ ಟ್ರಸ್ಟಿಯಾಗಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ವಿಶೇಷವಾಗಿ ಅನಾಥ ಮಕ್ಕಳು ಆಶ್ರಯ ಪಡೆದಿದ್ದಾರೆ. ಆ ಮಕ್ಕಳ ಜೊತೆಗಿನ ಒಡನಾಟ ನನಗೆ ಬಹಳ ಖುಷಿ ಕೊಡುತ್ತದೆ. ವಿಶೇಷ ಮಕ್ಕಳಿಗೆ ದೇವರು ವಿಶೇಷವಾದ ಶಕ್ತಿ ಕೊಟ್ಟಿದ್ದಾನೆ. ಅವರಿಗೆ ಇರುವ ಗ್ರಹಣಶಕ್ತಿ, ಸ್ಮರಣ ಶಕ್ತಿ ವಿಶೇಷವಾದುದು ಎಂದರು.

ಸಮರ್ಥನಂ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ಜಿ.ಕೆ.ಮಹಂತೇಶ್ ಅವರ ಜೊತೆಗೆ ನನ್ನ ಒಡನಾಟ 20 ವರ್ಷಗಳಿಗೂ ಹಳೆಯದು. ನಾನು ವಿಕಲಚೇತನರ ಇಲಾಖೆ ನಿರ್ದೇಶಕನಾಗಿ ಕೆಲಸ ಮಾಡುವಾಗ ಅವರ ಪರಿಚಯವಾಯಿತು. ಮಹಂತೇಶ್ ಸುಶಿಕ್ಷಿತ ವ್ಯಕ್ತಿ. ಮೂರು ಮಕ್ಕಳಿಂದ ವಿಶೇಷಚೇತನರ ಶಾಲೆ ಶುರು ಮಾಡಿದರು. ಇಂದು 18 ನಗರಗಳಲ್ಲಿ 30 ಸಾವಿರ ಮಕ್ಕಳು ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ತಮ್ಮ ಬದುಕು ರೂಪಿಸಿಕೊಳ್ಳುತ್ತಿದ್ದಾರೆ. 700 ಸಿಬ್ಬಂದಿಯಿದ್ದು, ವರ್ಷಕ್ಕೆ 120 ಕೋಟಿ ವೆಚ್ಚ ಆಗುತ್ತಿದೆ. ಆರ್ಥಿಕವಾಗಿ ಸುಭದ್ರತೆ ಇದ್ದು, ದಾನಿಗಳು ನೆರವಾಗುತ್ತಿದ್ದಾರೆ ಎಂದು ಅವರು ಹೇಳಿದ್ದನ್ನು ಕೇಳಿ ಖುಷಿಯಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಸಮರ್ಥನಂ ಸಂಸ್ಥೆ ವಾರ್ಷಿಕೋತ್ಸವ ಪ್ರಯುಕ ನಡೆದಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ವಿಶೇಷ ಮಕ್ಕಳು, ಅವರ ಶಿಕ್ಷಕರು ಮತ್ತು ಪೋಷಕರಿಗೆ ಇದೇ ವೇಳೆ ಬಹುಮಾನ ವಿತರಣೆ ಮಾಡಲಾಯಿತು. ಬಳಿಕ ಸಮರ್ಥನಂ ಸಂಸ್ಥೆಯ ವಿಶೇಷ ಮಕ್ಕಳು, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಮಾತ್ರವಲ್ಲದೆ, ಶೇಷಾದ್ರಿಪುರಂ ಪದವಿ ಕಾಲೇಜು ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೀಡಿದರು. ನೃತ್ಯ, ಸಂಗೀತ ಹಾಗೂ ಜನಪದ ಕಲಾ ಪ್ರದರ್ಶನಗಳು ಸಭಿಕರನ್ನು ರಂಜಿಸಿದವು. ಸಮರ್ಥನಂ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ಜಿ.ಕೆ.ಮಹಂತೇಶ್, ಬೆಂಗಳೂರಿನ ಸಮರ್ಥನಂ ವಿಶೇಷ ಮಕ್ಕಳ ಶಾಲೆಯ ಪ್ರಾಂಶುಪಾಲರಾದ ಡಾ.ಗೀತಾ, ಮೈಸೂರು ಸಂಸ್ಥೆಯ ಸಂಚಾಲಕ ಶಿವರಾಜು ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶುಕ್ರವಾರ 7 ಮಾರ್ಚ್ 2025

ಹಾಸನ ಮಿತ್ರ

ಕಾಂಗ್ರೆಸ್ ಸರ್ಕಾರದ ವೈಫಲ್ಯ ಖಂಡಿಸಿ ಜೆಡಿಎಸ್ ಮುಖಂಡರ ಪ್ರತಿಭಟನೆ



ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ, ಜೆಡಿಎಸ್ ಜಿಲ್ಲಾ ಘಟಕದ ಸದಸ್ಯರು, ಮುಖಂಡರು ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹಾಸನ: ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ, ಜೆಡಿಎಸ್ ಜಿಲ್ಲಾ ಘಟಕದ ಸದಸ್ಯರು ಹಾಗೂ ಮುಖಂಡರು ಡಿಸಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್.ಲಿಂಗೇಶ್ ಮಾತನಾಡಿ, 5 ಗ್ಯಾರಂಟಿಗಳ ಭರವಸೆಯನ್ನು ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಸಮರ್ಪಕವಾಗಿ ಯೋಜನೆಯನ್ನು ಜಾರಿ ಮಾಡಿಲ್ಲ. ತರಾತುರಿಯಲ್ಲಿ ಗ್ಯಾರಂಟಿಯನ್ನು ತರಲಾಗಿದೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಯುವನಿಧಿ ಸೇರಿದಂತೆ ಐದು ಗ್ಯಾರಂಟಿಗಳು ಅರ್ಹರಿಗೆ ತಲುಪುತ್ತಿಲ್ಲ ಎಂದು ಆರೋಪಿಸಿದರು.

ಗೃಹಲಕ್ಷ್ಮಿ ಯೋಜನೆಯ ನಾಲ್ಕು ತಿಂಗಳ ಹಣ ಪಾವತಿಯಾಗಿಲ್ಲ. ರಾಮನಗರ ಉಪಚುನಾವಣೆ ಸಂದರ್ಭದಲ್ಲಿ ಹಣ ಬಿಡುಗಡೆ ಮಾಡಿದ ಸರ್ಕಾರ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಗಾಗಿ ಕಾಯುತ್ತಿದ್ದು. ಈ ವೇಳೆಯಲ್ಲಿ ಹಣ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ದೂರಿದರು.

ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಹಾಸನ ಜಿಲ್ಲೆಯ ವಿಶ್ವವಿದ್ಯಾಲಯವನ್ನು ಮುಚ್ಚಲು ಹೊರಟಿದ್ದಾರೆ. ಕೃಷಿ ಕಾಲೇಜನ್ನು ಬೇರೆಡೆಗೆ ವಿಲೀನ ಮಾಡಲು ಹೊರಟಿದ್ದು, ಹಾಸನದಲ್ಲಿಯೇ ಉಳಿಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಧಿವೇಶನದ ಹಿನ್ನೆಲೆಯಲ್ಲಿ ಹಾಲಿ ಶಾಸಕರು ಹಾಗೂ ಇತರೆ ಜನಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಹಾಜರಿಲ್ಲ. ಬಜೆಟ್ ಅಧಿವೇಶನ ಮುಗಿದ ನಂತರ ಮತ್ತೊಮ್ಮೆ ಜೆಡಿಎಸ್ ವತಿಯಿಂದ ಸರ್ಕಾರದ ದುರಾಡಳಿತದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ ತಿಳಿಸಿದರು.

ಪ್ರತಿಭಟನೆಯಲ್ಲಿ ನಗರಸಭೆಯ ಅಧ್ಯಕ್ಷ ಎಂ.ಚಂದ್ರೇಗೌಡ, ಸದಸ್ಯರಾದ ಯೋಗೇಂದ್ರಬಾಬು, ಅಕ್ಬರ್, ಸಮೀರ್, ಮಂಜೇಗೌಡ, ಸಂಗಮ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಎಸ್‌ಸಿ, ಎಸ್‌ಟಿ ಹಾಸ್ಟೆಲ್ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಚಾಲನೆ



ಸುಮಾರು 2 ಕೋಟಿ ವೆಚ್ಚದಲ್ಲಿ ಹಾಸ್ಟೆಲ್‌ನ ಅಭಿವೃದ್ಧಿ ಕಾಮಗಾರಿಗಳಿಗೆ ಹಾಸನದಲ್ಲಿ ಶಾಸಕ ಸ್ವರೂಪ್ ಪ್ರಕಾಶ್ ಭೂಮಿಪೂಜೆ ನೆರವೇರಿಸಿದರು.

ಹಾಸನ: ನಗರದ ಆಕಾಶವಾಣಿ ಕೇಂದ್ರದ ಹಿಂಭಾಗ ಇರುವ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳ ಹಾಸ್ಟೆಲ್‌ನ ಸುಮಾರು 2 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸ್ವರೂಪ್ ಪ್ರಕಾಶ್ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, 2 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಲ್ಲಿ ಒಂದು ಡೈನಿಂಗ್ ಹಾಲ್, 6 ಕೊಠಡಿ ಸೇರಿದಂತೆ ಇತರೆ ಮೂಲ ಸೌಕರ್ಯದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಕಾಮಗಾರಿಗೆ ಸರ್ಕಾರದಿಂದ ಇದೀಗ 1ಕೋಟಿ ಬಿಡುಗಡೆಯಾಗಿದ್ದು, ಉಳಿದ ಹಣ ಶೀಘ್ರದಲ್ಲಿಯೇ ಬಿಡುಗಡೆಯಾಗುವ ವಿಶ್ವಾಸವಿದೆ ಎಂದು ಹೇಳಿದರು.

ನಗರ ವ್ಯಾಪ್ತಿಯಲ್ಲಿನ ಹಾಸ್ಟೆಲ್‌ನಲ್ಲಿ ಮೂಲ ಸೌಕರ್ಯ ಸೇರಿದಂತೆ ಇತರೆ ಸಮಸ್ಯೆಗಳ ಬಗ್ಗೆ ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಟಿ.ಶಾಂತಲಾ ಅವರು ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಖುದ್ದಾಗಿ ಸಮಸ್ಯೆಯನ್ನು ಆಲಿಸಲು ಹೆಚ್ಚುವರಿ ಜಿಲ್ಲಾಧಿಕಾರಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರೊಂದಿಗೆ ಮುಂದಿನ 2–3 ವಾರದಲ್ಲಿ ಸಮಯ ನಿಗದಿಪಡಿಸಲಾಗುವುದು. ವಿದ್ಯಾರ್ಥಿಗಳ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ 2 ಹೊಸ ವಸತಿ ಶಾಲೆಗಳ ಅಗತ್ಯವಿದೆ ಎಂಬುದನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ. ನಗರಸಭೆ ಮೇಲ್ದರ್ಜೆಗೆ ಏರಿಸಲಾಗಿದ್ದು, 25 ಹಳ್ಳಿಯ ಜೊತೆಗೆ 17 ಹಳ್ಳಿಯನ್ನು ಹೊಸದಾಗಿ ಸೇರ್ಪಡೆ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ. ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚುವರಿ 500 ಕೋಟಿ ಬಿಡುಗಡೆಗೂ ಪ್ರಸ್ತಾವ ಸಲ್ಲಿಸಿದ್ದು, ಈ ಬಾರಿಯ ಬಜೆಟ್‌ನಲ್ಲಿ ಘೋಷಣೆಯಾಗುವ ಸಾಧ್ಯತೆ ಇದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮನು ಕುಮಾರ್, ಎಂಜಿನಿಯರ್ ಅಣ್ಣಪ್ಪ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನವಶ್ರೀ, ಜೆಡಿಎಸ್ ಮುಖಂಡ ಕುಮಾರ್, ವಕ್ತಾರ ರಘು ಹೊಂಗೆರೆ ಇತರರಿದ್ದರು.

ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಬೇಟೆ: ರಾಜ್ಯದ 8 ಕಡೆಗಳಲ್ಲಿ ದಾಳಿ

ಬೆಂಗಳೂರು: ಆದಾಯ ಮೀರಿ ಆಸ್ತಿಗಳಿಸಿದ ಆರೋಪ ಹೊತ್ತ ರಾಜ್ಯದ ವಿವಿಧ ಭಾಗಗಳಲ್ಲಿ 8 ಸರ್ಕಾರಿ ಅಧಿಕಾರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಮೂಲಗಳ ಪ್ರಕಾರ, ಬೆಂಗಳೂರು, ಕೋಲಾರ, ತುಮಕೂರು, ಕಲಬುರಗಿ, ವಿಜಯಪುರ, ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ದಾಳಿ ನಡೆಸಲಾಗಿದೆ. 8 ಮಂದಿ ಭ್ರಷ್ಟ ಅಧಿಕಾರಿಗಳ ನಿವಾಸ, ಕಚೇರಿಗಳಲ್ಲಿ ದಾಳಿ ನಡೆಸಿ ಪರಿಶೀಲನೆ ನಡೆಸಲಾಗುತ್ತಿದೆ. ಬೆಂಗಳೂರಿನ ಡಿಪಿಎಆರ್ ಚೀಫ್ ಇಂಜಿನಿಯರ್ ಟಿ.ಡಿ.ನಂಜುಡಪ್ಪ, ಬಿಬಿಎಂಪಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್.ಬಿ.ಕಲ್ಲೇಶಪ್ಪ ಮನೆಗಳ ಮೇಲೆ ದಾಳಿ ನಡೆಸಲಾಗಿದೆ.

ಯಾರ್ಯಾರ ಮೇಲೆ ದಾಳಿ: ಬೆಂಗಳೂರಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಗ್ರೂಪ್ ಎ ಮುಖ್ಯ ಎಂಜಿನಿಯರ್ ಟಿ.ಡಿ.ನಂಜುಂಡಪ್ಪ; ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಹೆದ್ದಾರಿ ಎಂಜಿನಿಯರಿಂಗ್‌ನಲ್ಲಿ ಗುಣಮಟ್ಟ ನಿಯಂತ್ರಣ ಮತ್ತು ಗುಣಮಟ್ಟ ಭರವಸೆಯ ಕಾರ್ಯನಿರ್ವಾಹಕ ಎಂಜಿನಿಯರ್ ಗ್ರೇಡ್–1 ಕಲೇಶಪ್ಪ; ಕೋಲಾರದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ನಾಗರಾಜ್; ಕಲಬುರಗಿಯಲ್ಲಿ ಯೋಜನಾ ಅನುಷ್ಠಾನ ಘಟಕದ ಜಗನ್ನಾಥ್; ದಾವಣಗೆರೆಯ ಆರೋಗ್ಯ ಇಲಾಖೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಘಟಕದ ಜಿಲ್ಲಾ ಸಂಖ್ಯಾಶಾಸ್ತ್ರೀಯ ಅಧಿಕಾರಿ ಜಿ.ಎಸ್.ನಾಗರಾಜು ದಾಳಿಗೊಳಗಾದ ಅಧಿಕಾರಿಗಳಾಗಿದ್ದಾರೆ.

ತಾವರಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಉಪ ಮುಖ್ಯ ವೈದ್ಯಾಧಿಕಾರಿ ಡಾ.ಪಿ.ಜಗದೀಶ್; ಬಾಗಲಕೋಟೆಯ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಪ್ರಥಮ ದರ್ಜೆ ಸಹಾಯಕ ಮಾಳಪ್ಪ ಸಾಬಣ್ಣ ದುರ್ಗದ; ವಿಜಯಪುರದ ವಸತಿ ಮಂಡಳಿ ಎಫ್‌ಡಿಎ ಶಿವಾನಂದ ಶಿವಶಂಕರ್ ಕೆಂಭಾವಿ ಮೇಲೆ ದಾಳಿ ನಡೆಸಲಾಗಿದೆ. ದಾಳಿ ವೇಳೆ ನಗದು, ಚಿನ್ನಾಭರಣಗಳು, ಐಷಾರಾಮಿ ಮನೆಗಳು, ದುಬಾರಿ ವಾಹನಗಳು, ರಿಯಲ್ ಎಸ್ಟೇಟ್ ಮತ್ತು ವಿವಿಧ ಬಾಂಡ್‌ಗಳಲ್ಲಿ ಅವರ ಹೂಡಿಕೆಗಳಿಗೆ ಸಂಬಂಧಿಸಿದ ಅಪರಾಧ ದಾಖಲೆಗಳನ್ನು ಪತ್ತೆಹಚ್ಚಿದ್ದಾರೆ ಎಂದು ತಿಳಿಸಿವೆ.

ವಿದ್ಯಾರ್ಥಿಗಳು ಪರೀಕ್ಷೆಯನ್ನು ತಾತ್ಸಾರದಿಂದ ನೋಡಬಾರದು

ಪರೀಕ್ಷಾ ಸುಧಾರಣೆಗಳು ಕುರಿತ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಸಚಿವ ಡಾ.ಎನ್.ನಾಗರಾಜ್ ಅಭಿಮತ

ಮೈಸೂರು,ಮಾ.6(ಜಿಎ)–ಪರೀಕ್ಷೆಗಳೇ ಜೀವನದ ತಿರುವು. ವಿದ್ಯಾರ್ಥಿಗಳು ಪರೀಕ್ಷೆಯನ್ನು ತಾತ್ಸಾರದಿಂದ ನೋಡಬಾರದು ಎಂದು ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಡಾ.ಎನ್.ನಾಗರಾಜ್ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪರೀಕ್ಷಾ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪರೀಕ್ಷಾ ಸುಧಾರಣೆಗಳ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪರೀಕ್ಷಾ ಘನತೆಯನ್ನು ಕಾಪಾಡುವುದರ ಜೊತೆಗೆ, ವಿದ್ಯಾರ್ಥಿಗಳು ವಾಸ್ತವಿಕ ಗುರಿಗಳು, ಸಾಧಿಸಬಹುದಾದ ಗುರಿ ಮತ್ತು ಸಮಯದ ಅರಿವನ್ನು ತಿಳಿದುಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಯಶಸ್ಸಿನ ಹಿಂದೆ ಗುರುವಿನ ಪಾತ್ರ ಮುಖ್ಯವಾದದ್ದು. ವಿದ್ಯಾರ್ಥಿಗಳು ಅಂಕ ಪಡೆಯುವುದರ ಜೊತೆಗೆ ಉತ್ತಮ ಕೌಶಲ್ಯ ಬೆಳೆಸಿಕೊಳ್ಳುವುದು ಹೆಚ್ಚು ಅವಶ್ಯಕ ಎಂದು ಸಲಹೆ ನೀಡಿದರು.

ತರಗತಿಯ ಪರೀಕ್ಷೆಯ ಸಿದ್ಧತೆಗಿಂತ, ಜೀವನದ ಪರೀಕ್ಷೆಯ ಸವಾಲುಗಳು ಹಾಗೂ ಸಂಕಷ್ಟಗಳನ್ನು ಎದುರಿಸಲು, ವಿದ್ಯಾರ್ಥಿ ಜೀವನದಿಂದಲೇ ತಯಾರಿ ನಡೆಸಬೇಕು. ಪರೀಕ್ಷೆಯಲ್ಲಿ ನಾವು ಗಳಿಸಿದ ಅಂಕಗಳು ನಮ್ಮ ಜೀವನ ಕಟ್ಟಿಕೊಡುತ್ತವೆ ಅದರ ಜೊತೆಯಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪರೀಕ್ಷಾ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪರೀಕ್ಷಾ ಸುಧಾರಣೆಗಳು ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಮೈಸೂರು ವಿವಿ ಕುಲಸಚಿವ(ಪರೀಕ್ಷಾಂಗ) ಡಾ.ಎನ್.ನಾಗರಾಜ್ ಉದ್ಘಾಟಿಸಿದರು.

ಮೈಸೂರು ವಿವಿ ಪರೀಕ್ಷಾ ಸುಧಾರಣಾ ಕೋಶದ ನಿವೃತ್ತ ಸಂಖ್ಯಾಶಾಸ್ತ್ರಜ್ಞ ಡಾ.ಎಂ.ಎನ್.ನರಸಿಂಹಮೂರ್ತಿ ಮಾತನಾಡಿ, ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ಪರೀಕ್ಷಾ ಪದ್ಧತಿ ಬ್ರಿಟಿಷ್‌ರಿಂದ ಬಳುವಳಿಯಾಗಿ ಬಂದದ್ದು, ನಾವು ಈ ವ್ಯವಸ್ಥೆಯನೇ ಮುಂದುವರಿಸುತ್ತಿದ್ದೇವೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಹಾಗಾಗಿ ನಾವು ಸುಧಾರಿಸಬೇಕಿದೆ. ಅಂದಿನ ದಿನಮಾನಗಳಲ್ಲಿ ಪರೀಕ್ಷೆ ನಡೆಸುವುದು ತುಂಬಾ ಕಷ್ಟಕರವಾಗಿತ್ತು. ಆದರೆ ಇಂದು ತಂತ್ರಜ್ಞಾನದ ಕ್ರಾಂತಿಯಿಂದ ಪರೀಕ್ಷಾ ಪದ್ಧತಿ ಸಾಕಷ್ಟು ಸುಧಾರಿಸಿದೆ ಎಂದು ವಿವರಿಸಿದರು.

ಕರಾಮುವಿ ಪರೀಕ್ಷಾಂಗ ಕುಲಸಚಿವ ಡಾ.ಹೆಚ್. ವಿಶ್ವನಾಥ್ ಮಾತನಾಡಿ, ಶಿಕ್ಷಣ ಎನ್ನುವುದು ಸೋಮಾರಿಗಳ ಸ್ವತ್ತಲ್ಲ; ಅದು ಸಾಧಕರ ಸ್ವತ್ತು. ವಿದ್ಯಾರ್ಥಿಗಳು ಅಧ್ಯಾಪಕರ ಪಾಠ ಪ್ರವಚನಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡರೆ ಪರೀಕ್ಷೆ ಸುಲಭವಾಗುತ್ತದೆ. ಗುರು ಶಿಷ್ಯರ ಸಂಬಂಧ ಶ್ರೇಷ್ಠವಾಗಿರಬೇಕು. ಅಧ್ಯಾಪಕರು ಶಿಷ್ಯರನ್ನು ಮಹತ್ವದ ಸ್ಥಾನಕ್ಕೆ ಕೊಂಡೊಯ್ದರೆ ಆಗ ಇಬ್ಬರಿಗೂ ಶ್ರೇಯಸ್ಸು ಎಂದು ತಿಳಿಸಿದರು.

ನಂತರ ನಡೆದ ಗೋಷ್ಠಿಯಲ್ಲಿ ಡಾ.ಎಂ.ಎನ್. ನರಸಿಂಹಮೂರ್ತಿ ಅವರು ಪರೀಕ್ಷೆಯಲ್ಲಿ ಶೈಕ್ಷಣಿಕ ಸುಧಾರಣೆಗಳು, ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್. ಸುರೇಶ್ ಪರೀಕ್ಷಾ ಕಾರ್ಯಕ್ಷಮತೆಯ ಮೌಲ್ಯಮಾಪನ ಮತ್ತು ಅಕ್ರಮಗಳಿಗೆ ಸಂಬಂಧಿಸಿದ ವಿಶೇಷ ಪ್ರಕರಣಗಳು ಕುರಿತು ಮಾತನಾಡಿದರು. ಗುಂಪು ಚರ್ಚೆ ಮತ್ತು ಪ್ರತಿಕ್ರಿಯೆಯಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಪಿ.ಶಿವಾನಂದಭಾರತಿ, ಪ್ರಾಂಶುಪಾಲ ಡಾ.ರೇಚಣ್ಣ, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂ.ಸ್ವಾಮಿ ಹಾಗೂ ಅಧ್ಯಾಪಕರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ರೇಚಣ್ಣ, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂಸ್ವಾಮಿ, ಪ್ರಾಧ್ಯಾಪಕರಾದ ಲಲಿತಾಬಿ, ಬಿ.ಸೌಮ್ಯ, ಡಾ.ಡಿ.ಎಂ. ಲೋಕೇಶ್ವರಿ ಆರ್.ಎಸ್. ಕುಮಾರ್, ಪುಷ್ಪಲತಾ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಸೇವಾ ಕಾರ್ಯಗಳೊಂದಿಗೆ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಹುಟ್ಟುಹಬ್ಬ ಆಚರಣೆ...





ಮೈಸೂರು ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾದ ಆರ್.ರಾಕೇಶ್ ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಕನ್ನೇಗೌಡ ಟೈಗರ್ಸ್ ಹಾಗೂ ರಾಕೇಶ್ ಗೆಳೆಯರ ಬಳಗದ ವತಿಯಿಂದ ಉಚಿತ ಬೃಹತ್ ಆರೋಗ್ಯ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಬಡ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು. ಈ ವೇಳೆ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ಮುಖಂಡರಾದ ಜೋಗಿ ಮಂಜು, ಭೀಮಾ ಮಹೇಶ್, ರವಿ, ವಿವೇಕ್, ಪ್ರವೀಣ್, ಕಾರ್ತಿಕ್ ಗೌಡ(ಪಂಪ), ದಿಲೀಪ್, ಕಿರಣ್, ಮನು, ಭರತ್, ಪೃಥ್ವಿ ಇತರರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟಕ್ಕೆ ಬಿದ್ದ ಬೆಂಕಿ ನಂದಿಸಲು ಅಗ್ನಿಶಾಮಕ ದಳದ ವಾಹನಗಳಿಗೆ ನೀರು ನೀಡಲು ನಿರಾಕರಣೆ

ಮಾಲ್ ಆಫ್ ಮೈಸೂರು ಆಡಳಿತ ಮಂಡಳಿಗೆ ಜಿಲ್ಲಾಧಿಕಾರಿ ನೋಟಿಸ್

ಮೈಸೂರು, ಮಾ.6(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟದ ಅರಣ್ಯಕ್ಕೆ ಬೆಂಕಿ ಬಿದ್ದು ಕಾಡ್ಗಿಚ್ಚು ಉಂಟಾದ ವೇಳೆ ಬೆಂಕಿ ನಂದಿಸಲು ಅಗ್ನಿಶಾಮಕ ವಾಹನಗಳಿಗೆ ನೀರು ನೀಡದ ನಗರದ ಮಾಲ್ ಆಫ್ ಮೈಸೂರ್ ಆಡಳಿತ ಮಂಡಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು ನೋಟಿಸ್ ಜಾರಿ ಮಾಡಿದ್ದಾರೆ.

ನಗರದ ಎಂ.ಜಿ.ರಸ್ತೆಯಲ್ಲಿರುವ ಮಾಲ್ ಆಫ್ ಮೈಸೂರ್ ಉಪಾಧ್ಯಕ್ಷ ಸಂದೀಪ್ ಅವರಿಗೆ ನೋಟಿಸ್ ನೀಡಲಾಗಿದೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಫೆಬ್ರವರಿ 2 ರಂದು ಉಂಟಾದ ಕಾಡ್ಗಿಚ್ಚು ಇಡೀ ಅರಣ್ಯವನ್ನು ಆವರಿಸಿಕೊಳ್ಳುತ್ತಿತ್ತು. ಈ ಸಂದರ್ಭದಲ್ಲಿ ಅಗ್ನಿಶಾಮಕ ವಾಹನಗಳಿಗೆ ನೀರು ಒದಗಿಸುವಂತೆ ಹತ್ತಿರದಲ್ಲೇ ಇದ್ದ ಮಾಲ್ ಆಫ್ ಮೈಸೂರ್‌ಗೆ ಸೂಚಿಸಲಾಯಿತು. ಸ್ವತಃ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಆದೇಶ ನೀಡಿದರೂ ಮಾಲ್ ಆಫ್ ಮೈಸೂರ್ ಆಡಳಿತ ಮಂಡಳಿ ನೀರು ಕೊಡಲು ನಿರಾಕರಿಸಿತು. ಇದರಿಂದ ಚಾಮುಂಡಿ ಬೆಟ್ಟದ ಅರಣ್ಯ ಪ್ರದೇಶದಲ್ಲಿ ಬೆಂಕಿ ನಂದಿಸುವ ಕಾರ್ಯ ವಿಳಂಬವಾಯಿತು ಎಂದು ಹೇಳಿದ್ದಾರೆ.



ಅಗ್ನಿ ವಿಪತ್ತು ಸಂದರ್ಭಗಳಲ್ಲಿ ನೀರು ಕೊಟ್ಟು ಸಹಕರಿಸದಿರುವ ಮಾಲ್ ಆಫ್ ಮೈಸೂರ್ ಆಡಳಿತ ಮಂಡಳಿ ವಿಪತ್ತು ನಿರ್ವಹಣಾ ಕಾಯ್ದೆ 2005 ಉಲ್ಲಂಘನೆ ಮಾಡಿದೆ. ವಿಪತ್ತಿನ ಸಂದರ್ಭದಲ್ಲಿ ತುರ್ತು ರಕ್ಷಣಾ ಕಾರ್ಯಚರಣೆ ಕೈಗೊಳ್ಳಲು ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಬಳಿ ಲಭ್ಯವಿರುವ ಸಂಪನ್ಮೂಲ ಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ ಎಂದು ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ಅದರಂತೆ ಚಾಮುಂಡಿಬೆಟ್ಟದ ಅರಣ್ಯದಲ್ಲಿ ಬೆಂಕಿ ನಂದಿಸಲು ನೀರಿನ ಅಗತ್ಯತೆ ಇದ್ದ ಕಾರಣ ಹತ್ತಿರದಲ್ಲಿನ ತಮ್ಮ ಕಟ್ಟಡದಲ್ಲಿ ಶೇಖರಿಸಿದ್ದ ನೀರನ್ನು ಬಳಸಿಕೊಳ್ಳಲು ಉದ್ದೇಶಿಸಲಾಯಿತು. ಈ ಕುರಿತಂತೆ ಜಿಲ್ಲಾಡಳಿತದ ನಿರ್ದೇಶನವಿದ್ದರೂ ಅಗ್ನಿಶಾಮಕ ವಾಹನಗಳಿಗೆ ನೀರು ಒದಗಿಸಿಲ್ಲ. ಇದರಿಂದ ಚಾಮುಂಡಿಬೆಟ್ಟದ ಅರಣ್ಯ ಪ್ರದೇಶದಲ್ಲಿ ಹರಡಿದ್ದ ಬೆಂಕಿ ನಂದಿಸುವ ಕಾರ್ಯ ವಿಳಂಬವಾಗಿದೆ ಎಂದು ಹೇಳಿದ್ದಾರೆ

ಪ್ರಾಧಿಕಾರದ ನಿರ್ದೇಶನ ಇದ್ದರೂ ತುರ್ತು ಪರಿಸ್ಥಿತಿಯಲ್ಲಿ ಅಗ್ನಿಶಾಮಕ ವಾಹನಗಳಿಗೆ ನೀರು ಒದಗಿಸದೆ ಇರುವುದಕ್ಕೆ ವಿಪತ್ತು ನಿರ್ದೇಶನಾ ಕಾಯ್ದೆ ಏಕೆ ಅಗತ್ಯ ಕ್ರಮ ಜರುಗಿಸಬಾರದು ಎಂದು ನೋಟಿಸ್ ನೀಡಲಾಗಿದೆ. ಈ ನೋಟಿಸ್ ಪಡೆದ ಮೂರು ದಿನದೊಳಗೆ ಲಿಖಿತ ಉತ್ತರ ಮತ್ತು ಸಮಜಾಯಿಷಿ ನೀಡಬೇಕು. ತಪ್ಪಿದ್ದಲ್ಲಿ ಸಮಜಾಯಿಷಿ ನೀಡಿಲ್ಲವೆಂದು ಪರಿಗಣಿಸಿ ವಿಪತ್ತು ನಿರ್ವಹಣಾ ಕಾಯ್ದೆಯಡಿ ನಿಮ್ಮ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಲಕ್ಷ್ಮಿಕಾಂತ ರೆಡ್ಡಿ ಎಚ್ಚರಿಸಿದ್ದಾರೆ.

ವಿವಿಧ ವಿವಿ ಸಂಶೋಧನಾ ವಿದ್ಯಾರ್ಥಿಗಳಿಂದ 'ಹಾಡಿ' ಅಧ್ಯಯನ



ನಾಗರಹೊಳೆ ಅಭಯಾರಣ್ಯದ ನಾಗರಹೊಳೆ ಗದ್ದೆ ಹಾಡಿಗೆ ಸಂಶೋಧನಾ ವಿದ್ಯಾರ್ಥಿಗಳು ಭೇಟಿ ನೀಡಿ, ಬುಡಕಟ್ಟು ಜನರಿಂದ ಮಾಹಿತಿ ಕಲೆ ಹಾಕಿದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹಾಡಿ ಜನರ ಜೀವನ ಶೈಲಿ ಮಾಹಿತಿ ಸಂಗ್ರಹ

ಮೈಸೂರು, ಮಾ.6(ಎಂಟಿವೈ)– ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆಯುತ್ತಿರುವ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಸಂಶೋಧನಾ ವಿದ್ಯಾರ್ಥಿಗಳು ನಾಗರಹೊಳೆಯ ಹುಲಿ ಸಂರಕ್ಷಿತ ಪ್ರದೇಶದ ವಿವಿಧ ಹಾಡಿಗಳಿಗೆ ಭೇಟಿ ನೀಡಿ ಬುಡಕಟ್ಟು ಜನರೊಂದಿಗೆ ಸಮಾಲೋಚಿಸಿದರು.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆಯುತ್ತಿರುವ ಕಾರ್ಯಾಗಾರದಲ್ಲಿ ಭಾಗವಹಿಸಿರುವ ಸಂಶೋಧನಾ ವಿದ್ಯಾರ್ಥಿಗಳು ಹಾಡಿ ಮತ್ತು ಬುಡಕಟ್ಟು ಜನರ ಜೀವನ ಶೈಲಿ, ಹಾಡಿ ಸಂಸ್ಕೃತಿ ಸೇರಿದಂತೆ ವಿವಿಧ ಆಚಾರ–ವಿಚಾರ ಅವಲೋಕಿಸಲು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಾಗರ ಹೊಳೆಯ ಗದ್ದೆ ಹಾಡಿ ಹಾಗೂ ನಾಣಚ್ಚಿ ಗದ್ದೆ ಹಾಡಿಗಳಿಗೆ ಭೇಟಿ ನೀಡಿದರು. ನಾಣಚ್ಚಿ ಗದ್ದೆ ಹಾಡಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳ ಜನರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಆರೋಗ್ಯ ವಿಷಯಗಳನ್ನು ಕುರಿತು ಕ್ಷೇತ್ರ ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸಿದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಡಾ.ಮೋಹನ್, ಮಂಜುನಾಥ್, ಸೋಲಿಗ ಸಮುದಾಯದ ಮುಖಂಡ ಡಾ.ಸಿ.ಮಾದೇಗೌಡ, ಡಾ.ಮಧು ಗುಂಡ್ಲುಪೇಟೆ, ಡಾ.ರವಿಕುಮಾರ್, ಬಿ.ಆರ್.ಭವ್ಯ, ಹೇಮಚಂದ್ರ, ತಾಲ್ಲೂಕು ಕಲ್ಯಾಣಾಧಿಕಾರಿ ತೇಜ್‌ರಾಜ್, ಬಸವರಾಜು, ವೆಂಕಟೇಶ್ ಪ್ರಸಾದ್, ಸಮುದಾಯದ ಮುಖಂಡರಾದ ರಮೇಶ್ ಜೆ.ಬಿ., ರಾಮಕೃಷ್ಣ ಜೆ.ಎಸ್. ಹಾಜರಿದ್ದರು.

ಶ್ರೀ ರಾಘವೇಂದ್ರ ಗುರು ಸರ್ವಭೌಮರ ಪಟ್ಟಾಭಿಷೇಕ; ವರ್ಧಂತಿ ಮಹೋತ್ಸವ



ಮೈಸೂರು ಅಗ್ರಹಾರದ ಉತ್ತರಾದಿ ಮಠದ ಶ್ರೀ ದೇವೇಂದ್ರ ತೀರ್ಥ ಪ್ರತಿಷ್ಠಾನ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನದಲ್ಲಿ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ ನಡೆಯಿತು.

ಮೈಸೂರು, ಮಾ. 6– ಅಗ್ರಹಾರದ ಉತ್ತರಾದಿ ಮಠದ ಶ್ರೀ ದೇವೇಂದ್ರ ತೀರ್ಥ ಪ್ರತಿಷ್ಠಾನ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನದಲ್ಲಿ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವದ ಅಂಗವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ಪಂಚಾಮೃತ ಅಭಿಷೇಕ, ಹಾಲಿನ ಅಭಿಷೇಕ, ವಿವಿಧ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಉತ್ತರಾದಿ ಮಠದ ವ್ಯವಸ್ಥಾಪಕರಾದ ಪಂಡಿತ್ ಅನಿರುದ್ಧ ಆಚಾರ್ ಪಾಂಡುರಂಗಿ, ಮಠದ ಪ್ರಧಾನ್ ಅರ್ಚಕರಾದ ಹರೀಶ್, ಎಸ್.ಬಿ.ವಾಸುದೇವ ಮೂರ್ತಿ, ಕಾಂಗ್ರೆಸ್ ಮುಖಂಡ ನವೀನ್ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಎಂ.ಎಸ್.ಹರ್ಷಿತಾ ವೈಇಪಿಗೆ ಆಯ್ಕೆಯಾಗಿ ವಿದೇಶ ಪ್ರವಾಸ

ಮೈಸೂರು,ಮಾ.6(ಪಿಎಂ)– ರಾಷ್ಟ್ರ ರಾಜಧಾನಿ ದೆಹಲಿಯ ಪ್ರತಿಷ್ಠಿತ ಕಾರ್ಯಕ್ರಮವಾದ 75ನೇ ಗಣರಾಜ್ಯೋತ್ಸವದ (2024) ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನಕ್ಕೆ ಭಾಜನರಾಗಿ ಚಿನ್ನದ ಪದಕ ಪಡೆದಿದ್ದ ಮೈಸೂರಿನ ಎಂ.ಎಸ್.ಹರ್ಷಿತಾ, ಯೂತ್ ಎಕ್ಸ್‌ಚೈಂಜ್ ಪ್ರೋಗ್ರಾಂಗೆ (ವೈಇಪಿ) ಆಯ್ಕೆಯಾಗುವ ಮೂಲಕ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ.



ಯೂತ್ ಎಕ್ಸ್‌ಚೈಂಜ್ ಪ್ರೋಗ್ರಾಂಗೆ ಆಯ್ಕೆಯಾದ ಏಕೈಕ ಎನ್‌ಸಿಸಿ ಕೆಡೆಟ್ ಇವರಾಗಿದ್ದಾರೆ. ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ಪದವಿ ವ್ಯಾಸಂಗ ಮಾಡುತ್ತಿರುವ ಹರ್ಷಿತಾ, ಮೈಸೂರಿನ ಸರಸ್ವತಿಪುರಂನ ಹೇಮಲತಾ ಮತ್ತು ಎಂ.ಶಿವಮೂರ್ತಿ ದಂಪತಿ ಪುತ್ರಿಯಾಗಿದ್ದಾರೆ.

ನಾಳೆ ತಾಂಡವಪುರದಲ್ಲಿ ಉದ್ಯೋಗ ಮೇಳ

ಮೈಸೂರು: ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಮಾ.8ರಂದು ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ನಂಜನಗೂಡು ತಾಲೂಕಿನ ತಾಂಡವಪುರದಲ್ಲಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಕರ್ನಾಟಕ ಕೌಶಲಾಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೌಶಲ ಮಿಷನ್, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಹಾರಾಜ ತಾಂತ್ರಿಕ ವಿದ್ಯಾಲಯ ಸಹಯೋಗದಲ್ಲಿ ಆಯೋಜಿಸುತ್ತಿರುವ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಯಾವುದೇ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ ಉದ್ಯೋಗಾಸಕ್ತರು ಭಾಗವಹಿಸಬಹುದು ಎಂದು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಕೆ.ನಾರಾಯಣಮೂರ್ತಿ ತಿಳಿಸಿದ್ದಾರೆ.

ಕಳೆದ ಬಾರಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಸಾವಿರಾರು ಮಂದಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಒಂದಷ್ಟು ಆಸಕ್ತರಿಗೆ ಸ್ಥಳದಲ್ಲಿಯೇ ಉದ್ಯೋಗಾವಕಾಶ ಪತ್ರ ವಿತರಿಸಲಾಗಿತ್ತು. ಈ ಬಾರಿ ಗ್ರಾಮೀಣ ಪ್ರದೇಶದವರಿಗೆ ಅನುಕೂಲವಾಗಲೆಂದು ನಂಜನಗೂಡು ತಾಲೂಕಿನ ಕೈಗಾರಿಕೆ ಪ್ರದೇಶವಿರುವ ತಾಂಡವಪುರದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದರು.

ನೂರಕ್ಕೂ ಹೆಚ್ಚು ಕಂಪನಿ: ಉದ್ಯೋಗ ಅವಕಾಶ ನೀಡುವ ನೂರಕ್ಕೂ ಹೆಚ್ಚು ಕಂಪನಿ, ಸಂಸ್ಥೆಗಳು ಮೇಳದಲ್ಲಿ ಭಾಗವಹಿಸಲಿವೆ. ಕೈಗಾರಿಕೆ ವಲಯದ ಸಂಸ್ಥೆಗಳು, ಸಾಫ್ಟ್‌ವೇರ್, ಮಾರ್ಕೆಟಿಂಗ್, ಎನ್‌ಜಿಒ, ಸ್ವಸಹಾಯ ಸಂಘಗಳು, ಸ್ಥಳೀಯ ಕಂಪನಿಗಳು ಪಾಲ್ಗೊಳ್ಳಲಿವೆ. ಮಾಹಿತಿಗೆ: 9900312141, 821751 1468 ಸಂಪರ್ಕಿಸಲು ತಿಳಿಸಿದ್ದಾರೆ.

ನಾಳೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಮಾ.6(ಎಸ್‌ಪಿಎನ್)–ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಮಾ.8ರಂದು ಸಂಜೆ 4.30ರಿಂದ 5.30ರವರೆಗೆ 870 ಸಂಚಿಕೆಯ ಕಥೆ ಕೇಳೋಣ ಬನ್ನಿ ಕಾರ್ಯಕ್ರಮದಲ್ಲಿ ಸಾಹಿತಿ ಮತ್ತು ಚುಕ್ಕಿ ಚಿತ್ರದ ಕಲಾವಿದ, ಕರ್ನಾಟಕ ವಿಧಾನಸಭೆಯ ನಿವೃತ್ತ ಅಭಿಲೇಖನಾಧಿಕಾರಿ ಮೋಹನ್ ವರ್ಣೇಕರ್ ಮಕ್ಕಳಿಗೆ ಕಥೆ ಹೇಳಲಿದ್ದಾರೆ. ವಿವರಗಳಿಗೆ ಮೊ.: 9243581097, 9945943115 ಸಂಪರ್ಕಿಸಿ.

ಮಹದೇವಪುರ ಗ್ರಾಪಂಗೆ ಅಧ್ಯಕ್ಷರ ಆಯ್ಕೆ



ಶ್ರೀರಂಗಪಟ್ಟಣ ತಾಲೂಕು ಕಸಬಾ ಹೋಬಳಿ ಮಹದೇವಪುರ ಗ್ರಾಪಂಗೆ ಸುನಿತಾ ಶಿವಕುಮಾರ್‌ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದವರು ರಾಜಿನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಈ ಚುನಾವಣೆ ನಡೆಸಲಾಯಿತು. ಇದೇ ವೇಳೆ ವಿಜೇತರನ್ನು ಗ್ರಾಮಸ್ಥರು ಮತ್ತು ಸದಸ್ಯರು ಅಭಿನಂದಿಸಿದರು.

ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಪ್ರದರ್ಶನ



ಉತ್ತರ ಪ್ರದೇಶದ ಶ್ರೀರಾಮನ ಜನ್ಮ ಸ್ಥಳ ಅಯೋಧ್ಯೆಯ ರಾಮಕಥಾ ಪಾರ್ಕ್‌ನಲ್ಲಿ ತಾಲೂಕಿನ ಆನೆಗೊಳ ಗ್ರಾಮ ದೇವತೆ ಶ್ರೀ ಆನೆಗೋಳದಮ್ಮ ಹಾಗೂ ಶ್ರೀ ಆಂಜನೇಯ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ಸಂಪೂರ್ಣ ರಾಮಾಯಣ ಅಥವಾ ಶ್ರೀ ರಾಮ ರಾವಣನ ಯುದ್ಧ ಎಂಬ ಪೌರಾಣಿಕ ನಾಟಕವು ಬೋಳಮಾರನಹಳ್ಳಿ ಗ್ರಾಮದ ನಿವೃತ್ತ ಇಂಜಿನಿಯರ್ ಜಯಲಿಂಗೇಗೌಡ ಹಾಗೂ ಹೇಮಾವತಿ ಸಕ್ಕರೆ ಕಾರ್ಖಾನೆಯ ಮಾಜಿ ಉಪಾಧ್ಯಕ್ಷ ಬಿ.ಎಸ್.ಮಂಜುನಾಥ್ ನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆಯಿತು.

ನೂತನ ನಿರ್ದೇಶಕರಿಗೆ ಸನ್ಮಾನ



ಮಂಡ್ಯ ಜಿಲ್ಲಾ ಮನ್‌ಮುಲ್ ಘಟಕಕ್ಕೆ ನಿರ್ದೇಶಕರಾಗಿ ಆಯ್ಕೆಯಾದ ಅಪ್ಪಾಜಿಗೌಡ ಮತ್ತು ಲಕ್ಷ್ಮಿ ನಾರಾಯಣ್ ಅವರನ್ನು ಮಂಡ್ಯ ಮನ್ಮುಲ್ ಉಪ ಕಚೇರಿಯಲ್ಲಿ ಸನ್ಮಾನಿಸಲಾಯಿತು. ತಾಲೂಕು ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ರಮೇಶ್, ನಾಗರಾಜು, ಜುಟ್ಟನಹಳ್ಳಿ ರಾಮು, ಜಗದೀಶ್ ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಕಾಂಗ್ರೆಸ್ ವಿಫಲ ಆರೋಪ

ಮಂಡ್ಯದಲ್ಲಿ ಜೆಡಿಎಸ್ ಪ್ರತಿಭಟನೆ

ಮಂಡ್ಯ: ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಸೇರಿದ ಜೆಡಿಎಸ್ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾತನಾಡಿ, ಮೈಕ್ರೋ ಫೈನಾನ್ಸ್ ಹಾವಳಿಯಿಂದ ರಾಜ್ಯದಲ್ಲಿ ಆತ್ಮಹತ್ಯೆ ಹಾಗೂ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಆರೋಪಿಸಿದರು.

ಗೃಹಲಕ್ಷ್ಮಿಯರಿಗೆ ಪ್ರತಿ ತಿಂಗಳು ನೀಡುತ್ತಿದ್ದ 2 ಸಾವಿರ ರೂ. ಅನ್ನು ಕಳೆದ ನಾಲ್ಕೈದು ತಿಂಗಳಿಂದ ನೀಡಿಲ್ಲ. ರಾಜ್ಯ ಸರ್ಕಾರ ಈ ಹಣವನ್ನು ರಾಜ್ಯದಲ್ಲಿ ನಡೆಯುವ ಚುನಾವಣೆ ಹಾಗೂ ಉಪಚುನಾವಣೆಗಳ ಸಮಯಕ್ಕೆ ಸರಿಯಾಗಿ ಹೊಂದಿಸಿಕೊಂಡು ವರ್ಗಾವಣೆ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿದೆ. ಮುಂದಿನ ದಿನಗಳಲ್ಲಿ ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ವೇಳೆ ಈ ಹಣವನ್ನು ವರ್ಗಾಯಿಸಲು ಕಾಯುತ್ತಿದೆ. ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸಲು ಘೋಷಿಸಿದೆ ಆದರೆ, ಈ ಯೋಜನೆಯಡಿ ಸ್ಥಿರವಾದ ಮತ್ತು ನಿರಂತರ ವಿದ್ಯುತ್ ಸೌಲಭ್ಯವನ್ನು ಒದಗಿಸುತ್ತಿಲ್ಲ ನೋಂದಾಯಿತ ಕುಟುಂಬಗಳಿಗೆ ಉಚಿತವಾಗಿ ಒದಗಿಸಿದ ವಿದ್ಯುತ್ ಬಿಲ್ಲನ್ನು ಸಂಬಂಧಿಸಿದ ವಿತರಣಾ ಕಂಪನಿಗಳಿಗೆ ಮರು ಪಾವತಿಸಿಲ್ಲ ಎಂದರು.

ಅಗತ್ಯ ವಸ್ತುಗಳ ಬೆಲೆ ಏರಿಸಿ ಗ್ರಾಹಕರಿಗೆ ಕಾಂಗ್ರೆಸ್ ಸರ್ಕಾರ ಬರೆ ಎಳೆಯುತ್ತಿದೆ. ಆದ್ದರಿಂದ ರಾಜ್ಯದ ಜನತೆ ಎಚ್ಚೆತ್ತುಕೊಳ್ಳಬೇಕು. ಐದು ಕೆಜಿ ಅಕ್ಕಿ ಬದಲಾಗಿ ಪ್ರತಿ ಕೆಜಿ ಅಕ್ಕಿಗೆ 34 ರೂ.ನಂತೆ 680 ರೂ.ಗಳನ್ನು ಕುಟುಂಬದ ಖಾತೆಗೆ ಪ್ರತಿ ತಿಂಗಳು ವರ್ಗಾಹಿಸುತ್ತಿತ್ತು. ಆದರೆ, ಕಳೆದ 5 ತಿಂಗಳಿಂದ ಬಿಡುಗಡೆ ಮಾಡಬೇಕಾಗಿರುವ 5786 ಕೋಟಿ ರೂ.ಗಳನ್ನು ಫಲಾನುಭವಿಗಳ ಖಾತೆಗೆ ವರ್ಗಾಹಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪದವೀಧರ ನಿರುದ್ಯೋಗಿ ಯುವಕ-ಯುವತಿಯರಿಗೆ 3000 ಸಾವಿರ ಹಾಗೂ ಡಿಪ್ಲೊಮಾ ಪಾಸಾದವರಿಗೆ 1500 ರೂ. ಘೋಷಿಸಿತ್ತು ಈ ಯೋಜನೆಯನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಈ ಮೂಲಕ ನಿರುದ್ಯೋಗಿ ಯುವಕ-ಯುವತಿಯರ ಬದುಕಿನಲ್ಲಿ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಕ್ತಿ ಯೋಜನೆಯಿಂದ ಶಾಲಾ-ಕಾಲೇಜು ಮಕ್ಕಳು ಸಾರಿಗೆ ವಾಹನದಲ್ಲಿ ಸಂಚಾರ ಮಾಡಲು ಹರಸಹಾಸ ಪಡಬೇಕಾಗಿದೆ. ಉಚಿತ ಪ್ರಯಾಣದಿಂದ ರಾಜ್ಯ ಸರ್ಕಾರದ ಸಾರಿಗೆ ಸಂಸ್ಥೆಗಳಿಗೆ ಸರಿಯಾಗಿ ಹಣ ವರ್ಗಾವಣೆ ಮಾಡದಿರುವುದರಿಂದ ಸಾರಿಗೆ ಸಂಸ್ಥೆಗಳು ಆರ್ಥಿಕ ನಷ್ಟ ಅನುಭವಿಸುವಂತಾಗಿದೆ ಎಂದರು.

ಬಿತ್ತನೆ ಬೀಜಗಳ ದರ ಏರಿಕೆಯಿಂದ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ.



ಮಂಡ್ಯದ ಜಿಲ್ಲಾಧಿಕಾರಿ ಕಚೇರಿ ಬಳಿ ಜೆಡಿಎಸ್ ಪ್ರತಿಭಟನೆ ನಡೆಸಿತು.

ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ರಾಜ್ಯ ಸರ್ಕಾರ ಖಜಾನೆ ಖಾಲಿಯಾಗಿದ್ದು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನರು ಜೀವನ ನಡೆಸುವುದೇ ಕಷ್ಟವಾಗಿದೆ ಎಂದರು.

ರಾಜ್ಯದಲ್ಲಿ ಬ್ಯಾಂಕ್ ದರೋಡೆ, ಮಾದಕ ವಸ್ತುಗಳ ಮಾರಾಟ ಹಾಗೂ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಲು ಸಂಪೂರ್ಣ ವಿಫಲವಾಗಿದೆ ಎಂದು ಹರಿಹಾಯ್ದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಡಾ.ಕೆ. ಅನ್ನದಾನಿ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರಸಭೆ ಅಧ್ಯಕ್ಷ ಪ್ರಕಾಶ್, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ನಗರಸಭೆ ಸದಸ್ಯೆ ಮೀನಾಕ್ಷಿ ಪುಟ್ಟಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

ಮಂಡ್ಯ ವೈದ್ಯಕೀಯ ಕಾಲೇಜು ಮೇಲ್ದರ್ಜೆಗೇರಿಸಲು ಕ್ರಮ

ಬೆಂಗಳೂರು: ಮಂಡ್ಯ ವೈದ್ಯಕೀಯ ಕಾಲೇಜು ಮೇಲ್ದರ್ಜೆಗೇರಿಸುವ ಜೊತೆಗೆ ನವೀಕರಣ ಕಾಮಗಾರಿಗಳಿಗೆ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣು ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ

ವಿಕಾಸಸೌಧದ ಸಮಿತಿ ಕೊಠಡಿಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿಯವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ನೇತೃತ್ವದಲ್ಲಿ ನಡೆದ ಮಂಡ್ಯ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಅಭಿವೃದ್ಧಿ ಕುರಿತು ವಿಸ್ತೃತ ಚರ್ಚೆಯ ನಂತರ ಉಭಯ ಸಚಿವರು, ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಿ, ಎಲ್ಲಾ ರೀತಿಯ ಅಗತ್ಯ ನೆರವು ನೀಡುವ ಭರವಸೆ ನೀಡಿದರು.

ಹಾಲಿ ಆಸ್ಪತ್ರೆಯಲ್ಲಿ 400 ಹಾಸಿಗೆಗಳಿಗೆ ಅನುಮೋದನೆ ಇದ್ದರೂ ಸಹ 800ಕ್ಕೂ ಅಧಿಕ ರೋಗಿಗಳನ್ನು ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಹೀಗಾಗಿ ಇದನ್ನು 850 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಅಗತ್ಯ ಇದೆ ಎಂದು ಸಭೆಯಲ್ಲಿ ಸಚಿವರಾದ ಚಲುವರಾಯಸ್ವಾಮಿಯವರು ಗಮನ ಸೆಳೆದರು.



ವೈದ್ಯಕೀಯ ಶಿಕ್ಷಣ ಸಚಿವ ಶರಣು ಪ್ರಕಾಶ್ ಪಾಟೀಲ್ ಜೊತೆ ಚರ್ಚೆ ನಡೆಸುತ್ತಿರುವುದು.

ಇದಕ್ಕೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವರು, ಪರಿಸರ ಇಲಾಖೆ ಪರವಾನಗಿ ನವೀಕರಿಸಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ತಿಳಿಸಿದರು. ಇದೇ ರೀತಿ ವಿದ್ಯಾರ್ಥಿಗಳ ಸಂಖ್ಯೆಯನ್ನು 200 ರಿಂದ 250ಕ್ಕೆ ಹೆಚ್ಚಿಸುವಂತೆ ಕೃಷಿ ಸಚಿವರಾದ ಚಲುವರಾಯಸ್ವಾಮಿಯವರು ವೈದ್ಯಕೀಯ ಶಿಕ್ಷಣ ಸಚಿವರಿಗೆ ಮನವಿ ಮಾಡಿದರು.

ಇದೇ ರೀತಿ ತುರ್ತು ಚಿಕಿತ್ಸಾ ಘಟಕ ಹಾಗೂ ಲಘು ಶಸ್ತ್ರ ಚಿಕಿತ್ಸಾ ಘಟಕಗಳ ಕೊಠಡಿ ನಿರ್ಮಾಣ/ನವೀಕರಣ, ಕ್ಯಾನ್ಸರ್ ಚಿಕಿತ್ಸಾ ಘಟಕ, ಲಾಂಡ್ರಿ ಸೌಲಭ್ಯ, ಹೆಚ್ಚುವರಿ ಕೊಠಡಿಗಳ ನಿರ್ಮಾಣ, ವಿದ್ಯುತ್ ಪೂರೈಕೆ ಸೇರಿದಂತೆ ಆಸ್ಪತ್ರೆಗೆ ಅಗತ್ಯವಿರುವ ಎಲ್ಲಾ ಕಾಮಗಾರಿಗಳನ್ನು ಪಟ್ಟಿ ಮಾಡಿ ವಿಸ್ತೃತ ಯೋಜನೆಯ ಪ್ರಸ್ತಾವನೆ ಸಲ್ಲಿಸುವಂತೆ ಸಚಿವರಾದ ಚಲುವರಾಯಸ್ವಾಮಿಯವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಶರಣ್ ಪ್ರಕಾಶ್ ಪಾಟೀಲ್ ರವರು ಆಸ್ಪತ್ರೆಯ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಶ್ರೀರಂಗ ಪಟ್ಟಣ ಶಾಸಕರು, ಚೆಸ್ಕಾಂ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ ಹಾಗೂ ಮಂಡ್ಯ ಶಾಸಕ ರವಿಕುಮಾರ್ ಗಣಿಗರವರು ಮಂಡ್ಯ ವೈದ್ಯಕೀಯ ಕಾಲೇಜಿನ ಅಭಿವೃದ್ಧಿ ಬಗ್ಗೆ ಸಲಹೆ ಸೂಚನೆ ನೀಡಿದರು. ಈ ಬಗ್ಗೆ ಮೇಲ್ವಿಚಾರಣೆ ವಹಿಸುವಂತೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್‌ರವರಿಗೆ ಸಚಿವರು ಸೂಚಿಸಿದರು.

ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಹಮದ್ ಮೊಹಿಸಿನ್, ಮಂಡ್ಯ ವೈದ್ಯಕೀಯ ಕಾಲೇಜು ನಿರ್ದೇಶಕ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ವಿಜೃಂಭಣೆಯಿಂದ ನಡೆದ ಶ್ರೀ ಲಕ್ಷ್ಮೀನಾರಾಯಣ ಬ್ರಹ್ಮರಥೋತ್ಸವ

ಕೆ.ಆರ್.ಪೇಟೆ,ಮಾ.6- ತಾಲೂಕಿನ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಹೊಯ್ಸಳರ ಶಿಲ್ಪಕಲೆಯನ್ನು ಹೊಂದಿರುವ ಐತಿಹಾಸಿಕ ಗ್ರಾಮ ಹೊಸಹೊಳಲು ಗ್ರಾಮದ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ತಾಲೂಕು ಮುಜರಾಯಿ ಅಧಿಕಾರಿಗಳು ಹಾಗೂ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ಸಮಾಜ ಸೇವಕ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್, ಪುರಸಭಾ ಅಧ್ಯಕ್ಷೆ ಪಂಕಜಾಪ್ರಕಾಶ್ ಅವರು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಸರ್ವಾಲಂಕಾರಗೊಂಡ ಶ್ರೀ ಲಕ್ಷ್ಮೀನಾರಾಯಣಸ್ವಾಮಿಯವರ ಭವ್ಯ ರಥದ ಮೇಲೆ ಉತ್ಸವ ಮೂರ್ತಿಯು ಅಲಂಕರಿಸುತ್ತಿದ್ದಂತೆ ಭಕ್ತಸಾಗರದಿಂದ ಶ್ರೀ ಲಕ್ಷ್ಮೀನಾರಾಯಣ ಗೋವಿಂದ, ಶ್ರೀನಿವಾಸ ಗೋವಿಂದ, ವೆಂಕಟರಮಣ ಗೋವಿಂದ.... ನಾಮಸ್ಮರಣೆಗಳು ಮುಗಿಲು ಮುಟ್ಟಿದವು.



ಜಾನಪದ ಕಲಾತಂಡಗಳ ನೃತ್ಯವು ರಥೋತ್ಸವ ಮತ್ತು ಜಾತ್ರಾ ಸೌಂದರ್ಯವನ್ನು ಹೆಚ್ಚಿಸಿದವು ಭಕ್ತರು ಶ್ರೀ ರಥದ ಕಳಸಕ್ಕೆ ಬಾಳೆಹಣ್ಣು ಹಾಗೂ ಜವನವನ್ನು ಎಸೆದು ಪುನೀತರಾದರು. ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತಾದಿಗಳಿಗೆ ಪುಳಿಯೊಗರೆ, ಮೊಸರನ್ನ, ಮಜ್ಜಿಗೆ-ಪಾನಕ ಪ್ರಸಾದವನ್ನು ದೇವಾಲಯ ಸಮಿತಿಯ ವತಿಯಿಂದ ವಿತರಿಸಲಾಯಿತು.

ಡಿವೈಎಸ್‌ಪಿ ಚಲುವರಾಜು, ಇನ್ಸ್‌ಪೆಕ್ಟರ್ ಸುಮಾರಾಣಿ, ಸಬ್ ಇನ್ಸ್‌ಪೆಕ್ಟರ್ ಕೆ.ನವೀನ್ ನೇತೃತ್ವದಲ್ಲಿ ರಥೋತ್ಸವ ಮತ್ತು ಜಾತ್ರಾ ಮಹೋತ್ಸವಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ರಥೋತ್ಸವದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಾಲಯ ಸಮಿತಿಯ ಅಧ್ಯಕ್ಷ ರಾಮಚಂದ್ರು, ಕಾರ್ಯದರ್ಶಿ ಹೆಚ್.ಜಿ.ರವೀಂದ್ರ, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಕೆಆರ್. ರವೀಂದ್ರಬಾಬು, ಪುರಸಭಾ ಸದಸ್ಯರಾದ ಹೆಚ್.ಆರ್.ಲೋಕೇಶ್, ಹೆಚ್.ಎನ್.ಪ್ರವೀಣ್, ಹೆಚ್.ಡಿ.ಅಶೋಕ್, ಕೆ.ಬಿ.ಮಹೇಶ್, ಶಾಸಕರ ಸಹೋದರ ಹೆಚ್.ಟಿ.ಲೋಕೇಶ್, ಗ್ರೇಡ್-2 ತಹಸೀಲ್ದಾರ್ ಲೋಕೇಶ್, ರಾಜಸ್ವ ನಿರೀಕ್ಷಕ ಜ್ಞಾನೇಶ್, ಜಗದೀಶ್, ಡಾ.ಶ್ರೀನಿವಾಸಶೆಟ್ಟಿ ಇತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

16ನೇ ಬಜೆಟ್ ಮಂಡನೆ

ನಿರಂತರ ಚರ್ಚೆ ನಡೆಸಿ ಮುಂಗಡಪತ್ರ ಸಿದ್ಧಪಡಿಸಿದ್ದಾರೆ. ಕೇಂದ್ರದಿಂದ ರಾಜ್ಯದ ಪಾಲಿನ ತೆರಿಗೆ ಬಾಬ್ತಿನಲ್ಲಿ ದೊಡ್ಡ ಪ್ರಮಾಣದ ಕಡಿತ ಸಂಕಷ್ಟ ತಂದಿದ್ದು, ಇದರ ನಡುವೆಯೇ ಗ್ಯಾರಂಟಿ ಯೋಜನೆಗಳಿಗೆ ಈ ಬಾರಿಯೂ 60,000 ಕೋಟಿ ರೂ. ಮೀಸಲಿರಿಸಿ, ಇತರ ಕಾಮಗಾರಿಗಳಿಗೆ ಸಂಪನ್ಮೂಲ ಕ್ರೋಢೀಕರಿಸಬೇಕಿದೆ.

ಸಾರ್ವಜನಿಕರು, ರೈತರು ಮತ್ತು ಜನಪ್ರತಿನಿಧಿಗಳು ಮುಂಗಡಪತ್ರದ ಮೇಲೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದು, ಇದನ್ನು ಯಾವ ರೀತಿ ನೆರವೇರಿಸಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ. ಕಳೆದ ಬಾರಿ 3.71 ಲಕ್ಷ ಕೋಟಿ ರೂ. ಗಾತ್ರದ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ, ರಾಜಸ್ವ ವೆಚ್ಚ 2.90 ಲಕ್ಷ ಕೋಟಿ ರೂ.ಗಳಿಗೂ ಅಧಿಕವಾಗಿ, ಬಂಡವಾಳ ವೆಚ್ಚ 55,000 ಕೋಟಿ ರೂ.ಗೆ ಇಳಿದಿತ್ತು.

ಮುಖ್ಯಮಂತ್ರಿ ಅವರು ಆರ್ಥಿಕ ಶಿಸ್ತು ಕಾಪಾಡಿಕೊಂಡು ಬಜೆಟ್ ಗಾತ್ರ ಹೆಚ್ಚಿಸಿ ಅದಕ್ಕನುಗುಣವಾಗಿ ಸಾಲ ಪಡೆಯುವ ಪ್ರಮಾಣವನ್ನು ಏರಿಕೆ ಮಾಡಿ ವಿತ್ತೀಯ ಕೊರತೆಯನ್ನು ಮಿತಿಯಲ್ಲಿ ತೋರಿಸಲು ಪ್ರಯತ್ನಿಸಲಿದ್ದಾರೆ. ನಾಳೆ ಬೆಳಗ್ಗೆ 10-15ಕ್ಕೆ ವಿಧಾನಸಭೆಯಲ್ಲಿ ಮುಂಗಡಪತ್ರ ಮಂಡಿಸಲಿದ್ದಾರೆ, ಅದಕ್ಕೂ ಮುನ್ನ ಸಚಿವ ಸಂಪುಟ ಸಭೆಯಲ್ಲಿ 2025-26ನೇ ಸಾಲಿನ ಬಜೆಟ್‌ಗೆ ಅನುಮೋದನೆ ಪಡೆಯಲಿದ್ದಾರೆ. ಎಚ್.ಡಿ.ದೇವೇಗೌಡರ ಮಂತ್ರಿಮಂಡಲದಲ್ಲಿ ಹಣಕಾಸು ಸಚಿವರಾಗಿ ಮೊದಲ ಮುಂಗಡಪತ್ರ ಮಂಡಿಸಿದ್ದ ಸಿದ್ದರಾಮಯ್ಯ, ನಂತರ ಜೆ.ಎಚ್. ಪಟೇಲ್ ಮಂತ್ರಿಮಂಡಲದಲ್ಲಿ ಇದೇ ಖಾತೆಯಲ್ಲಿ ಮುಂದುವರೆದು ಮುಂಗಡಪತ್ರಗಳನ್ನು ಮಂಡಿಸಿದ್ದರು.

ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಆಡಳಿತದಲ್ಲೂ ಉಪಮುಖ್ಯಮಂತ್ರಿಯಾಗಿ ಹಣಕಾಸು ಖಾತೆ ಹೊಂದಿದ್ದ ಸಿದ್ದರಾಮಯ್ಯ ಬಜೆಟ್ ಮಂಡಿಸಿದ್ದರು. ತದನಂತರ ತಾವೇ ಮುಖ್ಯಮಂತ್ರಿಯಾಗಿ ಸತತ ಆರು ಬಜೆಟ್ ಮಂಡಿಸಿದರು. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಮೂರನೇ ಮುಂಗಡಪತ್ರ ಮಂಡಿಸಲಿದ್ದು, ಇದು ಅವರ ದಾಖಲೆಯ ಮುಂಗಡಪತ್ರವಾಗಲಿದೆ.

ಕಡಿವಾಣಕ್ಕೆ ಮಸೂದೆ ಮಂಡನೆ

ಸಂಸ್ಥೆಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಕಾರ್ಯವ್ಯವಸ್ಥೆಯನ್ನು ಸೃಜಿಸುವ ಉದ್ದೇಶವನ್ನು ವಿಧೇಯಕ ಒಳಗೊಂಡಿದೆ.

ಕಾನೂನು ಚೌಕಟ್ಟುಗಳವರೆಗೆ ಕಾರ್ಯಾಚರಿಸುವ ನೋಂದಾಯಿತವಲ್ಲದ ಲೇವಾದೇವಿದಾರರನ್ನು ನಿಯಂತ್ರಿಸುವುದು, ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಖಚಿತಪಡಿಸುವುದು, ಆರ್‌ಬಿಐನ ಕಟ್ಟುಪ್ಪಿಗೆ ಒಳಪಡದೆ ನೋಂದಾಯಿತವಲ್ಲದ ಮತ್ತು ಅನಿಯಂತ್ರಿತ ಲೇವಾದೇವಿದಾರರಿಗೆ ಈ ವಿಧೇಯಕ ಅನ್ವಯವಾಗಲಿದೆ. ಕಾನೂನುಬದ್ಧ ಲೇವಾದೇವಿಯನ್ನು ನಿಷೇಧಿಸುವುದಿಲ್ಲ. ಆದರೆ, ಬಲವಂತದ ವಸೂಲಾತಿಗಳನ್ನು ನಿರ್ಬಂಧಿಸುತ್ತದೆ. ಬಲವಂತದ ಹಾಗೂ ಅಮಾನವೀಯ ಸಾಲ ವಸೂಲಾತಿಯಲ್ಲಿ ತಪ್ಪಿತಸ್ಥರಿಗೆ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಜೈಲುವಾಸ, 5 ಲಕ್ಷ ರೂ.ವರೆಗೆ ವಿಸ್ತರಿಸಬಹುದಾದ ದಂಡವನ್ನು ಈ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಸರ್ಕಾರ ಈಗಾಗಲೇ ಅಧ್ಯಾದೇಶದ ಮೂಲಕ ಜಾರಿ ಮಾಡಿದ್ದ ಕಾನೂನನ್ನು ಈ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಕೆ

ನಷ್ಟ ಉಂಟಾಗಿದೆ ಸಿಎಂ ಸೇರಿದಂತೆ ನಾಲ್ವರು ಪ್ರಮುಖ ಆರೋಪಿಗಳಿಗೆ ಲೋಕಾಯುಕ್ತ ಕ್ಲೀನ್‌ಚಿಟ್ ನೀಡಿ, ಅಧಿಕಾರಿಗಳ ಮಟ್ಟದಲ್ಲಿ ನಡೆದಿರುವ ಲೋಪದ ಬಗ್ಗೆ ತನಿಖೆ ನಡೆಸಲು ಅವಕಾಶ ಕೋರಿದ್ದಾರೆ. ಪ್ರಮುಖ ಆರೋಪಿಗಳ ತನಿಖೆಯಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿ, ಅಧಿಕಾರಿಗಳ ಮೇಲಿನ ತನಿಖೆಗೆ ಮತ್ತೆ ಅವಕಾಶ ಕೋರಿರುವುದೇ ಸಂಶಯಕ್ಕೆ ಎಡೆ ಮಾಡಿದೆ. ಮುಖ್ಯ ಮಂತ್ರಿ ಅಡಿಯಲ್ಲೇ ಲೋಕಾಯುಕ್ತ ಸಂಸ್ಥೆ ಕಾರ್ಯನಿರ್ವಹಿಸುವುದರಿಂದ ಅವರ ಒತ್ತಡಕ್ಕೆ ಮಣಿದು 14 ಬಿಡಿ ನಿವೇಶನಗಳಿಗೆ ಸಂಬಂಧಿಸಿದಂತೆ ವರದಿ ಸಲ್ಲಿಸಿದೆ.

ಲೋಕಾಯುಕ್ತ ತನಿಖಾ ವರದಿಯೇ ಸಂಶಯಾಸ್ಪದವಾಗಿದೆ ಮತ್ತು ಪ್ರಕರಣವನ್ನು ಮುಚ್ಚಿ ಹಾಕುವ ಕೆಲಸ ಆಗಿದೆ. ಆದ್ದರಿಂದ ಈ ಪ್ರಕರಣವನ್ನು ಸಿಬಿಐಗೆ ವಹಿಸಿ ಎಂದು ಮೇಲ್ಮನವಿ ಸಲ್ಲಿಸಿದ್ದಾರೆ.

ಅನುದಾನ ನೀಡುವಲ್ಲಿ ವಿಳಂಬ ಧೋರಣೆ

ಬಜೆಟ್‌ನಲ್ಲಿ ಹಣ ಮೀಡಸಲಿಡಬೇಕು ಎಂದು ಒತ್ತಾಯಿಸಿದರು. ವಿಮಾನ ನಿಲ್ದಾಣ ರನ್ ವೇ ವಿಸ್ತರಣೆ ಮತ್ತು ಬೆಳಗೊಳ-ಕುಶಾಲನಗರ ರೈಲು ಮಾರ್ಗದ ಭೂಸ್ವಾಧೀನಕ್ಕೆ ಕೇಂದ್ರದಿಂದ ಹಣ ಪಡೆದುಕೊಳ್ಳುವ ಅವಕಾಶವಿದೆಯೇ ಎಂದು ನಾನು ಕೇಂದ್ರ ಮತ್ತು ಸಂಬಂಧಿತ ಇಲಾಖೆಗಳೊಂದಿಗೆ ಚರ್ಚೆ ನಡೆಸುತ್ತಿದ್ದೇನೆ. ಇದಕ್ಕೆ ಅವಕಾಶವಿದೆಯೇ ಎಂಬುದರ ಬಗ್ಗೆ ನನಗೆ ಖಚಿತವಿಲ್ಲ. ಆದರೆ ಈ ಯೋಜನೆಗಳನ್ನು ಚುರುಕುಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು. ವಿಧಾನಸಭಾ ಬಜೆಟ್ ಅಧಿವೇಶನದಲ್ಲಿ ಬೆಂಗಳೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಮಸೂದೆ, 2025 ಮಂಡನೆ ಸಂಬಂಧ ಮಾತನಾಡಿದ ಅವರು, ಕಾನೂನಿನ ಬಗ್ಗೆ ಗೌರವವಿದ್ದು, ಅದರ ಚೌಕಟ್ಟಿನಲ್ಲಿ ಮುಂದುವರೆಯುತ್ತೇವೆ. ರಾಜ್ಯ ಸರ್ಕಾರ ರಾಜಮನೆತನದ ಬಗ್ಗೆ ಈ ರೀತಿ ದ್ವೇಷ ಸಾಧಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.

ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಅವಶ್ಯಕ; ನರೆಡ್ಕೊ ತೀವ್ರ ಆಕ್ಷೇಪ

● ನಗರಾಭಿವೃದ್ಧಿ ಪ್ರಾಧಿಕಾರಗಳ ಅಗತ್ಯವಾದರೂ ಏಕೆ? ● ಬಡಾವಣೆ ನಿರ್ಮಾಣ ಸರಳೀಕರಣದ ಬದಲು ಕಗ್ಗಂಟಾಗಿಸುವ ಯತ್ನ

ಮೈಸೂರು, ಮಾ.6(ಎಸ್‌ಬಿಡಿ)-ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಪಡೆಯಬೇಕೆಂಬ ಆದೇಶ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಉರುಳಾಗುತ್ತದೆ ಎಂದು ರಾಷ್ಟ್ರೀಯ ರಿಯಲ್ ಎಸ್ಟೇಟ್ ಮಂಡಳಿ (ನರೆಡ್ಕೊ) ಮೈಸೂರು ಚಾಪ್ಟರ್‌ನ ಪದಾಧಿಕಾರಿಗಳು ವಿಷಾದ ವ್ಯಕ್ತಪಡಿಸಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರದ ಜೊತೆಗೆ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ ಎಂಬ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಆದೇಶಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ನರೆಡ್ಕೊ ಮೈಸೂರು ಚಾಪ್ಟರ್‌ನ ಅಧ್ಯಕ್ಷ ವಿ.ಸಿ.ರವಿಕುಮಾರ್ ಹಾಗೂ ಖಜಾಂಚಿ ಎ.ಪಿ.ನಾಗೇಶ್, ಈ ಮೂಲಕ ಸರ್ಕಾರ ರಿಯಲ್ ಎಸ್ಟೇಟ್ ಉದ್ಯಮವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುತ್ತಿದೆ ಎಂದು ದೂರಿದ್ದಾರೆ.

ಮುಡಾ ಆಡಳಿತ ಮಂಡಳಿಯಲ್ಲಿ ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು, ಸೆಸ್ಕ್ ಎಸ್‌ಇ, ಯೋಜನಾಧಿಕಾರಿ, ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಅಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳಿದ್ದಾರೆ. ಮುಡಾ ಆಯುಕ್ತರು, ಕಾರ್ಯದರ್ಶಿ, ಭೂಸ್ವಾಧೀನ ಅಧಿಕಾರಿ, ಎಸ್‌ಇ ಇವರೆಲ್ಲಾ ಸರ್ಕಾರದ ಭಾಗವಲ್ಲವೇ?. ಒಂದು ಬಡಾವಣೆ ಪ್ಲಾನ್ ಅನುಮೋದನೆ ಪ್ರಕ್ರಿಯೆಯಲ್ಲಿ ಸ್ಥಳ ಪರಿಶೀಲನೆ ಮಾಡಿ, ಹಣ ಪಾವತಿ ಮಾಡಿಸಿಕೊಂಡು ಕಾರ್ಯಾದೇಶ ನೀಡಲಾಗುತ್ತದೆ. ಬಳಿಕ ಸೆಸ್ಕ್, ವಾಟರ್‌ಬೋರ್ಡ್, ಮುಡಾದಿಂದ ಎನ್‌ಓಸಿ ಪಡೆಯಲಾಗುತ್ತದೆ. ನಗರ ಯೋಜನೆಯಲ್ಲಿ ಇದೆಲ್ಲಾ ಪರಿಶೀಲನೆ ಬಳಿಕ ಮುಡಾ ಸಭೆಗೆ ಮಂಡಿಸಿ, ಚರ್ಚೆ



ವಿ.ಸಿ.ರವಿಕುಮಾರ್



ಎ.ಪಿ.ನಾಗೇಶ್

ಮಾಡಿ ನಂತರ ಅನುಮೋದಿಸಲಾಗುತ್ತದೆ. ಹೀಗೆ ಹಲವು ಹಂತಗಳನ್ನು ದಾಟಿ ಬಡಾವಣೆ ನಿರ್ಮಾಣ ಮಾಡಬೇಕಿದೆ. ಇದನ್ನು ಸರಳೀಕರಣಗೊಳಿಸುವ ಬದಲು ಮತ್ತಷ್ಟು ಕಗ್ಗಂಟು ಮಾಡುತ್ತಿರುವುದು ವಿಷಾದನೀಯ ಎಂದಿದ್ದಾರೆ. ಸರ್ಕಾರದ ಅನುಮತಿ ಪಡೆಯಬೇಕು ಎನ್ನುವುದಾದರೆ ಸ್ಥಳೀಯ ಅಧಿಕಾರಿಗಳ ಕಾರ್ಯ ವೈಖರಿ ಬಗ್ಗೆ ನಂಬಿಕೆ ಇಲ್ಲವೇ?. ಸರ್ಕಾರದ ಮಟ್ಟಕ್ಕೆ ಹೋಗುವುದರಿಂದ ಆಗುವಂತಹ ಪ್ರಯೋಜನವಾದರೂ ಏನು?. ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಸ್ಥಳ ಪರಿಶೀಲನೆ ನಡೆಸಲು ಸಾಧ್ಯವೇ?. ಹಾಗಾದರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅವಶ್ಯಕತೆ ಏನಿದೆ?. ಒಂದು ಯೋಜನೆಯಿಂದ ಕೇಂದ್ರ ಸರ್ಕಾರಕ್ಕೆ ಜಿಎಸ್‌ಟಿ, ರಾಜ್ಯಕ್ಕೆ ಸ್ಟ್ಯಾಂಪ್ ಡ್ಯೂಟಿ, ವಿವಿಧ ಇಲಾಖೆಗಳಿಗೆ ಶುಲ್ಕ ಪಾವತಿಸುವುದರ ಜೊತೆಗೆ ನಿರ್ಮಾಣ ವಸ್ತುಗಳ ಖರೀದಿ ಮೂಲಕ ಜಿಎಸ್‌ಟಿ ಪಾವತಿ, ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಸ್ಥಳೀಯ ಸಂಸ್ಥೆಗಳಲ್ಲಿ ಮೂಲ ಸೌಕರ್ಯಗಳು, ಅಸಮರ್ಪಕ ಸರ್ವರ್ ಸೇರಿದಂತೆ ಸಾಕಷ್ಟು ಸಮಸ್ಯೆಗಳಿವೆ. ಖಾತೆಗೆ ಸಂಬಂಧಿಸಿದ ಸಮಸ್ಯೆಗಳಿಂದಲೂ ಉದ್ಯಮಿಗಳು ನೊಂದಿದ್ದಾರೆ. ಆದರೂ ನವ ಉದ್ಯಮಿಗಳು ಉತ್ತಮ ರೀತಿಯ ಬಡಾವಣೆಗಳನ್ನು ನಿರ್ಮಿಸುವ ಕನಸಿನೊಂದಿಗೆ ಶ್ರಮಿಸುತ್ತಿದ್ದಾರೆ. ಪ್ರಾಧಿಕಾರಕ್ಕಿಂತ ಉತ್ತಮ ರೀತಿಯ ಬಡಾವಣೆಗಳನ್ನು ನಿರ್ಮಿಸುತ್ತಿದ್ದಾರೆ. ಈ ವೇಳೆ ಗೊಂದಲ ಸೃಷ್ಟಿಸುವುದು ಸರಿಯಲ್ಲ. ಯಾವುದೋ ಒಂದು ಪ್ರಕರಣವನ್ನು ಮುಂದಿಟ್ಟುಕೊಂಡು ಎಲ್ಲಾ ಉದ್ಯಮಿಗಳನ್ನೂ ಒಂದೇ ರೀತಿ ಪರಿಗಣಿಸಬಾರದು. ಇಡೀ ಉದ್ಯಮವನ್ನೇ ದಂಧೆ ಎನ್ನುವ ರೀತಿ ಬಿಂಬಿಸಬಾರದು. ಬದಲಾಗಿ ವೈಫಲ್ಯಗಳನ್ನು ಸರಿಪಡಿಸಬೇಕು. ಏಕಗವಾಕ್ಷಿ ವ್ಯವಸ್ಥೆ ಮೂಲಕ ಸರಳೀಕರಣದ ಜೊತೆಗೆ ಅವ್ಯವಹಾರಕ್ಕೆ ಕಡಿವಾಣ ಹಾಕಬೇಕು. ಪ್ರಾಧಿಕಾರದ ಎಲ್ಲಾ ಸದಸ್ಯರೂ ಕಡ್ಡಾಯವಾಗಿ ಸ್ಥಳ ಪರಿಶೀಲಿಸಿದ ಬಳಿಕವೇ ಸಭೆಯಲ್ಲಿ ಅನುಮೋದಿಸಬೇಕೆಂಬ ನಿಯಮ ತರಬೇಕು. ಅಧಿಕಾರಿಗಳು ಆಗಾಗ್ಗೆ ಬಡಾವಣೆಗಳಿಗೆ ಭೇಟಿ ನೀಡಿ, ವರದಿ ನೀಡುವಂತೆ ನಿಯಮ ಜಾರಿಗೆ ತರಬೇಕು. ಈ ರೀತಿಯಲ್ಲಿ ವ್ಯವಸ್ಥೆ ಸುಧಾರಿಸುವ ಬದಲು ಮತ್ತಷ್ಟು ಕಗ್ಗಂಟು ಸೃಷ್ಟಿಸುವ ಮೂಲಕ ಉದ್ಯಮದ ಕತ್ತು ಹಿಸುಕಬಾರದು. ಈಗ ಮಾಡಿರುವ ಆದೇಶ, ಒಂದು ಹಂತದಲ್ಲಿ ಸಾಲದೆಂದು, ಮತ್ತೊಂದು ಹಂತದಲ್ಲೂ ಸುಲಿಗೆ ಮಾಡುವ ದುರಾಲೋಚನೆಯೂ ಇರಬಹುದೆಂಬ ಶಂಕೆ ಉದ್ಯಮಿಗಳಲ್ಲಿದೆ ಎಂದು ತಿಳಿಸಿದ್ದಾರೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ತಿಂಡಿ-ತಿನಿಸುಗಳಿಗೆ ದುಬಾರಿ

ದರ ನಿಯಂತ್ರಣಕ್ಕೆ ಪರಿಷತ್‌ನಲ್ಲಿ ಆಗ್ರಹ

ಬೆಂಗಳೂರು, ಮಾ.6- ರಾಜ್ಯದ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ನೋಡಲು ಬರುವ ಪ್ರೇಕ್ಷಕರು ಖರೀದಿಸುವ ತಿಂಡಿ - ತಿನಿಸುಗಳಿಗೆ ದುಬಾರಿ ದರ ವಸೂಲಿ ಮಾಡುತ್ತಿರುವುದಕ್ಕೆ ನಿಯಂತ್ರಣ ಹೇರಬೇಕು ಎಂಬ ಆಗ್ರಹ ವಿಧಾನಪರಿಷತ್‌ನಲ್ಲಿ ಕೇಳಿ ಬಂತು. ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಗೋವಿಂದರಾಜು ಈ ಬಗ್ಗೆ ಪ್ರಸ್ತಾಪಿಸಿ, ಪಾಪ್ ಕಾರ್ನ್, ವಾಟರ್ ಬಾಟಲ್‌ಗೂ ನೂರಿನ್ನೂರು ರೂ. ದರ ನಿಗದಿ ಮಾಡಿ ಕಿರುಕುಳ ಕೊಡುತ್ತಿದ್ದಾರೆ. ಇಷ್ಟ ಬಂದ ರೇಟ್‌ನಲ್ಲಿ ಮಾರಾಟ ಮಾಡುತ್ತಿರುವುದರಿಂದ ಗ್ರಾಹಕರಿಗೆ ಸಮಸ್ಯೆ ಆಗುತ್ತಿದೆ ಎಂದು ಗಮನ ಸೆಳೆದರು.

ಒಂದೊಂದು ಸಿನಿಮಾಗೆ ಒಂದೊಂದು ದರ ನಿಗದಿ ಮಾಡಲಾಗುತ್ತಿದೆ. ಕನ್ನಡ ಸಿನಿಮಾಗೆ ಒಂದು ದರ ಅನ್ಯಭಾಷೆ ಸಿನಿಮಾಗೆ ಒಂದು ದರ ನಿಗದಿ ಮಾಡಲಾಗುತ್ತಿದೆ. ಕನ್ನಡಕ್ಕೆ ಬಹಳ ಕಡಿಮೆ, ಬೇರೆ ಭಾಷೆಗೆ 500 ರಿಂದ 1000 ದರ ವಸೂಲಿ ಮಾಡುತ್ತಿದ್ದಾರೆ. ಸರ್ಕಾರದ ಪರಿಮಿತಿಯಲ್ಲೇ ದರ ನಿಯಂತ್ರಣ ಇದ್ದರೂ ಕೂಡ ಸರ್ಕಾರ ದರ ನಿಯಂತ್ರಣ ಮಾಡುತ್ತಿಲ್ಲ ಎಂದು ಗಮನ ಸೆಳೆದರು.

ಸಿದ್ದರಾಮಯ್ಯ 2017ರ ಬಜೆಟ್‌ನಲ್ಲಿ ಸಮಾನ ದರ 200ರೂ. ನಿಗದಿ ಮಾಡುತ್ತೇವೆ ಎಂದಿದ್ದರು. ಅದೂ ಕೂಡ ಜಾರಿಗೆ ಬಂದಿಲ್ಲ. ಸಿನಿಮಾ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಎಲ್ಲಾ ಥಿಯೇಟರ್ ದರ ಬರುತ್ತದೆ. ಮಲ್ಟಿಪ್ಲೆಕ್ಸ್‌ನವರು ಬೇಕಾಬಿಟ್ಟಿ ದರ ಫಿಕ್ಸ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಎಸ್‌ಡಿಪಿಐ ಮುಖ್ಯಸ್ಥ ಎಂಕೆ ಫೈಜಿ ಬಂಧನ: 6 ದಿನ ಇಡಿ ವಶಕ್ಕೆ

ಭಾರತದಲ್ಲಿ ಭಯೋತ್ಪಾದಕ ದಾಳಿಗೆ ಸಂಚು, ಆಘಾತಕಾರಿ ಮಾಹಿತಿ ಬಹಿರಂಗ



ಎಂ.ಕೆ.ಫೈಜಿ

ನವದೆಹಲಿ, ಮಾ.6- ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂಕೆ ಫೈಜಿಯನ್ನು ದೆಹಲಿ ಏರ್‌ಪೋರ್ಟ್‌ನಲ್ಲಿ ಇಡಿ ಅಧಿಕಾರಿಗಳು ಹಣ ವರ್ಗಾವಣೆ ಕೇಸ್‌ನಲ್ಲಿ ಬಂಧಿಸಿದ್ದಾರೆ. ಎಸ್‌ಡಿಪಿಐ ರಾಜಕೀಯ ಮುಖವಾಡ ಮತ್ತು ಪಿಎಫ್‌ಐ ಭಯಾನಕ ಚಟುವಟಿಕೆಗಳಿಗೆ ಹಣದ ನೆರವು

ಬೆಂಗಳೂರು ಸೇರಿ 14 ಸ್ಥಳಗಳಲ್ಲಿ ಇಡಿ ದಾಳಿ, ಮಹತ್ವದ ದಾಖಲೆ ವಶ

ನೀಡುತ್ತಿದ್ದ ಎಂದು ಇಡಿ ಹೇಳಿದೆ.

ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ಗೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಜಿ ಎಂದು ಕರೆಯಲ್ಪಡುವ ಮೊಯ್ದೀನ್ ಕುಟ್ಟಿ ಕೆ. ಅವರನ್ನು ಮಾರ್ಚ್ 3ರಂದು ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಾರಿ ನಿರ್ದೇಶನಾಲಯ(ಇಡಿ) ಬಂಧಿಸಿದೆ. ಹಣ ವರ್ಗಾವಣೆ ಸಂಬಂಧಿತ ಕೇಸ್‌ನಲ್ಲಿ ತನಿಖೆಗೆ ಬಂಧಿಸಿರುವ ಇಡಿ ಪಟಿಯಾಲ ಹೌಸ್‌ನಲ್ಲಿರುವ ವಿಶೇಷ ಪಿಎಂಎಲ್‌ಎ ನ್ಯಾಯಾಲಯವು ಇಡಿಗೆ ಆರು ದಿನಗಳ ಕಸ್ಟಡಿ ವಿಚಾರಣೆಗೆ ಅನುಮತಿ ನೀಡಿದೆ. ಬಂಧಿತ ಫೈಜಿ 2018 ರಿಂದ ಎಸ್‌ಡಿಪಿಐ ಅಧ್ಯಕ್ಷರಾಗಿದ್ದಾರೆ. ಮಂಗಳವಾರ ಸ್ಥಳೀಯ ಕೋರ್ಟ್ ಫೈಜಿಯನ್ನು 6 ದಿನಗಳ ಕಾಲ ಇಡಿ ಕಸ್ಟಡಿಗೆ ಕಳುಹಿಸಿದೆ. ಇಡಿ ಅಧಿಕಾರಿಗಳು ಫೈಜಿಯನ್ನು ವಿಚಾರಣೆ ಮಾಡ್ತಾ ಇದ್ದಾರೆ.

ದೇಶಾದ್ಯಂತ 14 ಸ್ಥಳಗಳಲ್ಲಿ ಇಡಿ ದಾಳಿ: ದೆಹಲಿಯಲ್ಲಿರುವ ಎಸ್‌ಡಿಪಿಐ ರಾಷ್ಟ್ರೀಯ ಪ್ರಧಾನ ಕಚೇರಿ ಸೇರಿದಂತೆ, ದೇಶಾದ್ಯಂತ 14 ಸ್ಥಳಗಳಲ್ಲಿ ಇಡಿ ದಾಳಿ ನಡೆಸಿದೆ. ಈ ಪೈಕಿ ಕೇರಳದಲ್ಲಿ ಮೂರು ಸ್ಥಳಗಳ ಮೇಲೆ ದಾಳಿ ನಡೆದಿದೆ: ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂಕೆ ಫೈಜಿ ಅವರನ್ನು ಬಂಧಿಸಿದ ನಂತರ ಈ ಶೋಧ ಕಾರ್ಯ ನಡೆದಿದೆ. ಎಸ್‌ಡಿಪಿಐ ಪ್ರಧಾನ ಕಚೇರಿ, ಕೇರಳದ ತಿರುವನಂತಪುರಂ ಮತ್ತು ಮಲಪ್ಪುರಂ, ಆಂಧ್ರಪ್ರದೇಶದ ನಂದ್ಯಾಲ್, ಜಾರ್ಖಂಡ್‌ನ ಪಾಕೂರ್, ಮಹಾರಾಷ್ಟ್ರದ ಥಾಣೆ, ಬೆಂಗಳೂರು, ಚೆನ್ನೈ, ಕೊಲ್ಕತ್ತಾ, ಲಕ್ನೋ ಮತ್ತು ಜೈಪುರ ಸೇರಿದಂತೆ ದೆಹಲಿಯ ಎರಡು ಸ್ಥಳಗಳಲ್ಲಿ ದಾಳಿ ನಡೆದಿದ್ದು, ಶೋಧ ಕಾರ್ಯ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಇಡಿ ಸೋಮವಾರ ಪಿಎಫ್‌ಐ ಮತ್ತು ಅದರ ಅಧಿಕಾರಿಗಳಿಗೆ ಸೇರಿದ ನೆಲೆಗಳ ಮೇಲೆ ದಾಳಿ ಮಾಡಿತ್ತು. ಈ ವೇಳೆ ಅನೇಕ ಆಕ್ಷೇಪಾರ್ಹ ದಾಖಲೆಗಳು ಮತ್ತು ಡಿಜಿಟಲ್ ಸಾಕ್ಷಿಗಳು ಸಿಕ್ಕಿವೆ ಎಂದು ಇಡಿ ಇಂದು ನೀಡಿದ ಹೇಳಿಕೆಯಲ್ಲಿ ತಿಳಿಸಿದೆ. ಇಡಿ ತನ್ನ ಹೇಳಿಕೆಯಲ್ಲಿ , ಎಸ್‌ಡಿಪಿಐ ಮತ್ತು ಪಿಎಫ್‌ಐ ಸದಸ್ಯರು, ಕಾರ್ಯಕರ್ತರು ಮತ್ತು ನಾಯಕರು ಒಂದೇ. ಎಸ್‌ಡಿಪಿಐ ತನ್ನ ದಿನನಿತ್ಯದ ಕೆಲಸ, ನೀತಿ ನಿರ್ಧಾರ, ಚುನಾವಣಾ ಪ್ರಚಾರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ಸಾರ್ವಜನಿಕ ಕಾರ್ಯಕ್ರಮಗಳು, ಕಾರ್ಯಕರ್ತರನ್ನು ಸೇರಿಸುವುದು ಮತ್ತು ಇತರ ಚಟುವಟಿಕೆಗಳಿಗೆ ಪಿಎಫ್‌ಐ ಮೇಲೆ ಡಿಪೆಂಡ್ ಆಗಿದೆ ಎಂದು ಹೇಳಿದೆ.

ಇಡಿ, ಎನ್‌ಐಎ ಮತ್ತು ದೆಹಲಿ ಪೊಲೀಸರು ದಾಖಲಿಸಿದ ಎಫ್‌ಐಆರ್ ಜೊತೆಗೆ ಇತರ ಕಾನೂನು ಜಾರಿ ಏಜೆನ್ಸಿಗಳು ದಾಖಲಿಸಿದ ಬೇರೆ ಬೇರೆ ಎಫ್‌ಐಆರ್ ಗಳ ಆಧಾರದ ಮೇಲೆ ಪಿಎಂಎಲ್‌ಎ 2002 ಅಡಿಯಲ್ಲಿ ಪಿಎಫ್‌ಐ ಮತ್ತು ಇತರರ ವಿರುದ್ಧ ತನಿಖೆ ಶುರು ಮಾಡಿತ್ತು. ಪಿಎಫ್‌ಐ ಅಧಿಕಾರಿಗಳು, ಸದಸ್ಯರು ಮತ್ತು ಕಾರ್ಯಕರ್ತರು ಭಯೋತ್ಪಾದಕ ದಾಳಿ ಮಾಡಲು ಭಾರತ ಮತ್ತು ವಿದೇಶದಿಂದ ದುಡ್ಡು ಕೊಡಿಸಲು ಪ್ಲಾನ್ ಮಾಡುತ್ತಿದ್ದರು ಎಂದು ತನಿಖೆಯಿಂದ ಗೊತ್ತಾಗಿದೆ. ಅವರು ಬ್ಯಾಂಕಿಂಗ್ ಚಾನೆಲ್‌ಗಳು, ಹವಾಲಾ, ದಾನ ಇತ್ಯಾದಿಗಳ ಮೂಲಕ ದುಡ್ಡು ಕೊಡಿಸುತ್ತಿದ್ದರು ಎಂದು ಇಡಿ ತಿಳಿಸಿದೆ.

ಗೃಹಲಕ್ಷ್ಮಿ ಯೋಜನೆ ಹಣ ನೀಡುವಲ್ಲಿ ವಿಳಂಬ
ಮೈಸೂರಿನ ಗಾಂಧಿ ವೃತ್ತದಲ್ಲಿ ಜೆಡಿಎಸ್ ಪ್ರತಿಭಟನೆ

ಮೈಸೂರು, ಮಾ.6(ಬಿಎಲ್‌ಯು)– ಗೃಹಲಕ್ಷ್ಮಿ ಯೋಜನೆಯಲ್ಲಿ ಮಹಿಳೆಯರಿಗೆ ಹಣ ನೀಡದೆ ಸತಾಯಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜೆಡಿಎಸ್ ಕಾರ್ಯಕರ್ತರು ಮೈಸೂರಿನ ಗಾಂಧಿವೃತ್ತದ ಗಾಂಧಿ ಪ್ರತಿಮೆ ಬಳಿ ಇಂದು ಪ್ರತಿಭಟನೆ ನಡೆಸಿದರು.

ಗೃಹಲಕ್ಷ್ಮಿ ಯೋಜನೆಯಲ್ಲಿ ಪ್ರತಿ ತಿಂಗಳು 2 ಸಾವಿರ ಹಣ ನೀಡುತ್ತೇವೆ ಎಂದು ಮತ ಪಡೆದ ಕಾಂಗ್ರೆಸ್ ಸರ್ಕಾರ ಈಗ ಕೊಟ್ಟ ಮಾತು ತಪ್ಪಿದೆ. ಇನ್ನೇನು ಹಣ ಬರುತ್ತದೆ ಎಂದು ಚಾತಕಪಕ್ಷಿಗಳಂತೆ ಕಾಯುತ್ತಿರುವ ಮಹಿಳೆಯರನ್ನು ಸರ್ಕಾರ ವಂಚಿಸುತ್ತಿದೆ. ಈ ಹಿನ್ನೆಲೆಯಲ್ಲಿ ಶೀಘ್ರವೇ ಗೃಹಲಕ್ಷ್ಮಿ ಹಣ ಫಲಾನುಭವಿಗಳಿಗೆ ನೀಡಬೇಕು ಎಂದು ಆಗ್ರಹಿಸಿದರು.

ನಗರಪಾಲಿಕೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸದೆ ಸರ್ಕಾರ ವಿಳಂಬ ಧೋರಣೆ ತೋರುತ್ತಿದೆ. ಸ್ಥಳಿಯ ಮಟ್ಟದಲ್ಲಿ ಜನಪ್ರತಿನಿಧಿಗಳು ಜನರ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಶೀಘ್ರವೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಕ್ತಿ ಯೋಜನೆಯಿಂದ ಸಾರಿಗೆ ಬಸ್‌ಗಳಲ್ಲಿ ಹೆಚ್ಚು ಮಹಿಳೆಯರು ಇರುವ ಕಾರಣ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗೆ ಹೋಗುವ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಈ ಹಿನ್ನೆಲೆ ಶಾಲಾ–ಕಾಲೇಜು ಮಕ್ಕಳಿಗೆ ಪ್ರತ್ಯೇಕ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಜೆಡಿಎಸ್ ಕಾರ್ಯಕರ್ತರು ಆಗ್ರಹಿಸಿದರು. ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್‌ಕುಮಾರ್, ಮಾಜಿ ಮೇಯರ್ ಲಿಂಗಪ್ಪ, ಎಂ.ಜೆ.ರವಿಕುಮಾರ್, ಜೆಡಿಎಸ್ ನಗರಾಧ್ಯಕ್ಷ ಚಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಉಪ ಮೇಯರ್ ಕೃಷ್ಣ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆ ಮಾಡುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಗುರುವಾರ ಮೈಸೂರಿನ ಗಾಂಧಿ ವೃತ್ತದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ಚೆನ್ನೈ ಮೂಲದ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಜೊತೆ ಸಂಸದ ತೇಜಸ್ವಿ ಸೂರ್ಯ ಶುಭ ವಿವಾಹ
ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಟುಂಬಸ್ಥರು, ಆಯ್ದ ಆಪ್ತರು, ಸ್ನೇಹಿತರು ಭಾಗಿ

ಬೆಂಗಳೂರು, ಮಾ. 6(ಕೆಎಂಶಿ)– ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಗುರುವಾರ ಚೆನ್ನೈ ಮೂಲದ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರೊಂದಿಗೆ ಶುಭ ಮುಹೂರ್ತದಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ವಿವಾಹ ಸಮಾರಂಭ ಸಿಲಿಕಾನ್ ಸಿಟಿ ಬೆಂಗಳೂರಿನ ಖಾಸಗಿ ರೆಸಾರ್ಟ್ ಒಂದರಲ್ಲಿ ಸರಳವಾಗಿ ನೆರವೇರಿತು. ವಧು–ವರನ ಕಡೆಯ ಕುಟುಂಬಸ್ಥರು, ಆಪ್ತರು, ಕೆಲವೇ ಕೆಲವು ಸ್ನೇಹಿತರ ಸಮ್ಮುಖದಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ತೇಜಸ್ವಿ ಸೂರ್ಯ ಹಾಗೂ ಶಿವಶ್ರೀ ಸ್ಕಂದಪ್ರಸಾದ್ ದಾಂಪತ್ಯ ಬದುಕಿಗೆ ಕಾಲಿಟ್ಟರು.

ಮೃದಂಗ ಕಲಾವಿದ ಸೀರ್ಕಾಳಿ ಜೆ. ಸ್ಕಂದಪ್ರಸಾದ್ ಅವರ ಪುತ್ರಿ ಶಿವಶ್ರೀ ಸ್ಕಂದಪ್ರಸಾದ್ ಕರ್ನಾಟಕ ಸಂಗೀತದ ಪ್ರಸಿದ್ಧ ಗಾಯಕಿಯಾಗಿದ್ದು, ಭರತನಾಟ್ಯ ಕಲಾವಿದೆಯೂ ಹೌದು. ಅವರು ಬಯೋ ಎಂಜಿನಿಯರಿಂಗ್ ಪದವೀಧರರಾಗಿದ್ದಾರೆ.

ಅಲ್ಲದೆ, ಆಯುರ್ವೇದ ಕಾಸ್ಮಟಾಲಜಿಯಲ್ಲಿ ಡಿಪ್ಲೊಮಾ, ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್, ಬಿಜೆಪಿ ಶಾಸಕರು, ಸಂಸದರು, ಹಿಂದೂಪರ ಸಂಘಟನೆಗಳ ನಾಯಕರು, ಸಂಘ ಪರಿವಾರದ ಮುಖಂಡರು, ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಅನೇಕ ರಾಜಕೀಯ ಮುಖಂಡರು, ಗಣ್ಯರು ವಿವಾಹ ಸಮಾರಂಭಕ್ಕೆ ಸಾಕ್ಷಿಯಾಗಿ ನವಜೋಡಿಗೆ ಶುಭ ಹಾರೈಸಿದರು.

ತೇಜಸ್ವಿ ಸೂರ್ಯ ಮತ್ತು ಶಿವಶ್ರೀ ಸ್ಕಂದಪ್ರಸಾದ್ ಅವರ ಮದುವೆಯ ಆರತಕ್ಷತೆ ಮಾರ್ಚ್ 9ರಂದು ಬೆಂಗಳೂರಿನ ಗಾಯತ್ರಿ ವಿಹಾರ್ ಮೈದಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಚೆನ್ನೈ ಮೂಲದ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರೊಂದಿಗೆ ಶುಭ ಮುಹೂರ್ತದಲ್ಲಿ ಗುರುವಾರ ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ದಸರಾ ವಸ್ತುಪ್ರದರ್ಶನದ ನಿಗಮ–ಮಂಡಳಿ ವಿಭಾಗದಲ್ಲಿ
ಕಾವೇರಿ ನೀರಾವರಿ ನಿಗಮಕ್ಕೆ ಬಹುಮಾನ

ಮೈಸೂರು, ಮಾ.6–ದಸರಾ 2024ರ ವಸ್ತುಪ್ರದರ್ಶನದಲ್ಲಿ ನಿಗಮ ಮಂಡಳಿಗಳ ವಿಭಾಗದಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ ಇಲಾಖೆಗೆ ದ್ವಿತೀಯ ಬಹುಮಾನ ದೊರೆತಿದೆ.

ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕೃಷ್ಣರಾಜಸಾಗರ ಅಣೆಕಟ್ಟು (ಕೆಆರ್‌ಎಸ್), ಕಬಿನಿ ಜಲಾಶಯ ಹಾಗೂ ಅದರಡಿ ಬರುವ ಅಣೆಕಟ್ಟು ನಾಲೆಗಳ ಪಕ್ಷಿನೋಟವನ್ನು ಮಳಿಗೆಯಲ್ಲಿ ನಿರ್ಮಿಸಿ ಸಾರ್ವಜನಿಕ ವೀಕ್ಷಣೆಗೆ ಪ್ರದರ್ಶಿಸಲಾಗಿತ್ತು.

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿ.ಇ.ಓ ರುದ್ರೇಶ್, ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಭಾಸ್ಕರ್ ಎ.ಎಸ್., ಸಹಾಯಕ ಕಾರ್ಯಪಾಲಕ ಅಭಿಯಂತರ ಯಶವಂತೇಗೌಡ, ಸಹಾಯಕ ಅಭಿಯಂತರ ವೇಣುಗೋಪಾಲ್, ಅಭಿಲಾಶ್ ಹಾಗೂ ಕಲಾವಿದ ರಂಗಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.


ದಸರಾ ವಸ್ತುಪ್ರದರ್ಶನದಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ ಇಲಾಖೆಗೆ ದ್ವಿತೀಯ ಬಹುಮಾನ ದೊರೆತಿದೆ.

ಸಾಮೂಹಿಕ ಉಪನಯನ

ಮೈಸೂರು, ಮಾ.6– ಮೈಸೂರಿನ ವಿಪ್ರ ಜಾಗೃತಿ ವೇದಿಕೆ ಮತ್ತು ಪ್ರಬೋದಯಾತ್ ವಿಪ್ರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಮೇ 2ರಂದು ತ್ರಿಮತಸ್ಥ ವಿಪ್ರ ಮಕ್ಕಳಿಗೆ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ವಿದ್ಯಾರಣ್ಯಪುರಂನಲ್ಲಿರುವ ಅವನಿ ಶಂಕರಮಠದಲ್ಲಿ ಏರ್ಪಡಿಸಲಾಗಿದೆ. ವಿಪ್ರ ಬಂಧುಗಳು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9742419683, 9141637888 ಸಂಪರ್ಕಿಸಬಹುದು.

ಐಶ್ವರ್ಯಗೆ ಪಿಹೆಚ್.ಡಿ ಪದವಿ

ಮೈಸೂರು, ಮಾ.6– ಡಾ.ಪ್ರಕಾಶ್ ಬಿ.ನಾಯಕ್ ಅವರ ಮಾರ್ಗದರ್ಶನದಲ್ಲಿ ಎನ್.ಐಶ್ವರ್ಯ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಇಂದಿನಿಂದ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ

ಮೈಸೂರು, ಮಾ. 6–ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು ಮತ್ತು ಚೆನ್ನೈನ ಸುರಾನ ಮತ್ತು ಸುರಾನ ಅಂತರರಾಷ್ಟ್ರೀಯ ಕಾನೂನು ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಮಾ.7ರಿಂದ 9ರವರೆಗೆ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ 22ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ ಆಯೋಜಿಸಲಾಗಿದೆ.

ಸುಮಾರು 25 ಪ್ರತಿಷ್ಠಿತ ಕಾನೂನು ಕಾಲೇಜುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದು, ಕಾನೂನು ವಿಷಯದಲ್ಲಿ ವಿಶೇಷವಾಗಿ ಪ್ರಸ್ತುತ ಸಂದರ್ಭದಲ್ಲಿ ಬಹುಮುಖ್ಯವಾದ ಕಂಪನಿ ವ್ಯವಹಾರಗಳ ಹಾಗೂ ಅಂತರರಾಷ್ಟ್ರೀಯ ತೆರಿಗೆ ವಿಷಯದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ಮಾ.8ರಂದು ಬೆಳಗ್ಗೆ 9.30 ಗಂಟೆಗೆ ಕೇರಳ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ನ್ಯಾ. ಶ್ಯಾಮ್‌ಕುಮಾರ್ ಎಂ.ವಿ. ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರೀತಮ್ ಸುರಾನ ಮತ್ತು ಕಾಲೇಜಿನ ಕಾರ್ಯನಿರ್ವಾಹಕ ಪ್ರೊ.ಸುರೇಶ್ ಭಾಗವಹಿಸಲಿದ್ದಾರೆ. ಮಾ.9ರಂದು ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಉಚ್ಚ ನ್ಯಾಯಾಲಯ ನ್ಯಾಯಾಧೀಶ ಕೃಷ್ಣ ಎಸ್.ದೀಕ್ಷಿತ್ ಸಮಾರೋಪ ಭಾಷಣ ಮಾಡಲಿದ್ದು, ಹಿರಿಯ ವಕೀಲ ವಿ.ರಘುರಾಮನ್ ಭಾಗವಹಿಸಲಿದ್ದಾರೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರ ಚುನಾವಣಾ ಪ್ರಚಾರ


2025ರ ಏಪ್ರಿಲ್ 13ರಂದು ನಡೆಯಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರ ಚುನಾವಣೆ ಅಭ್ಯರ್ಥಿ ಎಸ್.ರಘುನಾಥ್ ಮೈಸೂರಿಗೆ ಭೇಟಿ ನೀಡಿ ವಿಪ್ರ ಸಂಘ ಸಂಸ್ಥೆಗಳ ಪ್ರಮುಖರ ಸಭೆ ನಡೆಸಿ, ಕರಪತ್ರ ಹಾಗೂ ಮತದಾರರ ಪಟ್ಟಿಯನ್ನು ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಅವರಿಗೆ ಹಸ್ತಾಂತರಿಸಿ, ಬೆಂಬಲ ಕೋರಿದರು. ಈ ವೇಳೆ ವಿಪ್ರ ಮುಖಂಡರಾದ ಶಂಕರನಾರಾಯಣ, ವಿಶ್ವನಾಥಯ್ಯ, ಲಕ್ಷ್ಮೀನರಸಿಂಹ, ಡಾ.ಕೆ.ವಿ.ಲಕ್ಷ್ಮೀದೇವಿ, ಜಿ.ಆರ್.ಮೋಹನ್, ಶ್ರೀನಿವಾಸಪ್ರಸಾದ್, ರಾಘವೇಂದ್ರ, ಚಂದ್ರಶೇಖರ್, ಸುನಿಲ್‌ಕುಮಾರ್, ಮೇಟಗಳ್ಳಿ ಸತ್ಯನಾರಾಯಣ, ಕುಮಾರ್, ಮಂಜುನಾಥ್, ರಾಜ್‌ಕುಮಾರ್, ಬಿಮೆಲ್ ರಾಘವೇಂದ್ರ, ಪಿ.ರಮೇಶ್, ರಾಘವೇಂದ್ರ, ಆನಂದ್, ನಾಗೇಶ್, ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಧರ್ಮಮಾರ್ಗದಲ್ಲಿ ನಡೆಯುವ ವ್ಯಕ್ತಿತ್ವವಿರಬೇಕು
ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಕನ್ನಡ ಪ್ರಾಧ್ಯಾಪಕರಾದ ಡಾ.ಶೈಲಾ ಅಭಿಮತ

ಮೈಸೂರು, ಮಾ. 6– ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ, ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಐಕ್ಯೂಎಸಿ ಸಹಯೋಗದಲ್ಲಿ 'ಅಲ್ಲಮನ ವಚನಗಳ ಚಿಂತನೆ' ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಕನ್ನಡ ಪ್ರಾಧ್ಯಾಪಕಿ ಡಾ.ಶೈಲಾ ಮಾತನಾಡಿ, ವಚನ ಚಳುವಳಿಯಲ್ಲಿ ವಿಜ್ಞಾನದ ಜ್ಞಾನ, ಧಾರ್ಮಿಕತೆ, ಸಾಹಿತ್ಯ ಇತ್ಯಾದಿ ಎಲ್ಲವೂ ಇದೆ. ಹಾಗಾಗಿ ಪ್ರಸ್ತುತ ಜಾಗತಿಕ ಆಧ್ಯಾತ್ಮ ಹಾಗೂ ಅನುಭಾವ ಸಾಹಿತ್ಯಕ್ಕೆ ವಚನಕಾರರು ಬಹುದೊಡ್ಡ ಕೊಡುಗೆ ನೀಡಿದ್ದಾರೆ ಎಂದರು.

ಅಲ್ಲಮನ ಜೀವನ ಚಿತ್ರಣ ಹಲವು ಕೃತಿಗಳಲ್ಲಿ ಮೂಡಿಬಂದಿದೆ. ಅಲ್ಲಮ ಶಿವಮೊಗ್ಗದ ಬಳ್ಳಿಗಾವೆಯವನು ನಿರಹಂಕಾರ ಸುಜ್ಞಾನಿಗಳ ಸುಪುತ್ರ. ಅಲ್ಲಮ್ಮ ಮಾಯಾದೇವಿಯವರ ಸಂಬಂಧ, ಅವಳ ಅಗಲಿಕೆ, ನಂತರ ಅನಿಮಿಷ ಗುರುಗಳ ಉಪದೇಶದಿಂದ ವೈರಾಗ್ಯಮೂರ್ತಿಯಾದ. ತಳ ಸಮುದಾಯದ ಮೇಲೆ ಅಪಾರವಾದ ಪ್ರೀತಿ, ಕಾಳಜಿ ಇದ್ದ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪಕ್ಕೆ ಅಲ್ಲಮಪ್ರಭು ಅಧ್ಯಕ್ಷನಾದ. ಪರರಿಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ ಎಂದ ಬಸವಣ್ಣ. ಭಕ್ತಿ ಮೂಲಕ ಬಸವಣ್ಣ, ಜ್ಞಾನದ ಮೂಲಕ ಅಲ್ಲಮ, ಕಾಯಕದ ಸಿದ್ಧರಾಮ ಅನುಭಾವವನ್ನು ಸಾಧಿಸಿದರು. ಅನುಭಾವ ಎಂದರೆ ಚೈತನ್ಯದ ಕ್ಷಣಗಳನ್ನು ಹುಡುಕುವ ಬಗೆ ಆಗಿದೆ. ಅಲ್ಲಮ ಆಧ್ಯಾತ್ಮ ಪ್ರಪಂಚದ ದೀಪಸ್ತಂಭವಾಗಿ ಬೆಳಕು ಬೀರುತ್ತಾರೆ. ಹಠದಲ್ಲಿ ಹಠಯೋಗಿ ಎಂದು ಮುಂತಾಗಿ ಅಲ್ಲಮನ ಬಗೆಗಿನ ಸಂತ ಸಿದ್ದೇಶ್ವರಸ್ವಾಮಿಗಳು ಹೇಳಿದ ಮಾತುಗಳನ್ನು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್ ಜಯಕುಮಾರಿ ಮಾತನಾಡಿ, ವಚನ ಚಳುವಳಿ ವಿಶ್ವಕ್ಕೆ ಒಂದು ಅರಿವನ್ನು ಮೂಡಿಸಿದ ಕಾಲಘಟ್ಟ 900 ವರ್ಷಗಳ ಹಿಂದೆ ಜಾಗತಿಕ ಮಟ್ಟದ ವಿಚಾರ ವಿಮರ್ಶೆಯನ್ನು ಮಾಡಿದ್ದು ವಚನಸಾಹಿತ್ಯ. ಪ್ರತಿಯೊಂದು ವರ್ಗ, ವರ್ಣ, ಲಿಂಗತಾರತಮ್ಯವನ್ನು ಬುಡಮೇಲು ಮಾಡಿ ನಿಜವಾದ ಮಾನವೀಯತೆಯನ್ನು ಕಟ್ಟಿಕೊಟ್ಟವರು ವಚನಕಾರರು ಎಂದರು.

ಇದೇ ವೇಳೆ ಕರ್ನಾಟಕ ಜಾನಪದ ಅಕಾಡೆಮಿ ನೀಡುವ ಜೀಶಂಪ ಪ್ರಶಸ್ತಿಗೆ ಭಾಜನರಾದ ಜಾನಪದ ತಜ್ಞ ಡಾ.ಮೈಲಹಳ್ಳಿ ರೇವಣ್ಣ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರದ ಸರಣಿ ಉಪನ್ಯಾಸ ಮಾಲೆಯ ಸಂಯೋಜಕರು ಹಾಗೂ ಜಾನಪದ ತಜ್ಞರು ಆದ ಡಾ.ಮೈಲಹಳ್ಳಿ ರೇವಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಕಿರಣಕುಮಾರ್ ದೇಸಾಯ್ ಸಿ.ಎಂ ನಿರೂಪಿಸಿದರು, ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ ವಂದಿಸಿದರು.




ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಅಲ್ಲಮನ ವಚನಗಳ ಚಿಂತನೆ' ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕಿ ಡಾ.ಶೈಲಾ ಮಾತನಾಡಿದರು.

ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಹಣ ಪಡೆಯಲು ಮನವಿ

ಮೈಸೂರು, ಮಾ. 6– ಭಾಗ್ಯಲಕ್ಷ್ಮಿ ಯೋಜನೆಯಡಿ 2006–07ನೇ ಸಾಲಿನಲ್ಲಿ ಬಾಂಡ್ ಮಾಡಿಸಿದ ಹೆಣ್ಣು ಮಕ್ಕಳು ಈಗ 18 ವರ್ಷ ಪೂರೈಸಿವೆ. ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಫಲಾನುಭವಿಗಳಿಗೆ ಹಣವನ್ನು ಡಿಬಿಟಿ ಮುಖಾಂತರ ಕಳುಹಿಸಲಾಗುವುದು.

ರಾಜ್ಯದಲ್ಲಿ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನವನ್ನು ಉತ್ತೇಜಿಸುವ ನಿಟ್ಟಿನಲ್ಲಿ 2006–07ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದರು. ಈಗ 2006–07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಮಾಡಿಸಿದ ಹೆಣ್ಣು ಮಗುವಿನ ಬಾಂಡ್ ಈಗ 18 ವರ್ಷ ತುಂಬಿದ್ದು (ಮೆಚ್ಯುರಿಟಿ) ಫಲಾನುಭವಿಗಳಿಗೆ ಹಣ ನೀಡಲಾಗುತ್ತದೆ. ನೋಂದಣಿ ಮಾಡಿಸಿಕೊಂಡಿದ್ದ ಫಲಾನುಭವಿಗಳಿಗೆ 18 ವರ್ಷ ಪೂರ್ಣಗೊಂಡಿರುವುದರಿಂದ ಎಲ್ಲಾ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಪಡೆದು ಹಣ ರವಾನಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಎಲ್ಲಾ ಫಲಾನುಭವಿಗಳು ಯೋಜನೆಯ ಸದುಪಯೋಗಪಡಿಸಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ತಮ್ಮ ತಮ್ಮ ವ್ಯಾಪ್ತಿಗೆ ಬರುವ ಅಂಗನವಾಡಿಗಳಿಗೆ ಭೇಟಿ ನೀಡಬೇಕಾಗಿ ಮೈಸೂರಿನ ನಿಂಗಯ್ಯನಕೆರೆಯ ಅಂಗನವಾಡಿ ಶಿಕ್ಷಕಿ ಮಂಗಳಾ ಮನವಿ ಮಾಡಿದ್ದಾರೆ.



ದೇಶ - ವಿದೇಶ

ಇರಾನ್‌ನಲ್ಲಿ ಹಿಜಾಬ್ ವಿರೋಧಿಸಿ ಹಾಡಿದವನಿಗೆ 74 ಛಡಿ ಏಟು!



ಇರಾನ್: ಇರಾನ್‌ನಲ್ಲಿ ಹಿಜಾಬ್ ವಿರೋಧಿ ಪ್ರತಿಭಟನೆ ಬೆಂಬಲಿಸಿ ಹಾಡು ಹಾಡಿದ್ದ ಪ್ರಸಿದ್ಧ ಗಾಯಕ ಹಾಗೂ ಸಂಗೀತಗಾರ ಮೆಹದಿ ಯರಾಹಿಗೆ 74 ಛಡಿ ಏಟಿನ ಶಿಕ್ಷೆ ನೀಡಲಾಗಿದೆ. ಈ ಕುರಿತು ಇಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರ ಪರ ವಕೀಲರಾದ ಜಹ್ರಾ ಮಿನೌಯಿ ಪೋಸ್ಟ್ ಮಾಡಿದ್ದು, ಶಿಕ್ಷೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. 42 ವರ್ಷದ ಯರಾಹಿ ಅವರನ್ನು ಆಗಸ್ಟ್ 2023ರಲ್ಲಿ ಬಂಧಿಸಲಾಗಿತ್ತು. ತೆಹ್ರಾನ್ ಕ್ರಾಂತಿಕಾರಿ ನ್ಯಾಯಾಲಯದಿಂದ 2 ವರ್ಷ 8 ತಿಂಗಳ ಜೈಲು ಶಿಕ್ಷೆ ಹಾಗೂ 74 ಛಡಿ ಏಟಿನ ಶಿಕ್ಷೆ ವಿಧಿಸಲಾಗಿತ್ತು. ಅವರ ಪ್ರಸಿದ್ಧ ಹಾಡು 'ರೂಸರಿಟೊ' ಬಿಡುಗಡೆಯಾದ ನಾಲ್ಕು ದಿನಗಳ ನಂತರ ಅವರನ್ನು ಬಂಧಿಸಲಾಗಿತ್ತು. ಯರಾಹಿ ಅಂತಿಮವಾಗಿ ಒಂದು ವರ್ಷದ ಶಿಕ್ಷೆಯನ್ನು ಪೂರ್ಣಗೊಳಿಸಿದ್ದು, ದಂಡ ಪಾವತಿಸಿದ ಬಳಿಕ ಕಳೆದ ವರ್ಷ ತಾತ್ಕಾಲಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಇರಾನ್‌ನ ಕ್ರಾಂತಿಕಾರಿ ನ್ಯಾಯಾಲಯ ಇತ್ತೀಚೆಗೆ ಆ ಪ್ರಕರಣದಲ್ಲಿ ನೀಡಿದ ತೀರ್ಪಿನ ಅಂತಿಮ ಭಾಗ–74 ಛಡಿಯೇಟುಗಳ ನೀಡಲಾಗಿದೆ ಎಂದು ಜಹ್ರಾ ಮಿನೌಯಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

'ರೋಜಾ' ಮಾಡದ ಕ್ರಿಕೆಟಿಗ ಶಮಿ ಕ್ರಿಮಿನಲ್ ಎಂದ ಮೌಲಾನಾ



ನವದೆಹಲಿ: ರಂಜಾನ್ ವೇಳೆಯಲ್ಲಿ 'ರೋಜಾ' ಮಾಡದ ಭಾರತೀಯ ಕ್ರಿಕೆಟಿಗ ಮೊಹಮ್ಮದ್ ಶಮಿ ಕ್ರಿಮಿನಲ್ ಎಂದು ಅಖಿಲ ಭಾರತೀಯ ಮುಸ್ಲಿಂ ಜಮಾತ್ ಅಧ್ಯಕ್ಷ ಮೌಲಾನಾ ಶಹಬುದ್ದಿನ್ ರಜ್ವಿ ಬರೇಲ್ವಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಐಸಿಸಿ ಚಾಂಪಿಯನ್ಸ್ ಶಿಪ್ ಟೂರ್ನಿಯ ಆಸೀಸ್ ವಿರುದ್ಧದ ಸೆಮಿಫೈನಲ್ ಪಂದ್ಯದ ವೇಳೆ ಮೊಹಮ್ಮದ್ ಶಮಿ, ರೋಜಾ ಮಾಡದೆ ದೇಶದ ಪರ ಕ್ರಿಕೆಟ್ ಆಡಿದ್ದರು. ಇದಕ್ಕೆ ಪರ ಹಾಗೂ ವಿರೋಧ ಅಭಿಪ್ರಾಯಗಳು ಕೇಳಿಬರುತ್ತಿವೆ. ಈ ಕುರಿತು ANI ಜೊತೆಗೆ ಮಾತನಾಡಿದ ಮೌಲಾನಾ, ಶಮಿ ರೋಜಾ ನಿಯಮಗಳನ್ನು ಪಾಲನೆ ಮಾಡದೆ ಅಪರಾಧ ಮಾಡಿದ್ದಾರೆ. ಅವರು ಹಾಗೆ ಮಾಡಬಾರದಿತ್ತು. ಶರಿಯತ್‌ನ ದೃಷ್ಟಿಯಲ್ಲಿ ಆತ ಅಪರಾಧಿಯಾಗಿದ್ದು, ದೇವರಿಗೆ ಉತ್ತರಿಸಬೇಕು ಎಂದರು. 'ರೋಜಾ' ಮುಸ್ಲಿಂರ ಕಡ್ಡಾಯ ಕರ್ತವ್ಯಗಳಲ್ಲಿ ಒಂದಾಗಿದೆ. ಅದನ್ನು ಪಾಲಿಸದವರು ದೊಡ್ಡ ಅಪರಾಧಿಯಾಗುತ್ತಾರೆ. ಮೈದಾನದಲ್ಲಿದ್ದ ಜನರು ಶಮಿ ನೋಡುತ್ತಿದ್ದರು. ಆತ ಆಡುತ್ತಿದ್ದರೆ ಆರೋಗ್ಯವಾಗಿದ್ದಾನೆ ಎಂದರ್ಥ. ಅಂತಹ ಸ್ಥಿತಿಯಲ್ಲಿ ರೋಜಾ ಆಚರಿಸದೆ ನೀರನ್ನು ಸೇವಿಸುವ ಮೂಲಕ ಜನರಲ್ಲಿ ತಪ್ಪು ಸಂದೇಶ ರವಾನಿಸಿದ್ದಾರೆ ಎಂದು ಕಿಡಿಕಾರಿದರು.

ಲಂಡನ್‌ನಲ್ಲಿ ಜೈಶಂಕರ್ ಮೇಲೆ ಖಲಿಸ್ತಾನಿ ಬೆಂಬಲಿಗರಿಂದ ದಾಳಿ ಯತ್ನ



ಲಂಡನ್: ಲಂಡನ್‌ಗೆ ತೆರಳಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಕುಳಿತಿದ್ದ ಕಾರಿನ ಮೇಲೆ ಖಲಿಸ್ತಾನಿ ಪರ ಬೆಂಬಲಿಗನೊಬ್ಬ ದಾಳಿ ನಡೆಸಲು ಯತ್ನಿಸಿದ ಘಟನೆ ನಡೆದಿದೆ ಎಂದು ವರದಿಯಾಗಿದೆ. ಈ ಕುರಿತಾದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ. ವಿಡಿಯೊದಲ್ಲಿ ಜೈಶಂಕರ್ ಅವರು ಕಾರನ್ನು ಹತ್ತಿ ಕುಳಿತ ತಕ್ಷಣ ಬದಿಯಲ್ಲಿದ್ದ ವ್ಯಕ್ತಿಯೊಬ್ಬ ಭಾರತದ ಧ್ವಜ ಹಿಡಿದು ಕಾರಿನತ್ತ ನುಗ್ಗುತ್ತಾನೆ. ತಕ್ಷಣ ಅಲ್ಲಿದ್ದ ಪೊಲೀಸರು ಆತನನ್ನು ತಡೆಯುತ್ತಾರೆ. ಸುತ್ತಲೂ ನೂರಾರು ಮಂದಿ ಖಲಿಸ್ತಾನಿಗಳು ಧ್ವಜ ಹಿಡಿದು ಘೋಷಣೆ ಕೂಗುತ್ತಿರುವ ದೃಶ್ಯಗಳಿವೆ. ಜೈಶಂಕರ್ ಚರ್ಚೆಯಲ್ಲಿ ಭಾಗವಹಿಸುತ್ತಿದ್ದ ಸ್ಥಳದ ಹೊರಗೆ ಖಲಿಸ್ತಾನಿ ಬೆಂಬಲಿಗರು ಪ್ರತಿಭಟನೆ ನಡೆಸುತ್ತಿರುವುದು ಮತ್ತೊಂದು ವೀಡಿಯೊದಲ್ಲಿ ಕಂಡುಬರುತ್ತಿದೆ. ದೃಶ್ಯಾವಳಿಯಲ್ಲಿ ಅವರು ಧ್ವಜಗಳನ್ನು ಬೀಸುತ್ತಾ ಮತ್ತು ಖಲಿಸ್ತಾನಿ ಪರ ಘೋಷಣೆಗಳನ್ನು ಕೂಗುತ್ತಿದ್ದಾರೆ. ಈ ಕುರಿತು ಭಾರತ ಅಥವಾ ಲಂಡನ್ ಸರ್ಕಾರಗಳಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಮಹಾಕುಂಭ ಟಾರ್ಗೆಟ್ ಮಾಡಿದ್ದ ಐಎಸ್‌ಐ ಉಗ್ರನ ಬಂಧನ



ಕೌಸಂಬಿ: ಉತ್ತರಪ್ರದೇಶ ಎಸ್‌ಟಿಎಫ್ ಮತ್ತು ಪಂಜಾಬ್ ಪೊಲೀಸರು ಕೌಸಂಬಿಯಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಬಬ್ಬರ್ ಖಾಲ್ಸಾ ಎಂಬ ಅಂತಾರಾಷ್ಟ್ರೀಯ ಉಗ್ರ ಸಂಘಟನೆಯ ಮುಖ್ಯಸ್ಥ ಲಾಜರ್ ಮಸಿಹ್ ಎಂಬಾತನನ್ನು ಬಂಧಿಸಿದ್ದಾರೆ. ಐಎಸ್‌ಐ ಉಗ್ರ ಸಂಘಟನೆಯ ಭಾಗವಾಗಿರುವ ಮಸಿಹ್, ಮಹಾಕುಂಭ ಟಾರ್ಗೆಟ್ ಮಾಡಿದ್ದ ಎಂದು ಯುಪಿ ಡಿಜಿಪಿ ಪ್ರಶಾಂತ್‌ಕುಮಾರ್ ಹೇಳಿದ್ದಾರೆ. ಮಹಾಕುಂಭ ಮೇಳದ ವೇಳೆ ತೀವ್ರವಾದ ಭದ್ರತಾ ತಪಾಸಣೆಯಿಂದ ಬಂಧಿತ ಉಗ್ರ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ವಿಫಲವಾಗಿದ್ದ ಎಂದರು. ಬಂಧಿತ ಉಗ್ರ ಜರ್ಮನಿ ಮೂಲದ ಬಬ್ಬರ್ ಖಾಲ್ಸಾ ಅಂತಾರಾಷ್ಟ್ರೀಯ ಉಗ್ರ ಸಂಘಟನೆಯ ಮುಖ್ಯಸ್ಥ ಸ್ವರ್ಣ್‌ಸಿಂಗ್ ಅಲಿಯಾಸ್ ಜೀವನ್ ಫೌಜಿಗಾಗಿ ಕೆಲಸ ಮಾಡುತ್ತಿದ್ದ. ಅಲ್ಲದೇ ಆತ ಪಾಕಿಸ್ತಾನದಿಂದ ಭಾರತಕ್ಕೆ ಶಸ್ತ್ರಾಸ್ತ್ರಗಳು, ಮಾದಕ ವಸ್ತುಗಳ ಕಳ್ಳಸಾಗಣೆ ಮಾಡುತ್ತಿದ್ದ. ಬಂಧಿತನಿಂದ ಅಕ್ರಮ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. 3 ಗ್ರೆನೇಡ್, 2 ಡಿಟೋನೇಟರ್ 13 ಕಾರ್ಟ್ರಿಡ್ಜ್‌ಗಳು ಮತ್ತು 1 ವಿದೇಶಿ ನಿರ್ಮಿತ ಪಿಸ್ತೂಲ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕೊರಿಯಾ ಯುದ್ಧ ವಿಮಾನದಿಂದ ಬಿದ್ದ ಬಾಂಬ್; 7 ಮಂದಿಗೆ ಗಾಯ



ಸಿಯೋಲ್: ದಕ್ಷಿಣ ಕೊರಿಯಾದ ಯುದ್ಧ ವಿಮಾನವೊಂದು ಇಂದು (ಗುರುವಾರ) ನಸುಕಿನ ಜಾವ ತರಬೇತಿ ವೇಳೆ ಜನವಸತಿ ಪ್ರದೇಶದ ಮೇಲೆ ಆಕಸ್ಮಿಕವಾಗಿ ಎಂಟು ಬಾಂಬ್‌ಗಳನ್ನು ಬೀಳಿಸಿದ್ದರಿಂದ ಏಳು ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.

ಕೆಎಫ್–16 ಫೈಟರ್ ಜೆಟ್‌ನಿಂದ ಆಕಸ್ಮಿಕವಾಗಿ ಬಿದ್ದ ಎಂಕೆ–82 ಬಾಂಬ್‌ಗಳಿಂದ ಕೆಲ ನಾಗರಿಕರಿಗೆ ಗಾಯಗಳಾಗಿವೆ ಎಂದು ಸಿಯೋಲ್ ವಾಯುಪಡೆ ಹೇಳಿಕೆಯಲ್ಲಿ ತಿಳಿಸಿದೆ. ಈ ಅಪಘಾತ ಹೇಗೆ ಸಂಭವಿಸಿತು ಎಂಬುದನ್ನು ತನಿಖೆ ಮಾಡಲು ಮತ್ತು ನಾಗರಿಕ ಹಾನಿಯ ಪ್ರಮಾಣ ಬಗ್ಗೆ ಪರಿಶೀಲಿಸಲು ಸಮಿತಿಯನ್ನು ರಚಿಸಲಾಗುವುದು ಎಂದು ಕೂಡ ವಾಯುಪಡೆ ತಿಳಿಸಿದೆ.

ವಾಯುಪಡೆಯು ಸೇನೆಯೊಂದಿಗೆ ಜಂಟಿ ಲೈವ್–ಫೈರಿಂಗ್ ಕವಾಯತುಗಳಲ್ಲಿ ಭಾಗವಹಿಸಿದ್ದ ವೇಳೆ ಘಟನೆ ನಡೆದಿದೆ. ನಾಗರಿಕರಿಗೆ ಉಂಟಾದ ಹಾನಿ ಬಗ್ಗೆ ವಾಯುಪಡೆ ಕ್ಷಮೆ ಯಾಚಿಸಿದ್ದು, ಗಾಯಗೊಂಡವರ ಚೇತರಿಕೆಗೆ ಭರವಸೆ ವ್ಯಕ್ತಪಡಿಸಿದೆ. ಅವರ ಚಿಕಿತ್ಸೆಗೆ ನೆರವಾಗುವುದಾಗಿ ಹಾಗೂ ಪರಿಹಾರ ಒದಗಿಸುವುದಾಗಿ ಕೂಡ ಭರವಸೆ ನೀಡಿದೆ.

ಮೈಸೂರು ಮಿತ್ರ

ಶುಕ್ರವಾರ 7 ಮಾರ್ಚ್ 2025

ಮಡಿಕೇರಿಯಲ್ಲಿ ಬಿಜೆಪಿ ಅಹೋರಾತ್ರಿ ಪ್ರತಿಭಟನೆ

ಕೊಡಗು ವಿವಿ ಮುಚ್ಚಬೇಡಿ, 'ಸಿ' ಮತ್ತು 'ಡಿ' ಜಮೀನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡ ಬೇಡಿ, ಪರಿಶಿಷ್ಟರ ಹಣ ಗ್ಯಾರಂಟಿಗೆ ಬಳಸಬೇಡಿ ಎಂದು ಆಗ್ರಹ

ಬೇಡಿಕೆ ಈಡೇರದಿದ್ದರೆ ಕೊಡಗು ಬಂದ್, ವಿಧಾನಸೌಧ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ

ಮಡಿಕೇರಿ,ಮಾ.6– ರಾಜ್ಯದ ನೂತನ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿರುವ ಕೊಡಗು ವಿಶ್ವವಿದ್ಯಾನಿಲಯವನ್ನು ರದ್ದುಗೊಳಿಸುವ ಸರ್ಕಾರದ ನಿರ್ಧಾರವನ್ನು ವಿರೋಧಿಸಿ, 'ಸಿ ಮತ್ತು ಡಿ' ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಬಾರದು ಎನ್ನುವ ಆಗ್ರಹ ಮತ್ತು ಪರಿಶಿಷ್ಟರಿಗೆ ಮೀಸಲು ಹಣವನ್ನು ಉಚಿತ ಭಾಗ್ಯಗಳಿಗೆ ಬಳಸಬಾರದೆಂದು ಆಗ್ರಹಿಸಿ ಕೊಡಗು ಜಿಲ್ಲಾ ಬಿಜೆಪಿಯಿಂದ 'ಅಹೋರಾತ್ರಿ ಪ್ರತಿಭಟನೆ' ನಗರದ ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಆರಂಭಗೊಂಡಿತು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ಪಕ್ಷದ ವಿವಿಧ ಘಟಕಗಳ ಪ್ರಮುಖರು, ಕಾರ್ಯಕರ್ತರನ್ನು ಒಳಗೊಂಡಂತೆ ಖಾಸಗಿ ಬಸ್ ನಿಲ್ದಾಣದಲ್ಲಿ ಗುರುವಾರ ಪ್ರತಿಭಟನೆ ಆರಂಭಿಸಲಾಗಿದ್ದು, ಈ ಪ್ರತಿಭಟನೆ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಮುಕ್ತಾಯಗೊಳ್ಳಲಿದೆ.

ವಿವಿ ಬಿಟ್ಟು ಕೊಡುವುದಿಲ್ಲ ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಕೊಡಗು ವಿ.ವಿ ಎನ್ನುವುದು ಒಂದೆರಡು ದಿನಗಳಲ್ಲಿ ದೊರಕಿದ್ದಲ್ಲ. ಕಳೆದ 2 ದಶಕಗಳ ನಿರಂತರ ಪ್ರಯತ್ನಗಳಿಂದ, ಜಿಲ್ಲೆಯ ಬಡ ಮಕ್ಕಳ ಉನ್ನತ ವ್ಯಾಸಂಗದ ಕನಸನ್ನು ನನಸುಗೊಳಿಸುವ ನಿಟ್ಟಿನಲ್ಲಿ ದೊರೆತ ಫಲವಾಗಿದೆ ಯಾವುದೇ ಕಾರಣಕ್ಕೂ ಕೊಡಗು ವಿವಿಯನ್ನು ರದ್ದುಗೊಳಿಸಲು ಬಿಡಲಾರೆವು ಎಂದು ಸ್ಪಷ್ಟಪಡಿಸಿದರು.



ಬಿಜೆಪಿಯ ಅಹೋರಾತ್ರಿ ಧರಣಿಯಲ್ಲಿ ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡುತ್ತಿರುವುದು.

ಪ್ರಮುಖ 3 ಬೇಡಿಕೆಗಳನ್ನು ಮುಂದಿಟ್ಟು ಅಹೋರಾತ್ರಿ ಪ್ರತಿಭಟನೆಗೆ ಇಳಿದಿದ್ದೇವೆ. ಇದಕ್ಕೆ ಅಧಿವೇಶನದಲ್ಲಿ ಪರಿಹಾರವನ್ನು ಸರ್ಕಾರ ನೀಡಬೇಕು. ಇಲ್ಲವಾದಲ್ಲಿ ಮಾ.11 ರಂದು 'ಕೊಡಗು ಬಂದ್'ಗೆ ನಿರ್ಧರಿಸಲಾಗಿದೆ. ಇದಾವುದಕ್ಕೂ ಸರ್ಕಾರ ಜಗ್ಗದಿದ್ದಲ್ಲಿ 'ವಿಧಾನ ಸೌಧ ಹಾಗೂ ಮುಖ್ಯಮಂತ್ರಿ–ಡಿಸಿಎಂ ಮನೆಗೆ ಮುತ್ತಿಗೆ' ಪ್ರತಿಭಟನೆಯನ್ನೂ ಹಮ್ಮಿಕೊಳ್ಳಲಿದೆ ಎಂದು ಎಚ್ಚರಿಸಿದರು.

'ಕಲ್ಲು ಬಂಡೆಗೆ ಕಷ್ಟದ ಅರಿವಿಲ್ಲ': ರಾಜ್ಯ ಸರ್ಕಾರದ 'ಕಲ್ಲು ಬಂಡೆ'ಗೆ ಮಳೆ ಬಿಸಿಲು ತಾಕುವುದಿಲ್ಲ, ಕೊಡಗು ವಿ.ವಿ ಮುಚ್ಚಿದರೆ ಸ್ಥಳೀಯ ಬಡ ಕೂಲಿ ಕಾರ್ಮಿಕ, ಬಡವರ ಮಕ್ಕಳ ಶಿಕ್ಷಣಕ್ಕೆ ಉಂಟಾಗುವ ತೊಡಕು, ಸಂಕಷ್ಟಗಳ ಅರಿವೂ ಅವರಿಗಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಉದ್ದೇಶಿಸಿ ಅಪ್ಪಚ್ಚು ರಂಜನ್ ಲೇವಡಿ ಮಾಡಿದರು. ಯಾವುದೇ ಕಾರಣಕ್ಕೂ ಕೊಡಗು ವಿಶ್ವ ವಿದ್ಯಾಲಯವನ್ನು ಮುಚ್ಚಬೇಡಿ ಎಂದು ಪುನರುಚ್ಚರಿಸಿದ ಅಪ್ಪಚ್ಚು ರಂಜನ್, ಭಿಕ್ಷೆ ಬೇಡಿಯಾದರು ವಿವಿಯನ್ನು ನಡೆಸುತ್ತೇವೆ. ವಿವಿಗೆ ಅಗತ್ಯವಾದ ನೆರವಿಗಾಗಿ ಈಗಾಗಲೆ ಇನ್ಫೋಸಿಸ್, ಟಾಟಾ ಸಂಸ್ಥೆಗಳನ್ನು ವಿನಂತಿಸಲಾಗಿದೆ. ಕೊಡಗು ವಿವಿಯನ್ನು ಒಂದೊಮ್ಮೆ ಮುಚ್ಚಲು ಬಿಟ್ಟರೆ ಮುಂದಿನ ದಿನಗಳಲ್ಲಿ ಈ ಸರ್ಕಾರ ಕೊಡಗಿನಲ್ಲಿರುವ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜು, ಸೈನಿಕ ಶಾಲೆಗಳನ್ನು ಮುಚ್ಚಿ ಬಿಡಬಹುದು ಎನ್ನುವ ಆತಂಕ ವ್ಯಕ್ತಪಡಿಸಿದರು.

ಕಂದಾಯ ಇಲಾಖೆ ಕಡೆಗಣನೆ: ಕೊಡಗಿನ 'ಸಿ ಅ್ಯಂಡ್ ಡಿ' ಜಮೀನಿನಲ್ಲಿ ಬಡ ಮಂದಿ ಸಣ್ಣಪುಟ್ಟ ಕೃಷಿ ಚಟುವಟಿಕೆಯೊಂದಿಗೆ, ಮನೆಗಳನ್ನು ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಈ ಸಿ ಮತ್ತು ಡಿ ಪ್ರದೇಶವನ್ನು 1991–92ರಲ್ಲಿ ಅರಣ್ಯ ಇಲಾಖೆಗೆ ಹಸ್ತಾಂತರಿಸುವ ವೇಳೆ ಅಗತ್ಯ ಸಂದರ್ಭಗಳಲ್ಲಿ ಇದನ್ನು ಮರಳಿ ಪಡೆಯುವ ನಿಬಂಧನೆಯನ್ನು ಹಾಕಲಾಗಿದೆ. ಹೀಗಿದ್ದೂ ಇದೀಗ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಕಂದಾಯ ಇಲಾಖೆಯನ್ನು ಕಡೆಗಣಿಸಿ ಸಿ ಮತ್ತು ಡಿ ಜಮೀನನ್ನು ಅರಣ್ಯಕ್ಕೆ ಒಳಪಡಿಸುವ ಪ್ರಯತ್ನಕ್ಕೆ ಮುಂದಾಗಿರುವುದನ್ನು ತೀವ್ರವಾಗಿ ಖಂಡಿಸಿದರು.

ಬೀದಿ–ಹಳ್ಳಿಗಳಲ್ಲಿ ಹೋರಾಟ: ಹವಾಮಾನ ವೈಪರೀತ್ಯಗಳಿಂದ ಕೊಡಗಿನ ಕಾಫಿ ಬೆಳೆಗಾರ ಫಸಲು ನಷ್ಟಕ್ಕೆ ಒಳಗಾಗಿದ್ದರು ಸರ್ಕಾರ ಪರಿಹಾರ ಒದಗಿಸಿಲ್ಲ. ಭಾರೀ ಮಳೆಯಿಂದ ಕೊಡಗು ತೀವ್ರ ಸಂಕಷ್ಟಕ್ಕೆ ಸಿಲುಕಿದರೂ ಇಡೀ ನಾಡಿಗೆ ಇದರಿಂದ ಒಳಿತಾಗಲಿದೆ ಎನ್ನುವ ಕಾರಣಗಳಿಂದ ಜಿಲ್ಲೆಯ ಜನತೆ ತಮ್ಮೆಲ್ಲ ಸಂಕಷ್ಟಗಳನ್ನು ಸಹಿಸಿಕೊಂಡು ಹೃದಯ ಶ್ರೀಮಂತಿಕೆ ತೋರುತ್ತಿದ್ದಾರೆ. ಇಂತಹ ಕೊಡಗನ್ನು ಸರ್ಕಾರ ಕಡೆಗಣಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು. ನಮ್ಮ ಬೇಡಿಕೆಗಳನ್ನು ರಾಜ್ಯ ಸರಕಾರ ಪರಿಗಣಿಸದಿದ್ದಲ್ಲಿ ಬೀದಿ ಬೀದಿ, ಹಳ್ಳಿ–ಹಳ್ಳಿಗಳಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಹೋರಾತ್ರಿ ಧರಣಿ ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ನೆಲ್ಲೀರ ಚಲನ್, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ನಾಲ್ಕು ಮಂಡಲಗಳ ಅಧ್ಯಕ್ಷರು, ಪಕ್ಷದ ಮುಖಂಡರಾದ ಕೋಡಿ ಪೊನ್ನಪ್ಪ, ಶಾಂತೆಯಂಡ ರವಿ ಕುಶಾಲಪ್ಪ, ಕಾಂಗೀರ ಸತೀಶ್, ಕನ್ನಂಡ ಸಂಪತ್, ಕಾಂತಿ ಸತೀಶ್, ಅನಿತಾ ಪೂವಯ್ಯ, ಲೋಕೇಶ್ವರಿ ಗೋಪಾಲ್, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಜಿ.ಎಂ.ಸತೀಶ್ ಪೈ, ಡೀನ್ ಬೋಪಣ್ಣ, ಪಿ.ಎಂ.ರವಿ, ಬಿ.ಬಿ.ಶಿವಪ್ಪ, ಬಿ.ಎ.ಹರೀಶ್ ಸೇರಿದಂತೆ ಹಲವು ಪ್ರಮುಖರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಾಡಾನೆ ದಾಳಿಯಿಂದ ಕಾರ್ಮಿಕನಿಗೆ ಗಂಭೀರ ಗಾಯ

ಸೈಕಲ್‌ನಲ್ಲಿ ನೆಂಟರ ಮನೆಗೆ ತೆರಳುತ್ತಿದ್ದಾಗ ದುರಂತ



ಮಡಿಕೇರಿ,ಮಾ.6– ಕೆಲಸ ಮುಗಿಸಿ ನೆಂಟರ ಮನೆಗೆ ಸೈಕಲ್‌ನಲ್ಲಿ ತೆರಳುತ್ತಿದ್ದ ಕಾರ್ಮಿಕನ ಮೇಲೆ ಕಾಡಾನೆಯೊಂದು ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗದ್ದಿಗೆ ಬೆಟ್ಟದ ಸಮೀಪದ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ವಿರಾಜಪೇಟೆ ವಿನಾಯಕನಗರದ ನಿವಾಸಿ ನಿಂಗಪ್ಪ(68) ಕಾಡಾನೆ ದಾಳಿಯಿಂದ ಗಾಯಗೊಂಡು ಮಾಲ್ದಾರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಾರ್ಮಿಕ ನಿಂಗಪ್ಪ ಪಿರಿಯಾಪಟ್ಟಣ ನವಿಲೂರು ಗ್ರಾಮದ ನೆಂಟರ ಮನೆಗೆ ಸೈಕಲ್‌ನಲ್ಲಿ ಮಾಲ್ದಾರೆ ಮಾರ್ಗವಾಗಿ ತೆರಳುತ್ತಿದ್ದ ವೇಳೆ ಗದ್ದಿಗೆ ಬೆಟ್ಟದ ಸಮೀಪದ ಮುಖ್ಯ ರಸ್ತೆಯ ತಿರುವಿನಲ್ಲಿ ಕಾಡಾನೆಯೊಂದು ಏಕಾಏಕಿ ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದೆ. ಸೈಕಲನ್ನು ತುಳಿದು ಜಖಂಗೊಳಿಸಿದ್ದು, ಮತ್ತೆ ದಾಳಿಗೆ ಮುಂದಾಗುತ್ತಿದ್ದಂತೆ ಇದೇ ಮಾರ್ಗವಾಗಿ ಬರುತ್ತಿದ್ದ ವಾಹನವನ್ನು ಕಂಡ ಕಾಡಾನೆ ಅರಣ್ಯದ ಕಾಡಿನಲ್ಲಿ ನುಸುಳಿ ಮರೆಯಾಗಿದೆ. ಮಾಹಿತಿ ತಿಳಿದು ಗಸ್ತು ತಿರುಗುತ್ತಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಗಾಯಾಳು ನಿಂಗಪ್ಪನನ್ನು ಮಾಲ್ದಾರೆ ಆಸ್ಪತ್ರೆಗೆ ಕರೆತಂದು ಪ್ರಥಮ ಚಿಕಿತ್ಸೆ ನೀಡಿ ನಂತರ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಸ್ಥಳಕ್ಕೆ ಆರ್‌ಎಫ್‌ಓ ರತನ್ ಕುಮಾರ್, ಡಿಆರ್‌ಎಫ್‌ಓ ಚನ್ನ ವೀರೇಶ್, ಹಂಸ, ಅರಣ್ಯ ರಕ್ಷಕರಾದ ಸಂಪತ್, ತಮ್ಮಣ್ಣ ಸಿಬ್ಬಂದಿಗಳಾದ ಶಶಿ, ಪ್ರಜ್ವಲ್, ರಾಜಪ್ಪ ಭೇಟಿ ನೀಡಿದ್ದರು.

ಇಂಜಿನಿಯರ್ ಅಧಿಕಾರ ಸ್ವೀಕಾರ



ವಿರಾಜಪೇಟೆ,ಮಾ.6– ವಿರಾಜಪೇಟೆ ಪುರಸಭೆಯ ನೂತನ ಅಭಿಯಂತರರಾಗಿ ಎನ್.ಪಿ.ಹೇಮಾಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಸಂದರ್ಭ ಪುರಸಭೆ ಸದಸ್ಯರು ಮತ್ತು ಸಿಬ್ಬಂದಿಗಳು ಅಭಿಯಂತರರಿಗೆ ಹೂ ಗುಚ್ಛ ನೀಡಿ ಪೇಟ ಮತ್ತು ಶಾಲು ಹೊದಿಸಿ ಸನ್ಮಾನಿಸಿದರು.

ಪುರಸಭೆಯಲ್ಲಿ ಅಭಿಯಂತರರಿಲ್ಲದೆ ಅನೇಕ ಸಮಯದಿಂದಲೂ ಅಭಿವೃದ್ಧಿ ಕಾಮಗಾರಿಗಳು ನನೆಗುದಿಗೆ ಬಿದ್ದಿತ್ತು. ಈ ಕಾರಣದಿಂದ ಕ್ಷೇತ್ರದ ಶಾಸಕ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್. ಪೊನ್ನಣ್ಣ ಅವರ ಆದೇಶದಂತೆ ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಭಿಯಂತರ ಹೇಮಾಕುಮಾರ ವಿರಾಜಪೇಟೆ ಪುರಸಭೆಯಲ್ಲಿ ಅಧಿಕಾರ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಪುರಸಭೆಯ ಹಿರಿಯ ಸದಸ್ಯ ಸಿ.ಕೆ.ಪೃಥ್ವಿನಾಥ್, ಟಿ.ಎಂ.ಸುನಿತ ಜೂನಾ, ಆಶಾ ಸುಬ್ಬಯ್ಯ ಅವರುಗಳು ಮಾತನಾಡಿ, ಅಭಿಯಂತರ ಹೇಮಾಕುಮಾರ್ ಈ ಹಿಂದೆ ಶಿಸ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ್ದರು. ಮುಂದೆಯು ವಿರಾಜಪೇಟೆಯಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳು ನಡೆಯುವಂತಾಗಲಿ ಎಂದರು. ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಸದಸ್ಯರಾದ ವಿ.ಆರ್.ರಜನಿಕಾಂತ್, ಹೆಚ್.ಪಿ.ಮಹದೇವ್, ಪೂರ್ಣಿಮಾ, ಅಗಸ್ಟಿನ್ ಬೆನ್ನಿ, ಸಿಬ್ಬಂದಿಗಳು ಹಾಜರಿದ್ದರು.

ನಾಳೆಯಿಂದ ಶ್ರೀ ಮೃತ್ಯುಂಜಯ ದೇವಾಲಯದ ವಾರ್ಷಿಕೋತ್ಸವ



ಮಡಿಕೇರಿ,ಮಾ.6– ಇತಿಹಾಸಪ್ರಸಿದ್ಧ ಪೊನ್ನಂಪೇಟೆ ತಾಲೂಕಿನ ಬಾಡಗರ ಕೇರಿಯ ಶ್ರೀ ಮೃತ್ಯುಂಜಯ ದೇವಾಲಯದ ವಾರ್ಷಿಕೋತ್ಸವವು ಮಾ.8ರಿಂದ 19ರವರೆಗೆ ನಡೆಯಲಿದೆ. ದೇವಾಲಯದಲ್ಲಿ 12 ದಿನಗಳ ಕಾಲ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ.

ಮಾ.8 ರಂದು ಬೆಳಿಗ್ಗೆ 6 ಗಂಟೆಗೆ ತಕ್ಕ ಮುಖ್ಯಸ್ಥರು, ಆಡಳಿತ ಮಂಡಳಿ, ಊರಿನವರು ಮತ್ತು ಊರಿನ ಮಹಿಳೆಯರಿಂದ 12 ತಳಿಯ ತಕ್ಕಿ, ಬೊಳ್ಚ, ದುಡಿಕೊಟ್ಟ್ ಪಾಟ್‌ನೊಂದಿಗೆ ಹಬ್ಬಕ್ಕೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 6.30 ಗಂಟೆಯಿಂದ ಊರಿನ ಪರವಾಗಿ ಶತರುದ್ರಾಭಿಷೇಕ, ಪ್ರಸಾದ ವಿತರಣೆ ನಡೆಯಲಿದ್ದು, ರಾತ್ರಿ 8 ಗಂಟೆಗೆ ಆರಿದ್ರ ನಕ್ಷತ್ರದ ಮುಹೂರ್ತದಲ್ಲಿ 'ಕೊಡಿಮರ' ನಿಲ್ಲಿಸುವುದು, ಶುದ್ಧ ಕಲಶ, ಉತ್ಸವ ಮೂರ್ತಿ ದರ್ಶನ, ಪ್ರಸಾದ ವಿತರಣೆ ಹಾಗೂ ರಾತ್ರಿ 9 ಗಂಟೆಗೆ ಅನ್ನಸಂತರ್ಪಣೆ ಜರುಗಲಿದೆ. ತುಲಾಭಾರ ಸೇವೆ ಮಾಡಿಸುವವರು ಅಕ್ಕಿ, ಬೆಲ್ಲ, ಎಣ್ಣೆ, ತರಕಾರಿ ಇತ್ಯಾದಿ ವಸ್ತುಗಳನ್ನು ತರಬೇಕೆಂದು ದೇವಾಲಯದ ಆಡಳಿತ ಮಂಡಳಿ ಮನವಿ ಮಾಡಿದೆ. ತುಲಾಭಾರ ಸೇವೆಯು ಮಾ.12ರಿಂದ 18ರವರೆಗೆ ನಡೆಯಲಿದ್ದು ಹೆಚ್ಚಿನ ಮಾಹಿತಿಗಾಗಿ 81978 70058 ಸಂಪರ್ಕಿಸಬಹುದು.

ಮಾದಕ ವಸ್ತುಗಳ ಬಗ್ಗೆ ಅರಿವು ಕಾರ್ಯಕ್ರಮ

ಮಡಿಕೇರಿ,ಮಾ.6– ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯ ಸೋಮವಾರಪೇಟೆ ಉಪ ವಿಭಾಗದ ಆಶ್ರಯದಲ್ಲಿ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಕಾರ್ಯಕ್ರಮ ಕುಶಾಲನಗರ ಸರಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಿತು.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಅವರು ಕಾರ್ಯಕ್ರಮ ಉದ್ಘಾಟಿಸಿ, ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಮಾದಕ ವಸ್ತುಗಳ ವಿಧಗಳು, ಅವುಗಳ ಬಳಕೆಯಿಂದ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನೆಗಳ ಮೂಲಕ ಉತ್ತರಿಸಿದರು. ಭಯೋತ್ಪಾದನೆ ಚಟುವಟಿಕೆಗಳಿಗೆ ಮಾದಕ ವಸ್ತುಗಳ ಉತ್ಪಾದನೆ, ಸರಬರಾಜು, ಅದರಿಂದ ದೇಶದ ಮೇಲೆ ಉಂಟಾಗುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿದರು. ಇದರೊಂದಿಗೆ ಸಂಚಾರಿ ನಿಯಮ ಉಲ್ಲಂಘನೆಯಿಂದ ಉಂಟಾಗುತ್ತಿರುವ ಅನಾಹುತಗಳ ಬಗ್ಗೆ ಮಾಹಿತಿ ನೀಡಿ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದರು.



ಚಾಮರಾಜನಗರ ರಾಯರ ಮಠದಲ್ಲಿ ವಿಜೃಂಭಣೆಯ ಗುರು ಭಕ್ತಿ ಉತ್ಸವ



ಚಾಮರಾಜನಗರ: ನಗರದ ಶಂಕರಪುರ ಬಡಾವಣೆಯ ವಾದಿರಾಜನಗರದಲ್ಲಿರುವ ಶ್ರೀ ಗುರು ರಾಘವೇಂದ್ರಸ್ವಾಮಿ ಮಠದಲ್ಲಿ ಗುರುವಾರದಂದು ಗುರು ಭಕ್ತಿ ಉತ್ಸವವು ಭಕ್ತಿಪೂರ್ವಕವಾಗಿ ನೆರವೇರಿತು.

ಮಂತ್ರಾಲಯ ಪ್ರಭು ಶ್ರೀ ಗುರುರಾಘವೇಂದ್ರಸ್ವಾಮಿಗಳ 430ನೇ ಜನ್ಮದಿನದ ಪ್ರಯುಕ್ತ ಶ್ರೀ ಮಠದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು, ಶ್ರೀ ರಾಘವೇಂದ್ರಸ್ತೋತ್ರ ಪಂಚಾಮೃತ ಅಭಿಷೇಕ, ಸಾಮೂಹಿಕ ಕನಕಾಭಿಷೇಕ ಸೇರಿದಂತೆ ಸಾಮೂಹಿಕ ರಥೋತ್ಸವವು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಪೂರಕವಾಗಿ ನಡೆಯಿತು.

ಶ್ರೀ ಗುರುರಾಘವೇಂದ್ರಸ್ವಾಮಿಗಳಿಗೆ ವಿಶೇಷ ಹೂವಿನ ಅಲಂಕಾರ ಹಾಗೂ ವಿವಿಧ ಬಗೆಯ ಫಲ–ಪುಷ್ಪಗಳ ಹಣ್ಣಿನ ಅಲಂಕಾರವು ಭಕ್ತರ ಗಮನ ಸೆಳೆಯಿತು. ಇದೇ ಸಂದರ್ಭದಲ್ಲಿ ಶ್ರೀ ಮಠದ ವತಿಯಿಂದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯಿತು. ರಾಯರ ದರ್ಶನ ಪಡೆದ ಭಕ್ತ ಸಮೂಹ ಪುನೀತವಾಯಿತು.

ಈ ಸಂದರ್ಭದಲ್ಲಿ ಶ್ರೀ ಮಠದ ಮುಖ್ಯಸ್ಥರಾದ ವಾಸುದೇವರಾವ್, ಅರ್ಚಕರಾದ ಪವನ್ ಮತ್ತು ಶ್ರೀಧರ್ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

ಮನೆ ಮುಂದಿನ ಮರಕ್ಕೆ ನೇಣು ಹಾಕಿಕೊಂಡು ಯುವಕ ಆತ್ಮಹತ್ಯೆ

ಚಾಮರಾಜನಗರ, ಮಾ.6– ಮನೆಯ ಮುಂಭಾಗ ಬೆಳೆದಿದ್ದ ಮರಕ್ಕೆ ಯುವಕ ನೋರ್ವ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಮಸಗಾಪುರ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಗ್ರಾಮದ ಕೀರ್ತಿಕುಮಾರ್(37) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತನ ಸಾವಿಗೆ ಜೀವನದ ಜಿಗುಪ್ಸೆಯೇ ಕಾರಣ ಎನ್ನಲಾಗಿದೆ. ಗ್ರಾಮಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ವಿ.ಲಕ್ಷ್ಮಯ್ಯ, ಚಾಮರಾಜನಗರ ಗ್ರಾಮಾಂತರ ಠಾಣೆ ಎಸ್‌ಐ ಚಿಕ್ಕರಾಜಶೆಟ್ಟಿ ಭೇಟಿ ನೀಡಿ ಮೃತದೇಹ ಪರಿಶೀಲಿಸಿದರು.

ಯಡಬೆಟ್ಟ ಸಿಮ್ಸ್ ಆಸ್ಪತ್ರೆಗೆ ಮೃತದೇಹ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲೆನಾಡು ಅಭಿವೃದ್ಧಿ ವ್ಯಾಪ್ತಿಗೆ ಯಳಂದೂರು ಸೇರಿಸಲು ಶಾಸಕ ಕೃಷ್ಣಮೂರ್ತಿ ಒತ್ತಾಯ



ಯಳಂದೂರು ತಾಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸುವಂತೆ ಒತ್ತಾಯಿಸಿ ಶಾಸಕ ಎ.ಆರ್. ಕೃಷ್ಣಮೂರ್ತಿ ಬುಧವಾರ ಸದನದಲ್ಲಿ ಮಾತನಾಡಿದರು.

ಯಳಂದೂರು, ಮಾ.6– ಬೆಂಗಳೂರಿನಲ್ಲಿ ನಡೆಯುತ್ತಿರುವ ಸದನದ ಕಲಾಪದಲ್ಲಿ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಯಳಂದೂರು ತಾಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸುವಂತೆ ಬುಧವಾರ ನಡೆದ ಸದನದ ಚರ್ಚೆಯಲ್ಲಿ ಮನವಿ ಮಾಡಿದ್ದಾರೆ.

ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ತಾಲೂಕುಗಳು ಬರುತ್ತವೆ. ಇದರಲ್ಲಿ ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲೂಕಿನ ಸಂತೆಮರಹಳ್ಳಿ ಹೋಬಳಿಯನ್ನು ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸಲಾಗಿದೆ. ಆದರೆ ಯಳಂದೂರು ತಾಲೂಕು ಸೇರಿಲ್ಲ. ಒಟ್ಟು 28 ಕಂದಾಯ ಗ್ರಾಮಗಳು, 12 ಗ್ರಾಮ ಪಂಚಾಯಿತಿಗಳನ್ನು ಇದು ಒಳಗೊಂಡಿದೆ. ಕಳೆದ ವರ್ಷ ಡಿ.11 ರಂದು ನಡೆದ ಅಧಿವೇಶನದಲ್ಲೂ ನಾನು ಈ ವಿಷಯವನ್ನು ಪ್ರಸ್ತಾಪಿಸಿದ್ದೆ. ಈ ತಾಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸಿದ್ದಲ್ಲಿ ಇಲ್ಲಿನ ಅಭಿವೃದ್ಧಿಗೆ ಇದು ಪೂರಕವಾಗುತ್ತದೆ ಎಂದರು.

ಇದಕ್ಕೆ ಯೋಜನೆ ಮತ್ತು ಸಾಂಖ್ಯಿಕ ಸಚಿವರಾದ ಡಿ.ಸುಧಾಕರ್ ಉತ್ತರಿಸಿ ಈ ವಿಷಯವನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಭೆ ಮುಂದೆ ತಂದು ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದು ಉತ್ತರಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಿ

ದಿಶಾ ಸಭೆಯಲ್ಲಿ ಲೋಕಸಭಾ ಸದಸ್ಯರಾದ ಸುನಿಲ್ ಬೋಸ್ ಸೂಚನೆ

ಚಾಮರಾಜನಗರ, ಮಾ.6– ಜಿಲ್ಲಾ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ರಸ್ತೆ ಸಂಚಾರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಲೋಕಸಭಾ ಸದಸ್ಯ ಸುನಿಲ್ ಬೋಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ನೂತನ ಕೆಡಿಪಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸಾರ್ವಜನಿಕ ಸಂಚಾರಕ್ಕಾಗಿ ಜಿಲ್ಲೆಯಲ್ಲಿ ಇತ್ತೀಚೆಗೆ ಅಭಿವೃದ್ಧಿಪಡಿಸಲಾಗಿರುವ ರಸ್ತೆಗಳಲ್ಲಿ ಸಂಚಾರಿ ಸುರಕ್ಷತಾ ಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕು. ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ರಸ್ತೆಗಳ ಗುಣಮಟ್ಟ ಕಾಪಾಡಬೇಕು. ಅಗತ್ಯವಿರುವೆಡೆ ವೃತ್ತಗಳನ್ನು ನಿರ್ಮಿಸಬೇಕು. ಈ ಸಂಬಂಧ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಜನರಿಗೆ ಅನುಕೂಲ ಕಲ್ಪಿಸಬೇಕು ಎಂದು ಸೂಚಿಸಿದರು.



ಜಿಲ್ಲಾ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಸಂಸದ ಸುನಿಲ್ ಬೋಸ್ ಮಾತನಾಡಿದರು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅಮೃತ್ 2.0 ಯೋಜನೆ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಯಾವುದೇ ಯೋಜನೆ, ಕಾರ್ಯಕ್ರಮಗಳನ್ನು ನಿಯಮಾನುಸಾರ ಅಧಿಕಾರಿಗಳು ನನ್ನನ್ನು ಸೇರಿದಂತೆ ಜನಪ್ರತಿನಿಧಿಗಳ ಗಮನಕ್ಕೆ ತಂದು ಅನುಷ್ಠಾನಗೊಳಿಸಬೇಕು. ಬೇಸಿಗೆ ಆರಂಭವಾಗುತ್ತಿರುವುದರಿಂದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಜಲ ಜೀವನ್ ಯೋಜನೆಯಡಿ ಕಾಡಂಚಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿಪಡಿಸದೇ ಸಹಕರಿಸಬೇಕು ಎಂದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು, ಜಿಲ್ಲೆಯ ಕಾಡಂಚಿನ ಪ್ರದೇಶಗಳು ಹಾಗೂ ಹಾಡಿಗಳಿಗೆ ಸಂಪರ್ಕ ರಸ್ತೆ, ವಿದ್ಯುದ್ದೀಕರಣ, ಕುಡಿಯುವ ನೀರು ಸೇರಿದಂತೆ ಇತರೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಕಾಮಗಾರಿ ಆರಂಭಿಸುವಂತೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ವಿದ್ಯುದ್ದೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಉಳಿದ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು ಎಂದರು.

ಸಂಸದ ಸುನಿಲ್ ಬೋಸ್ ಮಾತನಾಡಿ, ಜಿಲ್ಲೆಯಲ್ಲಿ ಬ್ಯಾಂಕುಗಳು ಜನರಿಗೆ ಸಕಾಲದಲ್ಲಿ ಸಾಲ ನೀಡಬೇಕು. ಜನರನ್ನು ಪದೇಪದೆ ಅಲೆದಾಡಿಸಬಾರದು. ಬಡವರಿಗೆ ಅನುಕೂಲವಾಗುವ ಯೋಜನೆಗಳನ್ನು ಕೇಂದ್ರಸರ್ಕಾರ ಅನುಷ್ಠಾನ ಮಾಡುತ್ತಿದೆ. ಯೋಜನೆಗಳು ಫಲಪ್ರದವಾಗಬೇಕು. ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನವಾಗಬೇಕು ಎಂದರು.

ಅಂಗನವಾಡಿಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ನೀಡಬೇಕು. ಇತ್ತೀಚೆಗೆ ಕಾಣಿಸಿಕೊಂಡಿರುವ ಹಕ್ಕಿಜ್ವರ ಇತರೆಡೆಯಿಂದ ಜಿಲ್ಲೆಗೆ ವ್ಯಾಪಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಅಧಿಕಾರಿಗಳು ವಹಿಸಬೇಕು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಯಾವುದೇ ಲೋಪಗಳಾಗದಂತೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಕಂಡು ಬಂದರೆ ತಕ್ಷಣವೇ ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ಪ್ರಾಣಹಾನಿ ಸಂಭವಿಸದಂತೆ ಎಚ್ಚರ ವಹಿಸುವಂತೆ ಸಂಸದ ಸುನಿಲ್ ಬೋಸ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆ ಮಂಜೂರಾಗಿರುವ ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ವಿತರಿಸಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕಂಡಾಯ ಹೊತ್ತು ಸಮಾನತೆ ಸಾರಿದ ಕೆಸ್ತೂರಿನ ದಲಿತ ನೀಲಗಾರರು



ಕಂಡಾಯ ಹೊತ್ತು ಸಾಗಿದ ನೀಲಗಾರರು.

ಯಳಂದೂರು, ಮಾ.6– ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ದಲಿತ ನೀಲಗಾರರು ತಾಲೂಕಿನಲ್ಲಿಯೇ ಮೊದಲ ಬಾರಿಗೆ ಮಂಟೇಸ್ವಾಮಿ ಪರಂಪರೆಗೆ ಸಾಕ್ಷಿಯಾಗಿರುವ ಕಂಡಾಯವನ್ನು ಹೊರುವ ಮೂಲಕ ಐತಿಹಾಸಿಕ ಘಟನೆಗೆ ಸಾಕ್ಷಿಯಾದರು.

ಗ್ರಾಮದ ನಂಜುಂಡಸ್ವಾಮಿರವರು ತಮ್ಮ ಮಗನಿಗೆ ನೀಲಗಾರರನ್ನು ಮಾಡಲು ಕುರುಬನ ಕಟ್ಟೆ ಕಂಡಾಯವನ್ನು ತರಿಸಿ ಕಾರ್ಯಕ್ರಮ ಮಾಡುವಾಗ ಗ್ರಾಮದ ದಲಿತ ನೀಲಗಾರರು ಕಂಡಾಯವನ್ನು ಹೊತ್ತು ಸಮಾನತೆ ಸಾರಿದರು.

ಕಂಡಾಯ ಹೊರುವಂತಹ ಪದ್ಧತಿ ಕುರುಬ ಸಮುದಾಯ, ಲಿಂಗಾಯತರು, ನಾಯಕರಿಗೆ ಮಾತ್ರ ಮೀಸಲಾಗಿತ್ತು ಈ ವಿಷಯವನ್ನು ದಲಿತ ಮುಖಂಡರು, ಜನಪ್ರತಿನಿಧಿಗಳು ಕುರುಬನ ಕಟ್ಟೆ ಕ್ಷೇತ್ರದ ಧರ್ಮಾಧಿಕಾರಿ ವರುಣರಾಜೇ ಅರಸು ಸಮ್ಮುಖದಲ್ಲಿ ಚರ್ಚಿಸಿ ನಂತರ ಕಳೆದ ವರುಷ ಕೊಳ್ಳೇಗಾಲದ ಸಿದ್ದಯ್ಯನಪುರದಲ್ಲಿ ದಲಿತ ನೀಲಗಾರರು ಚಾಮರಾಜನಗರ ಜಿಲ್ಲೆಯಲ್ಲಿಯೇ ಮೊಟ್ಟಮೊದಲು ಕಂಡಾಯಹೊತ್ತು ಇತಿಹಾಸ ಮಾಡಿದ್ದರು. ಅದೇ ರೀತಿ ಯಳಂದೂರು ತಾಲೂಕಿನ ಕೆಸ್ತೂರು ಗ್ರಾಮದ ಯಜಮಾನರು, ಧರ್ಮಾಧಿಕಾರಿ ವರುಣರಾಜೇ ಅರಸು ಅವರ ಬಳಿ ಹೋಗಿ ನಮ್ಮ ಗ್ರಾಮದಲ್ಲಿಯೂ ದಲಿತ ನೀಲಗಾರರು ಕಂಡಾಯ ಹೊರುವುದಕ್ಕೆ ಅನುಮತಿ ಕೇಳಿದಾಗ ಮಂಟೇಸ್ವಾಮಿ ಪರಂಪರೆ ಸಮಾನತೆಯಿಂದ ಕೂಡಿದೆ. ಯಾವುದೇ ತಾರತಮ್ಯವಿಲ್ಲ. ದಲಿತರೂ ಕೂಡ ಹೊರಬಹುದು ಎಂದರು.

ಈ ಹಿನ್ನೆಲೆಯಲ್ಲಿ ಕುರುಬನ ಕಟ್ಟೆ ಕ್ಷೇತ್ರದ ಕಂಡಾಯವನ್ನು ಕೆಸ್ತೂರು ಗ್ರಾಮದ ದಲಿತ ನೀಲಗಾರರು ಹೊತ್ತು ಸಮಾನತೆಯನ್ನು ಸಾರುವುದರ ಜೊತೆಗೆ, ಯಳಂದೂರು ತಾಲೂಕಿನಲ್ಲಿಯೇ ಮೊಟ್ಟ ಮೊದಲು ದಲಿತ ನೀಲಗಾರರು ಕಂಡಾಯವನ್ನು ಹೊತ್ತು ಐತಿಹಾಸಿಕ ಘಟನೆ ಸಾಕ್ಷಿಯಾಗಿದೆ.

ಈ ಸಂದರ್ಭದಲ್ಲಿ ಗ್ರಾಮದ ಯಜಮಾನರಾದ ನಾಗರಾಜು.ಬಿ, ಕುಮಾರ್, ಜಯರಾಜ್, ದೊರೆಸ್ವಾಮಿ, ಮುಖಂಡರಾದ ಸಿದ್ದರಾಜು, ನಾಗರಾಜು ಎಂ, ಮಧು ಕೆಸ್ತೂರು, ಸಿದ್ದಯ್ಯ, ನಾಗಯ್ಯ, ಸಿದ್ದರಾಜು, ರಾಮಕೃಷ್ಣ, ಮಾದಪ್ಪ, ಗ್ರಾಪಂ ಸದಸ್ಯರಾದ ಗುರುಲಿಂಗಯ್ಯ, ಪ್ರಸಾದ್, ಮಹೇಂದ್ರ, ಅಂಬೇಡ್ಕರ್ ಸಂಘದ ಅಧ್ಯಕ್ಷ ಸಚಿನ್, ಅಂಬೇಡ್ಕರ್ ಸಂಘದ ಪದಾಧಿಕಾರಿಗಳಾದ ಸಂಜಯರಾಜ್ ಜೆ. ಕಿರಣ್, ನಂಜಯ್ಯ, ರಾಜು, ಚಿಕ್ಕನಿಂಗಯ್ಯ, ಹಾಗೂ ಗ್ರಾಮದ ನೀಲಗಾರರು, ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ಅಪರಾಧಿಗೆ 3 ವರ್ಷ ಜೈಲು

ಚಾಮರಾಜನಗರ: ಅಪ್ರಾಪ್ತೆಯನ್ನು ಪ್ರೀತಿಸುವುದಾಗಿ ನಂಬಿಸಿ ಮದುವೆ ಮಾಡಿಕೊಳ್ಳುತ್ತೇನೆಂದು ಅಪಹರಿಸಿ ಲೈಂಗಿಕ ಕಿರುಕುಳ ನೀಡಿದ್ದ ವ್ಯಕ್ತಿಗೆ ಅಧಿಕ ಜಿಲ್ಲಾ ಮತ್ತು ಸೆಷನ್ಸ್, ವಿಶೇಷ ಪೋಕ್ಸೋ ನ್ಯಾಯಾಲಯ 3 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಕೊಳ್ಳೇಗಾಲ ತಾಲೂಕಿನ ಚಿಕ್ಕಮಾಲಾಪುರ ಗ್ರಾಮದ ಮನೋಜ್ ಕುಮಾರ್(22) ಶಿಕ್ಷೆಗೆ ಗುರಿಯಾದ ಅಪರಾಧಿ. ಈತ ಅಪ್ರಾಪ್ತ ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ ಅಪಹರಿಸಿ, ಲೈಂಗಿಕ ಕಿರುಕುಳ ನೀಡಿದ್ದ. ಈ ಬಗ್ಗೆ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎಸ್.ಜೆ. ಕೃಷ್ಣ ಅವರು ಅಪರಾಧಿಗೆ 3 ವರ್ಷ ಜೈಲು ಶಿಕ್ಷೆ, 20 ಸಾವಿರ ರೂ. ದಂಡ, ನೊಂದ ಬಾಲಕಿಗೆ 15 ಸಾವಿರ ರೂ. ಪರಿಹಾರ ನೀಡುವಂತೆ ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರ ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ವಾದಿಸಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ರೈತರ ಹಿತರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಮಾ.6– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಕೊಳ್ಳೇಗಾಲ ತಾಲೂಕು ಗುಂಡಾಲ್ ಜಲಾಶಯದ ಹಳೇ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು.

ಕೊಳ್ಳೇಗಾಲದಿಂದ ಪಾದಯಾತ್ರೆ ಮೂಲಕ ನಗರಕ್ಕೆ ಆಗಮಿಸಿದ ಪ್ರತಿಭಟನಾಕಾರರು ಮೊದಲಿಗೆ ಶ್ರೀಚಾಮರಾಜೇಶ್ವರ ದೇವಸ್ಥಾನದ ಬಳಿ ಸಮಾವೇಶಗೊಂಡರು. ನಂತರ ಅಲ್ಲಿಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಇದೇ ವೇಳೆ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೊಳ್ಳೇಗಾಲ ತಾಲೂಕಿನ ಟಗರಪುರ ಗ್ರಾಮದಿಂದ ಗೋಪಿನಾಥವರೆಗೆ ಹಕ್ಕುಪತ್ರ ನೀಡಿ, ಇ–ಸ್ವತ್ತು ಮಾಡಬೇಕು. ಸರ್ಕಾರಿ ಆಸ್ತಿಗಳಿಗೆ ಮೂಲ ದಾಖಲಾತಿಗಳನ್ನು ಆಧರಿಸಿ ಯಥಾವತ್ತಾಗಿ ಇ–ಸ್ವತ್ತು ಮಾಡಬೇಕು. ಸರ್ಕಾರಿ ಆಸ್ತಿಗಳನ್ನು ಅತಿಕ್ರಮಣ ಮಾಡಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನೀರಾವರಿ ಕೆರೆಗಳಿಗೆ ನಗರಸಭೆಯಿಂದ ಅಕ್ರಮವಾಗಿ ಯುಜಿಡಿ ಪೈಪ್‌ಗಳನ್ನು ಅಳವಡಿಕೆ ಮಾಡಿರುವುದನ್ನು ಕೂಡಲೇ ತೆರವು ಮಾಡಬೇಕು ಎಂದು ಆಗ್ರಹಿಸಿದರು. ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ದಶರಥ, ಕಾರ್ಯದರ್ಶಿ ರಾಮಕೃಷ್ಣ, ರೈತ ಹೋರಾಟ ಸಂಚಾಲಕ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಕೊಳ್ಳೇಗಾಲ ನಗರಸಭೆ ಸದಸ್ಯ ಜಯಮರಿ ಇತರರು ಭಾಗವಹಿಸಿದ್ದರು.

ಡ್ರಗ್ಸ್ ಹಣದ ಹಿಂದೆ ಬಿದ್ದ 'ಡೆಡ್ಲಿ ಲವರ್ಸ್'

ನಾಗೇಂದ್ರ ಅವರ ನಿರ್ಮಾಣ ಹಾಗೂ ನಿರ್ದೇಶನದ 'ಡೆಡ್ಲಿ ಲವರ್ಸ್' ಚಿತ್ರದ ಆಡಿಯೊ ಇತ್ತೀಚೆಗೆ ಬಿಡುಗಡೆಯಾಯಿತು. ಲಹರಿ ವೇಲು ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಖಿಲ್‌ಕುಮಾರ್, ತನುಪ್ರಸಾದ್ ಚಿತ್ರದ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ವೇದಿಕೆಯಲ್ಲಿ ಲಹರಿ ವೇಲು ಮಾತನಾಡುತ್ತ, ನಾನು ಅವಳೇ ನನ್ನ ಹೆಂಡ್ತಿ ಚಿತ್ರದ ನಿರ್ದೇಶಕ ಎಸ್.ಉಮೇಶ್ ಅವರ ಚಿತ್ರದಲ್ಲಿ ಮೊದಲ ಬಾರಿಗೆ ಬಣ್ಣ ಹಚ್ಚಿದ್ದೆ, ಜನ ಸಿನಿಮಾ ನೋಡೋದಿಲ್ಲ ಅನ್ನೋದು ತಪ್ಪು. ಸಾಂಸಾರಿಕ, ಕಾದಂಬರಿ ಆಧಾರಿತ ಚಿತ್ರಗಳನ್ನು ನಾವು ಮರೆತುಹೋಗಿದ್ದೇವೆ. ಹೊಸತನದ ಕಥೆ, ಅದಕ್ಕೆ ತಕ್ಕಂತೆ ನಿರ್ದೇಶಕರು, ನಿರ್ಮಾಪಕರು ಸಿಕ್ಕಿ ಉತ್ತಮ ಚಿತ್ರ ನೀಡಿದರೆ ಖಂಡಿತ ಜನ ಚಿತ್ರಮಂದಿರಕ್ಕೆ ಬರುತ್ತಾರೆ. ನಮ್ಮಲ್ಲೇ ಕೆಲವರು ಉದ್ಯಮವನ್ನು ಹಾಳು ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೈರಸಿ ಮೇಲೆ ನಟ್ಟು, ಬೋಲ್ಟು ಟೈಟ್ ಮಾಡಿದಾಗ ಮಾತ್ರ ಚಿತ್ರರಂಗ ಉಳಿಯುತ್ತದೆ. ಸುಮ್ಮನೆ ಕಲಾವಿದರನ್ನು ದೂಷಿಸುವುದು ಸರಿಯಲ್ಲ ಎಂದು ಡಿಕೆಶಿ ಹೇಳಿಕೆಗೆ ಟಾಂಗ್ ಕೊಟ್ಟರು.

ನಿರ್ದೇಶಕ ನಾಗೇಂದ್ರ ಮಾತನಾಡುತ್ತ, 'ಡೆಡ್ಲಿ ಲವರ್ಸ್' ಚಿತ್ರಕ್ಕೆ ಅದೇ ಟೈಟಲ್ ಯಾಕೆ ಅಂತ ಸಿನಿಮಾ ನೋಡಿದಾಗ ತಿಳಿಯುತ್ತದೆ. ಪ್ರೇಮಿಗಳಿಬ್ಬರು ಭೂಗತಲೋಕಕ್ಕೆ ಎಂಟ್ರಿ ಕೊಟ್ಟು ಖಳನಾಯಕನನ್ನು ವಂಚಿಸಿ ಡ್ರಗ್ಸ್ ಹಣವನ್ನು ಕದಿಯುತ್ತಾರೆ. ಇದು ಹೋಂ ಮಿನಿಸ್ಟರ್‌ಗೆ ತಿಳಿದು ಕೇಸ್ ಪತ್ತೆ ಮಾಡೋ ಜವಾಬ್ದಾರಿಯನ್ನು ಎಸಿಪಿಗೆ ವಹಿಸುತ್ತಾರೆ. ಅಷ್ಟಕ್ಕೂ ಆ ಲವರ್ಸ್‌ಗಳು ಡೆಡ್ಲಿ ಆಗಲು ಕಾರಣವೇನು? ಇವರಿಬ್ಬರ ಹಿನ್ನೆಲೆ ಏನು? ಕೊನೆಗೆ ಆ ಹಣ ಯಾರಿಗೆ ದಕ್ಕುತ್ತದೆ? ಖಳನಾಯಕನ ಸೇಡು ಏನಾಯ್ತು, ಪೊಲೀಸರು ಆತನನ್ನು ಪತ್ತೆ ಹಚ್ಚಾರಾ? ಇಂಥ ಹಲವಾರು ಪ್ರಶ್ನೆಗಳಿಗೆ ಚಿತ್ರದಲ್ಲಿ ಉತ್ತರವಿದೆ. ಮಂಚಿನಬೆಲೆ ಡ್ಯಾಂ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ ಎಂದು ಹೇಳಿದರು.



18 ಚಿತ್ರಗಳನ್ನು ನಿರ್ಮಿಸಿರುವ ಪ್ರಶಾಂತ್ ನಾಯಕ್ ತಾಂಡವ ಮೂವಿ ಮೇಕರ್ಸ್ ಮೂಲಕ ಚಿತ್ರದ ವಿತರಣೆ ಮಾಡುತ್ತಿದ್ದು, 50-60 ಥಿಯೇಟರ್‌ಗಳಲ್ಲಿ ತೆರೆಗೆ ತರುತ್ತಿದ್ದಾರೆ. ವೇದಿಕೆಯಲ್ಲಿ ಭಾ.ಮ.ಹರೀಶ್, ಬಾ.ಮ.ಗಿರೀಶ್, ನಟ ಅಮಿತ್ ಉಪಸ್ಥಿತರಿದ್ದರು. ಪ್ರೇಮಾಗೌಡ, ಭಾಸ್ಕರ್, ವಿನೋದ್, ಎ.ಆರ್.ಲೋಕೇಶ್ ಉಳಿದ ಪಾತ್ರಗಳಲ್ಲಿದ್ದಾರೆ. ಲಯ ಕೋಕಿಲ ಅವರ ಸಂಗೀತ ಸಂಯೋಜನೆ, ಹೆಚ್.ಎನ್.ನರಸಿಂಹಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಇಂದಿನಿಂದ 'ಆಪಲ್ ಕಟ್' ಶವದ ಸುತ್ತ ಕುತೂಹಲದ ಹುತ್ತ

ಹಿರಿಯ ನಿರ್ದೇಶಕ ರಾಜಕಿಶೋರ್ ಅವರ ಪುತ್ರಿ ಸಿಂಧುಗೌಡ ಮೊದಲ ಬಾರಿಗೆ ನಿರ್ದೇಶಿಸಿರುವ ಚಿತ್ರ ಆಪಲ್ ಕಟ್. ಮರ್ಡರ್ ಮಿಸ್ಟರಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಸೂರ್ಯ ಗೌಡ, ಅಶ್ವಿನಿ ಪೋಲೆಪಲ್ಲಿ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಶಿಲ್ಪ ಪ್ರಸನ್ನ ಅವರ ನಿರ್ಮಾಣದ ಈ ಚಿತ್ರದ ಟ್ರೇಲರ್‌ನ್ನು ಗೋಲ್ಡನ್ ಸ್ಟಾರ್ ಗಣೇಶ್ ಅವರು ಬಿಡುಗಡೆ ಮಾಡಿದರು.

ವೇದಿಕೆಯಲ್ಲಿ ಮಾತನಾಡಿದ ಗಣೇಶ್, ನನ್ನ ಚಿತ್ರದ ಹೊರತು ಬೇರೆ ಸಮಾರಂಭಗಳಿಗೆ ನಾನು ಹೋಗುವುದು ಕಡಿಮೆ. ಕನ್ನಡ ಚಿತ್ರರಂಗಕ್ಕೆ ಅನೇಕ ಯಶಸ್ವೀ ಚಿತ್ರಗಳನ್ನು ನೀಡಿದಂಥ ರಾಜಕಿಶೋರ್ ಅವರ ಪುತ್ರಿ ಈ ಚಿತ್ರದ ನಿರ್ದೇಶಕರು, ಅದೇ ಕಾರಣಕ್ಕೆ ನಾನಿಲ್ಲಿಗೆ ಬಂದಿದ್ದೇನೆ. ಟ್ರೇಲರ್ ನೋಡಿದಾಗ ವಿಭಿನ್ನ ಕಂಟೆಂಟ್ ಇದೆ ಅನಿಸುತ್ತದೆ. ಚಿತ್ರ ದೊಡ್ಡ ಮಟ್ಟದ ಯಶಸ್ಸು ಕಾಣಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕಿ ಸಿಂಧುಗೌಡ, ನಮ್ಮ ತಂದೆ ಅವರ ಜತೆ ನಿರ್ದೇಶನದ ಬಗ್ಗೆ ಒಂದಷ್ಟು ಟೆಕ್ನಿಕ್‌ಗಳನ್ನು ತಿಳಿದುಕೊಂಡಿದ್ದೆ. ಧಾರಾವಾಹಿಗಳಲ್ಲಿ ಅಭಿನಯಿಸಿದ್ದ ನಾನು ಮೊದಲ ಬಾರಿಗೆ ನಿರ್ದೇಶಕಿಯಾಗಿದ್ದೇನೆ. ನಾನೇ ಕಥೆ, ಚಿತ್ರಕಥೆ ಬರೆದಿದ್ದೇನೆ. ಆಪಲ್ ಕಟ್, ಐದು ಜನ ಗೆಳೆಯರ ಸುತ್ತ ನಡೆಯುವ ಕಥೆ. ಜೊತೆಗೆ ನಾನು ಕಾಲೇಜಿನಲ್ಲಿ ಮಾನವಶಾಸ್ತ್ರ ಕಲಿತಿದ್ದು, ಚಿತ್ರದಲ್ಲಿ ಆ ಬಗ್ಗೆ ಒಂದಷ್ಟು ಅಂಶ ಸೇರಿಸಿದ್ದೇನೆ. ರಿಯಲ್ ಶವವೊಂದನ್ನು ಕೂಡ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಅದು ಕೂಡ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು. ನಿರ್ಮಾಪಕಿ ಶಿಲ್ಪ ಪ್ರಸನ್ನ ಮಾತನಾಡುತ್ತ, ಸಾನ್ವಿ ಪ್ರೊಡಕ್ಷನ್ಸ್ ಮೂಲಕ ಮೊದಲ ಬಾರಿಗೆ ಈ ಚಿತ್ರವನ್ನು ನಿರ್ಮಿಸಿದ್ದೇವೆ. ಮಾ.7ರಂದು ಚಿತ್ರ ರಿಲೀಸಾಗುತ್ತಿದೆ ಎಂದರು. ನಾಯಕ ಸೂರ್ಯಗೌಡ ಮಾತನಾಡುತ್ತ, ಸತ್ಯ ಎಂಬ ಮಾನವಶಾಸ್ತ್ರದ ಪ್ರೊಫೆಸರ್ ಪಾತ್ರ ಮಾಡಿದ್ದೇನೆ ಎಂದರೆ, ನಾಯಕಿ ಅಶ್ವಿನಿ ಪೋಲೆಪಲ್ಲಿ ಮಾತನಾಡುತ್ತ, ನಾನು ಮೂಲತಃ ಬಾಗೆಪಲ್ಲಿಯ ಹುಡುಗಿ. ಮರ್ಡರ್ ಮಿಸ್ಟರಿ ಇರೋ ಸಿನಿಮಾದಲ್ಲಿ ನಾನು ಸೈಕಾಲಜಿ ಸ್ಟೂಡೆಂಟ್ ಆಗಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ಚಿತ್ರದ ಉಳಿದ ಪಾತ್ರಗಳಲ್ಲಿ ಅಮೃತ, ಮೀನಾಕ್ಷಿ, ಅಪ್ಪಣ್ಣ, ಅಭಿಜಿತ್, ಬಲ ರಾಜವಾಡಿ ಮುಂತಾದವರು ಅಭಿನಯಿಸಿದ್ದಾರೆ. ವೀರ ಸಮರ್ಥ್ ಅವರ ಸಂಗೀತ ಸಂಯೋಜನೆಯ ಆಪಲ್ ಕಟ್ ಚಿತ್ರದ ಹಾಡುಗಳಿಗೆ ಯೋಗರಾಜ್ ಭಟ್, ಸತ್ಯಪ್ರಕಾಶ್ ಸಾಹಿತ್ಯ ಬರೆದಿದ್ದಾರೆ. ರಾಜೇಶ್‌ಗೌಡ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

'ರಾಮನಗರ' ವಿದ್ಯಾವಂತ ಯುವಕ ಪ್ರಗತಿಪರ ರೈತನಾದ!



ರೈತನ ಬದುಕು ಬವಣೆಗಳನ್ನು ಕುರಿತಂತೆ ಹೇಳುವ ಆ ಚಿತ್ರದ ಹೆಸರು 'ರಾಮನಗರ'. ವಿಜಯರಾಜ್ ಆಕ್ಷನ್ ಕಟ್ ಹೇಳಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು, ಪ್ರಭು ಸೂರ್ಯ, ಹಿಮಶ್ರೀ ಹಾಗೂ ಮೇಘನಾ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಮಂಜುನಾಥ್ ಸೂರ್ಯ ಅವರ ನಿರ್ಮಾಣದ ಈ ಚಿತ್ರಕ್ಕೆ ಕೆವಿನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಮನಗರ ಜಿಲ್ಲೆಯ ಬೇವೂರು ಮಠದ ಸ್ವಾಮೀಜಿಗಳು ಚಿತ್ರದ ಆಡಿಯೋ ಬಿಡುಗಡೆ ಮಾಡಿ ಆಶೀರ್ವದಿಸಿದರು.

ನಿರ್ದೇಶಕ ವಿಜಯ್ ರಾಜ್ ಮಾತನಾಡುತ್ತ, ಚಿತ್ರವನ್ನು ಇದೇ ತಿಂಗಳಲ್ಲಿ ರಿಲೀಸ್ ಮಾಡುತ್ತಿದ್ದೇವೆ. 'ರಾಮನಗರ' ಎಂಬ ಊರಲ್ಲಿ ನಡೆಯುವ ಮಾಡರ್ನ್ ರೈತನ ಕಥೆ. ನಾಯಕ ಎಂಜಿನಿಯರಿಂಗ್ ಓದಿದರೂ ಹಳ್ಳಿಯಲ್ಲಿದ್ದುಕೊಂಡು ರೈತನಾಗಿ ವ್ಯವಸಾಯ ಮಾಡಲು ಮುಂದಾಗುತ್ತಾನೆ. ಕೆಲಸ ಅರಸಿ ಎಲ್ಲರಂತೆ ನಗರಕ್ಕೆ ಬರದೆ, ಹಳ್ಳಿಯಲ್ಲೇ ರೈತನಾಗಿದ್ದುಕೊಂಡು ಇತರೆ ವಿದ್ಯಾವಂತ ಯುವಕರಿಗೆ ಮಾದರಿಯಾಗುತ್ತಾನೆ. ತಾನೊಬ್ಬ ಪ್ರಗತಿಪರ ರೈತನಾಗಿ ಬೆಳೆಯಬೇಕೆಂಬ ಪದವೀಧರ ಯುವಕ ಮುಂದೆ ಏನೆಲ್ಲ ಅಡೆತಡೆ ಎದುರಿಸಿ ಸಾಧನೆ ಮಾಡಿದ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಆರಂಭದಲ್ಲಿ ಆ್ಯಕ್ಷನ್ ಜಾಸ್ತಿ ಇರುವುದರಿಂದ ಸೆನ್ಸಾರ್‌ನಿಂದ ಯು/ಎ ಸಿಕ್ಕಿದೆ ಎಂದರು.

ಹಳ್ಳಿಯ ಹುಡುಗರು ವಿದ್ಯಾವಂತರಾಗಿ ಕೃಷಿಕನಾಗುತ್ತೇನೆ ಎಂದರೆ ಏನೆಲ್ಲಾ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ನನ್ನ ಪಾತ್ರದಲ್ಲಿ ಹೇಳಲಾಗಿದೆ ಎಂದ ನಾಯಕ ಪ್ರಭುಸೂರ್ಯ, ಹಳ್ಳಿ ಹುಡುಗ ಓದಿಕೊಂಡು ರೈತನಾಗುತ್ತೇನೆ ಎಂದರೆ ಪೋಷಕರಿಂದ ಸಾಕಷ್ಟು ಮಾತುಗಳನ್ನು ಕೇಳಬೇಕಾಗುತ್ತದೆ. ಇವನು ಇಷ್ಟು ಓದಿದ್ದೂ ದಂಡ ಅನ್ನೋ ಥರ ಮಾತನಾಡುತ್ತಾರೆ. ಕೆಲವರಂತೂ ಇವನು ಓದಿದ್ದಾನೋ? ಅಥವಾ ಸುಳ್ಳು ಹೇಳುತ್ತಿದ್ದಾನೋ? ಅಂತಲೂ ಅನುಮಾನಿಸುತ್ತಾರೆ. ನಾಯಕನಿಗೂ ಹೀಗೇ ಆದಾಗ, ಆತ ಎಲ್ಲಾ ಸಮಸ್ಯೆಗಳನ್ನು ದಾಟಿ ಹೇಗೆ ಆದರ್ಶ ರೈತನಾಗುತ್ತಾನೆ ಎನ್ನುವುದೇ ಚಿತ್ರದ ಕಥಾಹಂದರ, ಇಷ್ಟು ಮಾತ್ರವಲ್ಲದೆ ಈಗಿನ ಪ್ರೇಕ್ಷಕರು ಬಯಸುವ ಮನರಂಜನಾತ್ಮಕ ಅಂಶಗಳೂ ಇವೆ ಎಂದರು. ನಿರ್ಮಾಪಕ ಸಿ.ಕೆ.ಮಂಜುನಾಥ್ ಮಾತನಾಡುತ್ತ, ನಾನು ಮೂಲತಃ ಉದ್ಯಮಿ. ಮೊದಲ ಬಾರಿಗೆ ಚಿತ್ರ ನಿರ್ಮಿಸಿದ್ದೇನೆ. ಪ್ರಭು ನನ್ನ ಸ್ನೇಹಿತ, ಆತ ಹೇಳಿದ ಕಥೆ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾಗಿದ್ದೇನೆ ಎಂದರು.

ಸಿನಿಪದಬಂಧ-567



ಉಮ್ಮತ್ತೂರು ಇಂದುಶೇಖರ್
ಮೊ.9880820462

1		2		3		4			■	■
	■		■		■		■	■	5	■
6			■	7						■
	■	■	■		■		■	■	■	8
	■	9	■	■	■	10		11		
12					13	■	■		■	
	■		■	■		■	14		■	
■	■		■	15			■		■	■
16				■		■	17			18
	■	■	■	■		■	■	■	■	
19			■	20						

ಎಡದಿಂದ ಬಲಕ್ಕೆ

1.ಸಂಚಾರಿ ವಿಜಯ್ ಗಂಡಾಗಿ ಬದಲಾದ ಹೆಣ್ಣು! 9
6.ಗಂಗಾ ಜೊತೆ ಮಿಲನಗೊಂಡವಳು 3
7.ಸುನಿಲ್ ಕನಸಿನ ರಾಣಿಗೆ ಇಟ್ಟ ಬೊಟ್ಟು 6
10.ಅಂಬಿಯು ಬಿಟ್ಟ ಶರ ವಾಪಸ್ಸಾಗಿದೆ 5
12.ಪ್ರಭಾಕರ್ - ವಿನಯ್ ಪ್ರಸಾದ್ ಚಿತ್ರ ಮನ ಕಲಕಿದೆ 6
14.ಯುವರಾಜ ಚಿತ್ರದ ನಾಯಕಿ ಇಲ್ಲಿ ರೇ ಕಳೆದು ಕೊಂಡಿದ್ದಾಳೆ 2
15.ಕಾಡಿಗೆ ಹಚ್ಚಿಕೊಂಡಿರುವ ನಟಿ 3
16.ಮಹಾರಥನೊಂದಿಗೆ ಬಂದವನು 4
17.ಕೆಂಪು ಗುಲಾಬಿಯ ನಟಿ ದೇವ ಕುಸುಮ ಮುಡಿದಿದ್ದಾಳೆ 4
19.ಪೂಜಾಗಾಂಧಿಯ ತಿನಿಸು ಸಿಹಿಯಾಗಿದೆ 3
20." _ _ _ _ _ _ _ ಮೇಲೇರುವ ಬಾರಾ ಬಾರಾ ನಾವಾಗುವ ಚಂದಿರ ತಾರಾ.... 7

ಮೇಲಿನಿಂದ ಕೆಳಕ್ಕೆ

1.ನವನೀತ ಚೋರ ಇದನ್ನು ಬಿಡಲಿಲ್ಲ! 7
2.ಗುರಿ ಚಿತ್ರದ ನಾಯಕಿ 3
3.ವಿಷ್ಣುವಿನ ಹತ್ತು ಅವತಾರಗಳಲ್ಲಿ ನಾಲ್ಕನೇಯದು 4
4.ಅಂಬಿ - ಮಾಧವಿಯ ಶಾಶ್ವತ ಹಣತೆ 5
5.ಡೈಲಾಗ್ ಕಿಂಗ್ ಸಾಯಿಕುಮಾರ್ ಅಭಿನಯದ ಚಿತ್ರಗಳಲ್ಲೊಂದು 2
8.ಶ್ರೀನಾಥ್ ಅಭಿನಯದಲ್ಲಿ ಕರ ಅದೃಶವಾಗಿದೆ 4
9.ರಾಜ್ ಕುಮಾರ್ ಪಂಚಭೂತಗಳೊಂದರಲ್ಲಿ ನಿರ್ಮಿಸಿದ ಶಿಖರ 5
11.ಹೆಚ್.ಎಲ್.ಎನ್.ಸಿಂಹ ನಿರ್ದೇಶನಕ್ಕೆ ಪಂಢರಿಬಾಯಿ ಅಭಿನಯವಿದೆ 5
13.ಅಂಬರೀಶ್ ಅಭಿನಯದ ಮಹಾ ಸ್ವಾಮೀಜಿ 6
16.ವಿಷ್ಣುವರ್ಧನ್ ದ್ವಿಪಾತ್ರಕ್ಕೆ ಡಿ.ರಾಜೇಂದ್ರ ಬಾಬು ನಿರ್ದೇಶಕ 3
18.ಬೆಳ್ಳಿ ಇಲ್ಲಿ ತಲೆಕೆಳಗು 3

ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಸಿನಿ ಪದಬಂಧ 566ರ ಉತ್ತರ

ಅ	ಶ್ವ	ತ್ಥಾ	ಮ	■	ರ	ವಿ	■	ಅ	ಸು	ರ
ವ	■	■	ನ	■	■	ನೋ	■	ರ	■	ಮ್ಯ
ತಾ	ಯಿ	■	ಸು	ರ	ಸುಂ	ದ	ರಾಂ	ಗಿ	■	■
ರ	■	■	ಮ	■	■	■	■	ಣಿ	■	ಈ
ಪು	■	ಕ	ನ	ಕ	ಅಂ	ಬ	ರ	■	■	ಬಂ
ರು	ದ್ರ	■	ಸು	■	■	■	ಣ	■	ರಾ	ಧ
ಷ	■	■	■	■	ಮೂ	■	ರಂ	■	■	ಅ
■	■	ಅ	ನು	ರಾ	ಗ	ಸಂ	ಗ	ಮ	■	ನು
ಸ	■	ದ್ವೈ	■	■	■	■	■	ಹೇ	■	ಬಂ
ಭಾ	ರ	ತ	ಭೂ	ಶಿ	ರ	■	ಅ	ಶ್ವ	ಮೇ	ಧ
ಷ್	■	■	■	■	■	■	■	ರ	■	■

ವಿಜೇತರು: ಜಿ.ಮಂಜುನಾಥ್, ಹಡಜನ ಗ್ರಾಮ, ವರುಣ ಹೋಬಳಿ ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಇಂದು 'ಇಂಟರ್‌ವಲ್' ಬಿಡುಗಡೆ



ಮೂವರು ತುಂಟಾಟದ ಹುಡುಗರು ಹಾಗೂ ಯುವತಿಯರಿಬ್ಬರ ಸುತ್ತ ನಡೆಯುವ ಒಂದಷ್ಟು ಹಾಸ್ಯ ಘಟನೆಗಳನ್ನು ಇಟ್ಟುಕೊಂಡು ನಿರ್ಮಿಸಿರುವ ಚಿತ್ರ "ಇಂಟರ್‌ವಲ್" ಮಾರ್ಚ್ 7ರ ಶುಕ್ರವಾರ ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಅದ್ಧೂರಿಯಾಗಿ ತೆರೆಗೆ ಬರಲಿದೆ. ಈ ಚಿತ್ರದಲ್ಲಿ ಕೆಲಸ ಮಾಡಿರುವ ಎಲ್ಲರೂ ನವ ಪ್ರತಿಭೆಗಳೇ ಆಗಿರುವುದು ವಿಶೇಷ.

ಭರತವರ್ಷ್ ಪಿಚ್ಚರ್ಸ್ ಅಡಿಯಲ್ಲಿ ಸುಖೀ ಹಾಗೂ ಭರತ್ ವರ್ಷ ಸೇರಿ ನಿರ್ಮಿಸಿರುವ ಹಾಗೂ ಭರತ್ ವರ್ಷ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರ ಇದಾಗಿದೆ, ಈಗಿನ ಕಾಲದ ಯುವಕನ ಮನಸ್ಥಿತಿ ಹಾಗೂ ವಿದ್ಯಾರ್ಥಿ ಜೀವನದಲ್ಲಿ ನಡೆಯುವ ಆಟ ತುಂಟಾಟದ ಘಟನೆಗಳನ್ನು ಆಧಾರ ವಾಗಿಟ್ಟುಕೊಂಡು ಹೆಣೆದಂಥ ಯೂಥ್ ಫುಲ್ ಕಥಾಹಂದರ ಈ ಚಿತ್ರದಲ್ಲಿದೆ. ಚಿತ್ರತಂಡ ಮೈಸೂರಿನಲ್ಲಿ ಪ್ರಚಾರ ನಡೆಸಿದಾಗ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಪ್ರತಿಯೊಬ್ಬರ ಜೀವನದಲ್ಲೂ ಒಂದು ಇಂಟರ್‌ವಲ್ ಅನ್ನೋದು ಬಂದೇ ಬರುತ್ತದೆ. ಅದೇ ರೀತಿ ನಾಯಕನ ಜೀವನದಲ್ಲಿ ಆದ ಇಂಟರ್‌ವಲ್ ಆತನ ಲೈಫಲ್ಲಿ ಏನೇನೆಲ್ಲ ತಿರುವುಗಳಿಗೆ ಕಾರಣವಾಯಿತು ಅನ್ನೋದನ್ನು ಇಟ್ಟುಕೊಂಡು ಅದ್ಭುತವಾದ ಕಥೆ, ಚಿತ್ರಕಥೆಯನ್ನು ಸಖೀ ಅವರು ಈ ಚಿತ್ರಕ್ಕಾಗಿ ಹೆಣೆದಿದ್ದಾರೆ.

ಈ ಚಿತ್ರದ ಕೊನೇ ಹತ್ತು ನಿಮಿಷಗಳ ಕ್ಲೈಮ್ಯಾಕ್ಸ್ ದೃಶ್ಯ ವಿಶೇಷವಾಗಿ ಮೂಡಿಬಂದಿದ್ದು, ಪ್ರೇಕ್ಷಕರ ಗಮನ ಸೆಳೆಯುತ್ತದೆ. ಈ ಚಿತ್ರದಲ್ಲಿ ಯುವನಟ ಶಶಿರಾಜ್ ಅವರು ಪ್ರಥಮ ಬಾರಿಗೆ ನಾಯಕನಾಗಿ ತೆರೆಯಮೇಲೆ ಕಾಣಿಸಿಕೊಂಡಿದ್ದಾರೆ. ಪ್ರಜ್ವಲ್‌ಕುಮಾರ್ ಗೌಡ, ಸುಕಿ, ಚರಿತ್ರರಾವ್, ಸಹನ ಆರಾಧ್ಯ, ಸಮೀಕ್ಷ, ದಾನಂ ಮುಂತಾದವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ವಿಕಾಸ್ ವಸಿಷ್ಠ ಅವರ ಸಂಗೀತ ಸಂಯೋಜನೆಯ ಹಾಡುಗಳಿಗೆ ವಿಜಯ್ ಪ್ರಕಾಶ್, ಚಂದನ್ ಶೆಟ್ಟಿ, ಆಲ್ ಓಕೆ ಅಲೋಕ್, ಸುನಿಧಿ ಗಣೇಶ್, ವಾಣಿ ಹರಿಕೃಷ್ಣ ಅವರುಗಳು ದನಿಯಾಗಿದ್ದಾರೆ.

ಇಂಟರ್‌ವಲ್ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಸುಕೇಶ್ ರಚಿಸಿದ್ದಾರೆ. ರಾಜ್‌ಕಾಂತ್ ಅವರ ಛಾಯಾಗ್ರಹಣ, ಚಂದ್ರು ಬಂಡೆ ಅವರ ಸಾಹಸ ನಿರ್ದೇಶನ, ಶಶಿಧರ್ ಅವರ ಸಂಕಲನ ಈ ಚಿತ್ರಕ್ಕಿದೆ. ಬೆಂಗಳೂರು, ಶಿವಮೊಗ್ಗ, ತೀರ್ಥಹಳ್ಳಿಯ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಮೂವರು ಹಳ್ಳಿ ಹುಡುಗರ ತುಂಟತನ ಹಾಗೂ ಪ್ರೇಮಕಥೆಯನ್ನು ಈ ಚಿತ್ರದಲ್ಲಿ ಹಾಸ್ಯಮಯವಾಗಿ ಕಟ್ಟಿಕೊಡಲಾಗಿದೆ.

ತಾಂಡವಪುರದಲ್ಲಿ ಪುನೀತ್ ರಾಜ್‌ಕುಮಾರ್ ಕಪ್ ಕ್ರಿಕೆಟ್ ಪಂದ್ಯಾವಳಿ

ಪುನೀತ್ ಆಶಯ ಮುಂದುವರೆಸಿಕೊಂಡು ಹೋಗುತ್ತೇವೆ

ಅಶ್ವಿನಿ ಪುನೀತ್ ರಾಜ್‌ಕುಮಾರ್ ವಿಶ್ವಾಸ



ಕಾರ್ಯಕ್ರಮದಲ್ಲಿ ಪುನೀತ್ ಪುತ್ಥಳಿಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪುಷ್ಪಾರ್ಚನೆ ಮಾಡಿದರು.

ನಂಜನಗೂಡು, ಮಾ.6– ಪುನೀತ್ ರಾಜ್‌ಕುಮಾರ್ ಕ್ರೀಡಾಭಿಮಾನಿಯಾಗಿದ್ದರು. ಯುವಕರಿಗೆ ಸ್ಫೂರ್ತಿಯಾಗಿ, ಸಾಮಾಜಿಕ ಕಳಕಳಿ ಹೊಂದಿದ್ದ ಅವರ ಆಶಯಗಳನ್ನು ಅವರ ಕುಟುಂಬ ಮುಂದುವರೆಸಿಕೊಂಡು ಹೋಗುತ್ತದೆ ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ತಿಳಿಸಿದರು.

ತಾಲೂಕಿನ ತಾಂಡವಪುರದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಗುರುವಾರ ಪುನೀತ್ ರಾಜ್‌ಕುಮಾರ್ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ದೊಡ್ಮನೆ ಕುಟುಂಬ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಬೇಕೆಂಬ ಹಂಬಲದೊಂದಿಗೆ ಶೈಕ್ಷಣಿಕ ಸಂಸ್ಥೆ ತೆರೆದಿದೆ. ಪುನೀತ್ ರಾಜ್‌ಕುಮಾರ್ ಆರಂಭಿಸಿದ ಪಿಆರ್‌ಕೆ ಪ್ರೊಡಕ್ಷನ್ ಅಡಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಉತ್ತಮ ಕಥೆಯೊಂದಿಗೆ ಯುವಕರಿಗೆ ಸ್ಫೂರ್ತಿ ತುಂಬುವಂತಹ ಚಿತ್ರಗಳನ್ನು ತಯಾರಿಸಲಾಗುವುದು. ಯುವ ರಾಜ್‌ಕುಮಾರ್ ನಾಯಕತ್ವದಲ್ಲಿ ಎಕ್ಕ ಚಿತ್ರವನ್ನು ನಿರ್ಮಿಸಲಾಗುತ್ತಿದೆ. ರಾಜ್ಯದ ಜನರ ಅಭಿಲಾಷೆಗೆ ತಕ್ಕಂತೆ ಪುನೀತ್ ಕುಟುಂಬ ಸಾಮಾಜಿಕ ಸೇವೆ ಮುಂದುವರೆಸುತ್ತದೆ ಎಂದರು.

ಎಂಐಟಿ ಕಾಲೇಜಿನ ಉಪಾಧ್ಯಕ್ಷ ಡಾ.ಜಿ.ಹೇಮಂತ್‌ಕುಮಾರ್ ಮಾತನಾಡಿ, ಪುನೀತ್ ರಾಜಕುಮಾರ್ ಅವರ ಆದರ್ಶ ಕ್ರೀಡಾ ಸ್ಫೂರ್ತಿಯನ್ನು ಯುವಕರಲ್ಲಿ ಜಾಗೃತಿಗೊಳಿಸುವ ಸಲುವಾಗಿ ಕಳೆದ 4 ವರ್ಷಗಳಿಂದ ಸಂಸ್ಥೆ ಪುನೀತ್ ರಾಜ್‌ಕುಮಾರ್ ಕಪ್ ಕ್ರಿಕೆಟ್ ಪಂದ್ಯ ಆಯೋಜಿಸುತ್ತಿದೆ. ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಬಿಇ ಪದವಿ ಕೋರ್ಸ್‌ಗಳಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಲಾಗುವುದು. ಮುಂದಿನ ಘಟಿಕೋತ್ಸವದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಚಿನ್ನದ ಪದಕ ನೀಡಲಾಗುವುದು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣಗೌಡ ಮಾತನಾಡಿ, ನಾನು ಕೂಡ ಪುನೀತ್‌ರಾಜ್‌ಕುಮಾರ್ ಅಭಿಮಾನಿ. ಪುಟ್ಟ ಮಗುವಿನಿಂದ 70 ವರ್ಷದ ವಯೋವೃದ್ಧರು ಇಷ್ಟ ಪಡುವ ಉತ್ತಮ ನಟನಿದ್ದರೆ ಅದು ಪುನೀತ್ ರಾಜ್‌ಕುಮಾರ್. ದೊಡ್ಮನೆ ಸೊಸೆಯಾಗಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಆ ಮನೆಗೆ ಗೌರವ ತಂದು ಕೊಟ್ಟಿದ್ದಾರೆ. ಪುನೀತ್ ರಾಜ್‌ಕುಮಾರ್ ಎಲ್ಲಾ ಕಾಲಕ್ಕೂ ಯುವಕರಿಗೆ ಸ್ಫೂರ್ತಿಯಾಗಿ ಜನ ಮನದಲ್ಲಿ ಚಿರಸ್ಥಾಯಿಯಾಗಿರುತ್ತಾರೆ ಎಂದರು. ಕಾರ್ಯಕ್ರಮದಲ್ಲಿ ರಿಷಿ ಫ್ಯಾಬ್ರಿಕೇಶನ್‌ನ ಜೋಷಿ ಬಸಿಲ್, ನುಜುಂಡೇಶ್ವರ, ಪ್ರೊಹೆಚ್.ಕೆ. ಚೇತನ್, ಪ್ರೊ. ಡಾ. ರಂಜಿತ್, ಪ್ರೊ.ಮೊಹಮ್ಮದ್ ಸಲಾಮತ್, ಪ್ರೊ.ಬಿ.ಸಿ.ನಾಗೇಂದ್ರ ಕುಮಾರ್, ನವೀನ್, ಮನು, ಎಸ್.ಗೌಡ, ಗಣೇಶ್ ಉಪಸ್ಥಿತರಿದ್ದರು.

ನಾಳೆ ರಾಷ್ಟ್ರೀಯ ಲೋಕ ಅದಾಲತ್

ಮೈಸೂರು: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ನವದೆಹಲಿ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಮಾ.8ರಂದು ಮೈಸೂರು ಜಿಲ್ಲೆಯನ್ನೊಳಗೊಂಡಂತೆ ರಾಜ್ಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಪ್ರಕರಣಗಳನ್ನು ಮತ್ತು ವಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಲೋಕ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತಿ.ನರಸೀಪುರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರ, ಮಾ.6– ಪಟ್ಟಣದ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆಯಾಗಿರುವ 5 ಕೋಟಿ ರೂ. ಅನುದಾನ ಬಳಸಿಕೊಂಡು ಪಟ್ಟಣದಲ್ಲಿ ಗುಣಮಟ್ಟದ ರಸ್ತೆ ನಿರ್ಮಿಸುವಂತೆ ಸಂಸದ ಸುನೀಲ್ ಬೋಸ್ ಪುರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಬಹು ನಿರೀಕ್ಷಿತ ಎಣ್ಣೆ ಮಿಲ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದ ಎಣ್ಣೆ ಮಿಲ್ ರಸ್ತೆ ಅಭಿವೃದ್ಧಿ ಕಾಮಗಾರಿ ಈಗಾಗಲೇ ಆಗಬೇಕಿತ್ತು. ಆದರೆ ಅನಿವಾರ್ಯ ಕಾರಣಕ್ಕೆ ಕಾಮಗಾರಿಗೆ ಚಾಲನೆ ದೊರಕಿರಲಿಲ್ಲ. ಈಗ ಕ್ಷೇತ್ರದ ಶಾಸಕರು, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಟ್ಟಣದ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 5 ಕೋಟಿ ಅನುದಾನ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಕಾಮಗಾರಿ ಆರಂಭಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಅಧಿಕಾರಿಗಳಿಗೆ ಆದೇಶಿಸಿದರು.

ಲೋಕಸಭಾ ಚುನಾವಣೆ ಸಂದರ್ಭ ಇಲ್ಲಿನ ಜನತೆ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದ್ದರು. ರಸ್ತೆ ತೀವ್ರ ಹದಗೆಟ್ಟಿರುವುದರಿಂದ ಅಲ್ಲದೇ ನಂಜನಗೂಡು, ಕೊಳ್ಳೇಗಾಲಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿರುವುದರಿಂದ ವಾಹನಗಳ ಓಡಾಟದಿಂದ ಧೂಳು ಹಾಗೂ ಹೊಗೆ ಮನೆ ಒಳಗೆ ನುಗ್ಗಿ ಬಹುತೇಕರಲ್ಲಿ ಅನಾರೋಗ್ಯ ಸಮಸ್ಯೆ ಕಾಡುತ್ತಿದೆ ಎಂದು ತಮ್ಮ ಅಳಲು ತೋಡಿಕೊಂಡಿದ್ದರು. ಹಾಗಾಗಿ ಈಗ ರಸ್ತೆ ಕಾಮಗಾರಿಗೆ ಕಾಲ ಕೂಡಿ ಬಂದಿದ್ದು, ಎಣ್ಣೆ ಮಿಲ್ ರಸ್ತೆ 95 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳ್ಳಲಿದ್ದು, ಗುಣಮಟ್ಟದ ರಸ್ತೆ ನಿರ್ಮಾಣ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ವೇಳೆ ಬಡಾವಣೆ ನಿವಾಸಿಗಳು ಯುಜಿಡಿ ಸಂಪರ್ಕ ಕಲ್ಪಿಸಿದ ನಂತರ ಡಾಂಬರೀಕರಣ ಮಾಡುವಂತೆ ಮಾಡಿದ ಮನವಿಗೆ ಸ್ಪಂದಿಸಿದ ಸುನೀಲ್ ಬೋಸ್ ಮೊದಲು ಪ್ರತಿ ಮನೆಗೆ ಯುಜಿಡಿ ಮುಖ್ಯ ಪೈಪ್‌ನಿಂದ ಸಂಪರ್ಕ ಕಲ್ಪಿಸದ ನಂತರವೇ ಕಾಮಗಾರಿ ಆರಂಭಿಸಿ, ತ್ವರಿತವಾಗಿ ಕೆಲಸ ಮುಗಿಸಿ ಎಂದು ತಾಕೀತು ಮಾಡಿದರು.

ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಮಾತನಾಡಿ, ಎಣ್ಣೆ ಮಿಲ್ ರಸ್ತೆ ಕಾಮಗಾರಿ ಆರಂಭಕ್ಕೂ ಮೊದಲು ಮನೆ ಮನೆಗೆ ಯುಜಿಡಿ ಸಂಪರ್ಕ ಕಲ್ಪಿಸಿ ನಂತರ ಒಂದು ತಿಂಗಳೊಳಗೆ ರಸ್ತೆ ಡಾಂಬರೀಕರಣ ಮಾಡಿಸುವ ಭರವಸೆ ನೀಡಿದರು.

ಈ ವೇಳೆ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಸದಸ್ಯರಾದ ಬಾದಾಮಿ ಮಂಜು, ನಾಗರತ್ನ, ಎಲ್.ಮಂಜುನಾಥ್, ಸಿ.ಪ್ರಕಾಶ್, ಮಾಜಿ ಸದಸ್ಯ ರಾಘವೇಂದ್ರ, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಇಂಜಿನಿಯರ್ ನಾಗರಾಜು, ಆರೋಗ್ಯಾಧಿಕಾರಿ ಮಧು, ಮಹದೇವಪ್ಪ ಅಭಿಮಾನಿ ಬಳಗ ಜಿಲ್ಲಾಧ್ಯಕ್ಷ ಕೆ.ಎಂ.ಮಧುಕುಮಾರ್, ಲಕ್ಷ್ಮಿ ನಾರಾಯಣ, ಮುಖಂಡರಾದ ಲತಾ ಜಗದೀಶ್, ಮಾದೇಶ್, ಗುರುಮಲ್ಲ, ಗ್ಯಾಸ್ ಉಮೇಶ್, ಶಾಮಿಯನ ನಾಗೇಶ, ಕೆಎಸ್‌ಆರ್‌ಟಿಸಿ ರಾಜಣ್ಣ, ಸೋಮು ದಾದಾ, ಆಲಗೂಡು ರಾಜು ಸೇರಿದಂತೆ ಮತ್ತಿತರಿದ್ದರು.

ಇಂಜಿನಿಯರ್ ವಿರುದ್ಧ ಸಂಸದರು ಗರಂ

ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರ ನೀಡುವಂತೆ ಸಂಸದ ಸುನೀಲ್ ಬೋಸ್ ಇಂಜಿನಿಯರ್ ನಾಗರಾಜು ಅವರನ್ನು ಕೇಳಿದ ವೇಳೆ ಸಂಬಂಧಿಸಿದ ದಾಖಲೆ ತರದೇ ಪರದಾಡಿದ ಅವರು ಮೊಬೈಲ್‌ನಲ್ಲಿ ಅಭಿವೃದ್ಧಿ ಕಾಮಗಾರಿಯ ಲಿಸ್ಟ್ ತೋರಿಸಲು ಮುಂದಾಗಿದ್ದನ್ನು ಗಮನಿಸಿದ ತಾಪಂ ಮಾಜಿ ಅಧ್ಯಕ್ಷ ಬಿ.ಮರಯ್ಯ ಗರಂ ಆದರು. ಜವಾಬ್ದಾರಿಯುತ ಪುರಸಭೆ ಇಂಜಿನಿಯರ್ ಆದ ನೀವು ಸಂಸದರು ಕೇಳಿದ ವೇಳೆ ಮಾಡಬೇಕಾದ ಕೆಲಸದ ಬಗ್ಗೆ ಎಸ್ಟಿಮೇಟ್ ಕಾಪಿ ತೋರಿಸದೇ ಮೊಬೈಲ್ ತೋರಿಸುತ್ತಿರುವುದು ನಿಮ್ಮ ಬೇಜವಾಬ್ದಾರಿ ತೋರಿಸುತ್ತದೆ ಎಂದು ವಾಗ್ದಾಳಿ ನಡೆಸಿದರು. ಸಂಸದ ಸುನೀಲ್ ಬೋಸ್ ಸಹ ಇಂಜಿನಿಯರ್ ನಾಗರಾಜು ಬೇಜವಾಬ್ದಾರಿ ತನಕ್ಕೆ ಬೇಸರ ವ್ಯಕ್ತಪಡಿಸಿ, ಸಂಸದರು ಬರ್ತಾರೆ ಎಂದರೆ ಎಲ್ಲಾ ಕಾಮಗಾರಿ ಎಸ್ಟಿಮೇಟ್ ಪ್ರತಿ ಹಿಡಿದು ಕೇಳಿದ್ದಕ್ಕೆ ಉತ್ತರಿಸಬೇಕು. ಅದು ಬಿಟ್ಟು ಮೊಬೈಲ್‌ನಲ್ಲಿ ತೋರಿಸಿದರೆ ಏನರ್ಥ ಇದೇನಾ ನಿಮ್ಮ ಸರ್ಕಾರಿ ಕೆಲಸದ ಕಾರ್ಯವೈಖರಿ ಎಂದು ಗರಂ ಆದರು. ಇದರಿಂದ ಪೇಚಿಗೆ ಸಿಲುಕಿದ ಇಂಜಿನಿಯರ್ ನಾಗರಾಜು ಎಸ್ಟಿಮೇಟ್ ಕಾಪಿ ತರುವುದಾಗಿ ಹೇಳಿ ಅಲ್ಲಿಂದ ಕಾಲ್ಕಿತ್ತರು.

ಮೆದುಳಿನ ರಕ್ತಸ್ರಾವ: ಆಶ್ರಮ ಶಾಲೆ ವಿದ್ಯಾರ್ಥಿ ಸಾವು



ಹುಣಸೂರು, ಮಾ.6– ಗಿರಿಜನ ಆಶ್ರಮ ಶಾಲೆ ವಿದ್ಯಾರ್ಥಿಯೋರ್ವ ಮೆದುಳಿನ (ಬ್ರೈನ್ ಹ್ಯಾಮರೇಜ್) ರಕ್ತಸ್ರಾವದಿಂದ ಸಾವನ್ನಪ್ಪಿರುವ ಘಟನೆ ತಾಲೂಕಿನ ನಾಗಪುರ ಗಿರಿಜನ ಆಶ್ರಮ ಶಾಲೆಯಲ್ಲಿ ನಡೆದಿದೆ.

ತಾಲೂಕಿನ ಹನಗೋಡು ಸಮೀಪದ ಕಲ್ಲೂರಪ್ಪನ ಬೆಟ್ಟ ಬಳಿಯ ಶಂಕರಪುರ ಹಾಡಿ ಡೋಂಗ್ರಿ ಗೆರಾಸಿಯಾ ಸಮುದಾಯದ ಜಗನ್ನಾಥ್–ಲಕ್ಷ್ಮಮ್ಮ ದಂಪತಿ ಪುತ್ರ, ನಾಗರಹೊಳೆ ರಸ್ತೆಯ ನಾಗಾಪುರ ಗಿರಿಜನ ಆಶ್ರಮ ಶಾಲೆ 8ನೇ ತರಗತಿ ವಿದ್ಯಾರ್ಥಿ ಸೂರ್ಯ (14) ಸಾವನ್ನಪ್ಪಿದವರು.

ವಿವರ: ಶಾಲಾ ಆವರಣದಲ್ಲಿ ಮಾ.4ರ ಮಂಗಳವಾರ ಮಕ್ಕಳಿಗೆ ಕ್ಷೌರ ನಡೆಸಲಾಗುತ್ತಿತ್ತು. ಮೃತ ವಿದ್ಯಾರ್ಥಿ ಸೂರ್ಯ ಸಹ ಕಟ್ಟಿಂಗ್‌ಗಾಗಿ ತೆರಳಿದ್ದ ವೇಳೆ ತಲೆ ಸುತ್ತು ಬಂದು ವಾಂತಿಯಾಗಿದೆ. ಸ್ಥಳದಲ್ಲಿದ್ದ ಶಿಕ್ಷಕರು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ಮತ್ತೆ ಕೆಲ ಹೊತ್ತಿನ ಬಳಿಕ ಮತ್ತೆ ವಾಂತಿಯಾಗಿದ್ದರಿಂದ ಆಶ್ರಮ ಶಾಲೆ ಮುಖ್ಯಶಿಕ್ಷಕ ಲಕ್ಷ್ಮಣ್ ತಕ್ಷಣ ವಿದ್ಯಾರ್ಥಿಯನ್ನು ಚಿಕಿತ್ಸೆಗಾಗಿ ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರು. ವೈದ್ಯರ ಸಲಹೆಯಂತೆ ಹುಣಸೂರಿನ ಕಾವೇರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದ್ದು, ಹೆಚ್ಚಿನ ಚಿಕಿತ್ಸೆ ಕೊಡಿಸುವಂತೆ ವೈದ್ಯರ ಸಲಹೆ ಮೇರೆಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮಧ್ಯರಾತ್ರಿ ಸಾವನ್ನಪ್ಪಿದ್ದಾನೆ. ಈತ ಬ್ರೈನ್ ಹ್ಯಾಮರೇಜ್ ನಿಂದ ಸಾವನ್ನಪ್ಪಿರುವುದಾಗಿ ವೈದ್ಯರು ಮಾಹಿತಿ ನೀಡಿದ್ದಾರೆಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗಂಗಾಧರ್ ತಿಳಿಸಿದ್ದಾರೆ.

ಸೂರ್ಯ ಒಂದನೇ ತರಗತಿ ಯಿಂದ ಇದೇ ಆಶ್ರಮ ಶಾಲೆಯಲ್ಲಿ ಓದುತ್ತಿದ್ದಾನೆ ಎಲ್ಲರೊಂದಿಗೆ ಲವಲವಿಕೆಯಿಂದ ಇರುತ್ತಿದ್ದ. ಈತನ ಸಹೋದರ ಮಂಜುನಾಥ್ ಸಹ ಇದೇ ಶಾಲೆಯಲ್ಲಿ ಓದುತ್ತಿದ್ದಾನೆ. ಸಹಪಾಠಿಗಳು ಸೂರ್ಯನ ಸಾವಿಗೆ ಕಂಬನಿ ಮಿಡಿದಿದ್ದಾರೆ. ಘಟನೆ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆ: ನದಿಗೆ ಹಾರಿ ರೈತ ಆತ್ಮಹತ್ಯೆ



ಹುಣಸೂರು, ಮಾ.6– ಸಾಲಬಾಧೆ ತಾಳಲಾರದೇ ರೈತರೊಬ್ಬರು ಲಕ್ಷ್ಮಣ ತೀರ್ಥ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಲೂಕಿನ ಕಿರಿಜಾಜಿ ಗ್ರಾಮದ ನಿವಾಸಿ ಗಿರೀಶ್(54) ಆತ್ಮಹತ್ಯೆ ಮಾಡಿಕೊಂಡವರು. ಈತ ವ್ಯವಸಾಯಕ್ಕಾಗಿ ಎಸ್‌ಬಿಐನಲ್ಲಿ 3 ಲಕ್ಷ ಹಾಗೂ ಖಾಸಗಿಯವರಿಂದ 10 ಲಕ್ಷ ಸಾಲ ಮಾಡಿದ್ದರು. ಆದರೆ ಸಾಲ ತೀರಿಸಲು ಸಾಧ್ಯವಾಗದೇ ಗುರುವಾರ ಮಧ್ಯಾಹ್ನ ಲಕ್ಷ್ಮಣ ತೀರ್ಥ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳಿಗೆ ಶಾಲಾ ವಾರ್ಷಿಕೋತ್ಸವ ಉತ್ತಮ ವೇದಿಕೆ



ಕಾರ್ಯಕ್ರಮದಲ್ಲಿ ಬಿಇಓ ಶಿವಮೂರ್ತಿ, ಪ್ರೊ.ಸೋಮಣ್ಣ, ರೇಣುಕಾ, ನಾಗರಾಜುರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಮಾ.6– ವಿದ್ಯಾರ್ಥಿಗಳ ಸಂಕುಚಿತ ಮನೋಭಾವ ಹೋಗಲಾಡಿಸಲು ಶಾಲಾ ವಾರ್ಷಿಕೋತ್ಸವ ಉತ್ತಮ ವೇದಿಕೆ ಎಂದು ಮೈಸೂರು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ ತಿಳಿಸಿದರು.

ಪಟ್ಟಣದ ಮಹರ್ಷಿ ವಾಲ್ಮೀಕಿ ಶಾಲಾವರಣದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಇಂಗ್ಲಿಷ್ ಮಾಧ್ಯಮ ಶಾಲೆಯ 16ನೇ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ವಿದ್ಯಾರ್ಥಿಗಳು ಕೇವಲ ಮೊಬೈಲ್, ಟಿವಿ ವೀಕ್ಷಿಸಲು ಸಮಯ ವ್ಯರ್ಥ ಮಾಡುತ್ತಾರೆ. ಮತ್ತೆ ಕೆಲವರು ಯಾರೊಂದಿಗೂ ಬೆರೆಯದೆ ಒಬ್ಬಂಟಿಯಾಗಿರಲು ಬಯಸುತ್ತಾರೆ. ಆದರೆ ಓದು–ಬರಹದ ಜೊತೆಗೆ ಉತ್ತಮವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು.

ಬಿಇಓ ಎಸ್.ಎಲ್.ಶಿವಮೂರ್ತಿ ಮಾತನಾಡಿ, ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಓದಿ ಮುಂದೆ ಬರಬೇಕು. ಸಾಧನೆ ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿ ಪ್ರೇರಣೆ ನೀಡಬೇಕು. ವಿದ್ಯೆ ಮನುಷ್ಯನನ್ನು ಬಾಳಿ ಬೆಳಸುತ್ತದೆ. ಎತ್ತರಕ್ಕೆ ಬೆಳದ ವ್ಯಕ್ತಿ ಸಮಾಜದ ಪ್ರಗತಿ, ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ಆಲಗೂಡು ನಾಗರಾಜು ಮಾತನಾಡಿದರು. ಈ ವೇಳೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಮನರಂಜಿಸಿದವು. ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯೆ ರೇಣುಕಾ ನಾಗರಾಜು, ಶಿಕ್ಷಣ ಸಂಸ್ಥೆ ಗೌರವಾಧ್ಯಕ್ಷ ಡಾ.ಮಹದೇವಯ್ಯ, ಖಜಾಂಚಿ ಪಿ.ಶಶಿಧರ್, ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಮೇಗಡಹಳ್ಳಿ ಆರ್.ರಾಜು, ಶಾಲಾ ಪೋಷಕರಾದ ಶಂಕರ್, ಟ್ರಸ್ಟಿಗಳಾದ ಮಹಾಲಕ್ಷ್ಮಿ, ಗೋಪಾಲ್, ಕೆ.ವಿಜಯಲಕ್ಷ್ಮಿ, ಕೋಮಲ ಉದಯ ರವಿ, ಎಂ.ಎನ್.ನಂಜುಂಡಯ್ಯ, ಟಿ.ಆರ್. ಸುಧಾಮಣಿ, ಪದ್ಮಾವತಿ, ಮಂಜುಳಾ, ಸೋಮಣ್ಣ, ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಮಹದೇವಣ್ಣ, ಮರಡೀಪುರ ನಾಗರಾಜು, ಭಾಗ್ಯ ಮತ್ತಿತರರಿದ್ದರು.

ದಲಿತರ ಮೇಲೆ ದೌರ್ಜನ್ಯ ಖಂಡಿಸಿ ಪಾದಯಾತ್ರೆ



ನಿಲವಾಗಿಲು ಗ್ರಾಮದಿಂದ ಪಾದಯಾತ್ರೆ ನಡೆಸಲಾಯಿತು.

ಹುಣಸೂರು, ಮಾ.6– ನಿಲವಾಗಿಲು ಗ್ರಾಮದ ದಲಿತರ ಮೇಲೆ ದೌರ್ಜನ್ಯ ನಡೆಸಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ನೊಂದವರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ಸಿಪಿಎಂ ದಲಿತ ಹಕ್ಕುಗಳ ಸಮಿತಿ ಮತ್ತು ದಸಂಸ ವತಿಯಿಂದ ನಿಲವಾಗಿಲು ಗ್ರಾಮದಿಂದ ಹುಣಸೂರಿನ ಉಪವಿಭಾಗಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಲಾಯಿತು.

ಗ್ರಾಮದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಪಾದಯಾತ್ರೆ ಆರಂಭಿಸಿ ತಾಲೂಕು ಆಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಹಿರಿಯ ಮುಖಂಡ ಆನಂದ ಸ್ವಾಮಿ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದರೆ ನಮ್ಮ ಆಡಳಿತ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ದಲಿತರು ಒಗ್ಗಟ್ಟಾದರೆ ಇಂತಹ ಪ್ರಕರಣಗಳನ್ನು ತಡೆಯಲು ಸಾಧ್ಯ ಎಂದರು.

ದಲಿತ ಹಕ್ಕುಗಳ ಸಮಿತಿ ರಾಜ್ಯ ಕಾರ್ಯದರ್ಶಿ ಎನ್.ರಾಜಣ್ಣ ಮಾತನಾಡಿ, ಹಿರಿಯ ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ ಸೂಕ್ತ ರಕ್ಷಣೆ ನೀಡಬೇಕು. ದೌರ್ಜನ್ಯಕ್ಕೊಳಗಾದವರ ಮೇಲೆ ಸುಳ್ಳು ದೂರು ನೀಡಿರುವುದನ್ನು ವಜಾಗೊಳಿಸಬೇಕು ನಮ್ಮ ಒತ್ತಾಯಿಸಿದರು.

ಸಿಪಿಎಂ ಜಿಲ್ಲಾ ಮುಖಂಡ ಕೆ.ಬಸವರಾಜು, ನಾರಾಯಣಪ್ಪ, ವಕೀಲ ಪುಟ್ಟರಾಜು, ರಾಮಕೃಷ್ಣ, ಕರ್ನಾಟಕ ಪ್ರಾಂತ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಎಂ.ಸಿ. ಚಂದ್ರಶೇಖರ್ ಮಾತನಾಡಿ, ದಲಿತರ ಮೇಲಿನ ಹಲ್ಲೆ ತಡೆಯಲು ವಿಫಲವಾದರೆ ತಾಲೂಕು ಆಡಳಿತದ ವಿರುದ್ಧ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಿಪಿಎಂ ತಾಲೂಕು ಕಾರ್ಯದರ್ಶಿ ವೆಂಕಟೇಶ್, ಮುಖಂಡರಾದ ಶಿವರಾಮು, ಯಜಮಾನ ಲೋಕೇಶ್, ಮುಖಂಡರಾದ ಸಂತೋಷ್, ಕಿರಣ, ಪರಶ್‌ರಾಮ್, ರಾಮ ಸ್ವಾಮಿ, ಶಂಕರ್, ಸಿದ್ದರಾಜು, ರಾಜಣ್ಣ, ಮಹದೇವು, ಕೆಂಪರಾಮಯ್ಯ, ಚಿಕ್ಕಣ್ಣೇಗೌಡ, ಸಿದ್ದಯ್ಯ, ಮಹದೇವು, ಸಿದ್ದರಾಜು ಇತರರಿದ್ದರು.

ಸರಗೂರಲ್ಲಿ ವಿಶ್ವ ವಿಕಲಚೇತನ ದಿನಾಚರಣೆ



ಕಾರ್ಯಕ್ರಮದಲ್ಲಿ ವಿಕಲಚೇತನರನ್ನು ಸನ್ಮಾನಿಸಲಾಯಿತು

ಸರಗೂರು, ಮಾ.6– ವಿಕಲಚೇತನರಿಗೆ ಭಗವಂತ ವಿಶೇಷ ಶಕ್ತಿ ಕೊಟ್ಟಿದ್ದಾನೆ ಎಂದು ಪಪಂ ಅಧ್ಯಕ್ಷೆ ರಾಧಿಕಾ ತಿಳಿಸಿದರು.

ಪಟ್ಟಣದ ಸ್ವಯಂ ಸೇವಾ ಸಂಸ್ಥೆಗಳು, ಕ್ಷೇಮಾಭಿವೃದ್ಧಿ ಸಂಘಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ವಿಕಲಚೇತನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಗವಂತ ಎಲ್ಲರಿಗೂ ಒಂದೊಂದು ಶಕ್ತಿ ಕೊಟ್ಟಿರುತ್ತಾನೆ. ಅದೇ ರೀತಿ ವಿಕಲಚೇತನರಿಗೂ ವಿಶೇಷ ಶಕ್ತಿ ಕೊಟ್ಟಿರುತ್ತಾನೆ. ಹೀಗಾಗಿ ಎಲ್ಲಾ ಕ್ಷೇತ್ರದಲ್ಲೂ ವಿಕಲಚೇತನರು ಸಾಧನೆ ಮಾಡಲು ಗಮನ ಹರಿಸುತ್ತಾರೆ ಎಂದರು.

ಮುಖ್ಯಾಧಿಕಾರಿ ಸಂತೋಷ್ ಕುಮಾರ್ ಮಾತನಾಡಿ, ಹುಟ್ಟಿನಿಂದಲೇ ಅಂಗವೈಕಲ್ಯ ಹೊಂದಿದ ವ್ಯಕ್ತಿಗಳಲ್ಲಿ ಅಗೋಚರವಾದ ಶಕ್ತಿ ಇದ್ದು, ಅದರಿಂದಾಗಿ ಪರರ ಸಹಾಯವಿಲ್ಲದೇ ತಮ್ಮ ಕಾರ್ಯಗಳನ್ನು ತಾವೇ ನಿರ್ವಹಿಸಿಕೊಂಡು ಸ್ವಾಭಿಮಾನಿಗಳಾಗಿದ್ದಾರೆ. ಕೆಲವೊಂದು ಕಾರಣಗಳಿಂದ ಅಂಗವೈಕಲ್ಯದಿಂದ ಹುಟ್ಟಿದ್ದರೂ ಸಹ ದೇವರು ಅವರಿಗೆ ವಿಶೇಷ ಶಕ್ತಿ ಕೊಟ್ಟಿರುತ್ತಾನೆ ಎಂದರು.

ಪಪಂ ಸದಸ್ಯ ಶ್ರೀನಿವಾಸ್, ವಿಕಲಚೇತನರ ತಾಲೂಕು ಸಂಯೋಜಕ ದೇವರಾಜು ಮಾತನಾಡಿದರು. ಇದೇ ವೇಳೆ ವಿಕಲಚೇತನರಿಗೆ ವೀಲ್‌ಚೇರ್ ಹಾಗೂ ಪೋಷಣ ಭತ್ಯೆ ಆಧಾರ್ ಯೋಜನೆ ಸಹ ನೀಡಲಾಯಿತು. ಕಾರ್ಯಕ್ರಮದಲ್ಲಿ ಪಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳಸ್ವಾಮಿ, ಸಣ್ಣತಾಯಮ್ಮ, ಮುಖಂಡರಾದ ಸ್ವಾಮಿ, ರಾಮು, ಶ್ರೀನಾಥ್, ನಗರ ಪುನರ್ ವಸತಿ ಕಾರ್ಯಕರ್ತೆ ರಂಜಿತ, ಸಮುದಾಯ ಸಂಪನ್ಮೂಲ ವ್ಯಕ್ತಿ ಮೇಘನಾ, ಸಮುದಾಯ ಸಂಘಟನಾಧಿಕಾರಿ, ನಳಿನಿ, ಪಳನಿಸ್ವಾಮಿ ಇತರರಿದ್ದರು.

ಗೋಪಾಲಪುರ ನಿವಾಸಿಗಳ ಸಮಸ್ಯೆ ಆಲಿಸಿದ ಪುರಸಭೆ ಸದಸ್ಯರು, ಅಧಿಕಾರಿಗಳ ತಂಡ: ಪರಿಹಾರದ ಭರವಸೆ



ಗೋಪಾಲಪುರ ನಿವಾಸಿಗಳು ಗುಡಿಸಲು ನಿರ್ಮಿಸಿರುವ ಸ್ಥಳಕ್ಕೆ ಪುರಸಭೆ ಸದಸ್ಯರು, ಮುಖ್ಯಾಧಿಕಾರಿ ಭೇಟಿ ನೀಡಿ ಸಮಸ್ಯೆ ಆಲಿಸಿದರು.

> ನಿವೇಶನಕ್ಕೆ ಸಂಬಂಧಿಸಿದ ದಾಖಲಾತಿ ಲಭ್ಯವಾಗಿಲ್ಲ. ನಾವೂ ಸಹ ಅದರ ಹುಡುಕಾಟದಲ್ಲದ್ದೇವೆ. ರೆಕಾರ್ಡ್ ರೂಂನಲ್ಲಿ ನಾನೇ ಖುದ್ದು ದಾಖಲಾತಿ ಹುಡುಕಿಸಿದರೂ ಯಾವುದೇ ದಾಖಲಾತಿ ಸಿಕ್ಕಿಲ್ಲ. ಈಗ ಜಿಲ್ಲಾಧಿಕಾರಿಗಳ ಮೂಲಕ ಉಪವಿಭಾಗಾಧಿಕಾರಿಗೆ ಹೇಳಿಸಿ ಹೊಸದಾಗಿಯೇ ದಾಖಲಾತಿ ಮಾಡಿಸಬೇಕಿದೆ. ಇದಕ್ಕಾಗಿ ಹೆಚ್ಚು ಸಮಯ ಹಿಡಿಯಲಿದ್ದು, ಇಲ್ಲಿ ಗುಡಿಸಲು ನಿರ್ಮಿಸಿಕೊಂಡಿರುವುದಕ್ಕೆ ಅರ್ಥವಿಲ್ಲ.
>
> -ಬಿ.ಕೆ.ವಸಂತಕುಮಾರಿ, ಪುರಸಭೆ ಮುಖ್ಯಾಧಿಕಾರಿ.

ತಿ.ನರಸೀಪುರ, ಮಾ.6– ಪುರಸಭೆ ವ್ಯಾಪ್ತಿಯ ಸರ್ವೆ ನಂ.7ರಲ್ಲಿ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಸ್ಥಳದಲ್ಲೇ ಠಿಕಾಣಿ ಹೂಡಿರುವ ಗೋಪಾಲಪುರ ಗ್ರಾಮದ ನಿವಾಸಿಗಳನ್ನು ಭೇಟಿ ಮಾಡಿದ ಪುರಸಭೆ ಸದಸ್ಯರು, ಅಧಿಕಾರಿಗಳ ತಂಡ ನಿವಾಸಿಗಳ ಸಮಸ್ಯೆ ಆಲಿಸಿ ಪರಿಹಾರ ದೊರಕಿಸಿ ಕೊಡುವ ಭರವಸೆ ನೀಡಿತು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ನೇತೃತ್ವದಲ್ಲಿ ಗೋಪಾಲಪುರದ ಮಾದಿಗ ಸಮುದಾಯಕ್ಕೆ ಸೇರಿದ ನಿವೇಶನಕ್ಕೆ ತೆರಳಿದ ಪುರಸಭೆ ಸದಸ್ಯರು ಹಾಗೂ ಮುಖ್ಯಾಧಿಕಾರಿಗಳು ಸ್ಥಳದಲ್ಲಿ ಗುಡಿಸಲು ಹಾಕಿಕೊಂಡು ಅಲ್ಲೇ ವಾಸ್ತವ್ಯ ಹೂಡಿರುವ ನಿವಾಸಿಗಳಿಗೆ ಕಾನೂನುಬದ್ಧವಾಗಿ ನಿವೇಶನ ದೊರಕಿಸಿ ಕೊಡಲು ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಮನವರಿಕೆ ಮಾಡಿ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಸರ್ವೆ ನಂ.7ರಲ್ಲಿ ಕ್ರೀಡಾಂಗಣ ನಿರ್ಮಿಸುತ್ತಾರೆಂದು ಕಿಡಿಗೇಡಿಗಳು ಹಬ್ಬಿಸಿರುವ ಸುಳ್ಳು ಸುದ್ದಿಗೆ ಯಾರೂ ಕಿವಿಗೊಡಬೇಡಿ. ಈ ಸ್ವತ್ತು ಗೋಪಾಲಪುರ ಗ್ರಾಮದ ಮಾದಿಗ ಸಮುದಾಯದ್ದಾಗಿದೆ. ಅನೇಕ ವರ್ಷಗಳಿಂದ ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾದಿಗರಿಗೆ ನಿವೇಶನ ದೊರಕಿಸಿಕೊಡಲು ಅವಿರತ ಪ್ರಯತ್ನಪಡುತ್ತಿದ್ದು, ನಿವೇಶನ ನಿಮ್ಮದೇ ಆಗಲಿದೆ ಎಂದು ಭರವಸೆ ನೀಡಿದರು. ಅಶ್ವಿನ್ ಕುಮಾರ್ ಶಾಸಕರಾಗಿದ್ದ ವೇಳೆ ಅಸೆಂಬ್ಲಿಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ. ಆದರೂ ಈ ಜಾಗಕ್ಕೆ ಸಂಬಂಧಿಸಿದ ಕಾಗದ ಪತ್ರಗಳು ಎಲ್ಲೂ ಲಭ್ಯವಿಲ್ಲ. ದಾಖಲಾತಿ ಹುಡುಕಿಸುವ ಪ್ರಯತ್ನ ನಡೆಸುತ್ತಿದ್ದೇವೆ. ದಾಖಲಾತಿ ಸಿಗದಿದ್ದರೂ ಹೊಸದಾಗಿ ದಾಖಲಾತಿ ಸೃಷ್ಟಿ ಮಾಡಿ ನಿವೇಶನ ಪಡೆಯೋಣ. ನಮ್ಮ ಕೆಲಸವಾಗಬೇಕಾದರೆ ಸಚಿವರು, ಮುಖ್ಯಮಂತ್ರಿಗಳು ಬೇಕಿದ್ದಾರೆ. ಅವರನ್ನು ಬಿಟ್ಟು ಯಾವುದೇ ಕೆಲಸ ಮಾಡಲು ಸಾಧ್ಯವಿಲ್ಲ. ಸಚಿವರು ಮತ್ತು ಸಿಎಂ ಭೇಟಿ ಮಾಡಿ ಸಮಸ್ಯೆ ಬಗ್ಗೆ ಗಮನ ಸೆಳೆದು ಕಾನೂನುಬದ್ಧವಾಗಿ ನಮಗೆ ಸಿಗಬೇಕಾದ ನ್ಯಾಯ ಪಡೆಯೋಣ ಎಂದರು.

ಪುರಸಭೆ ಸದಸ್ಯ ತುಂಬಲ ಪ್ರಕಾಶ್ ಮಾತನಾಡಿ, ಸರ್ವೆ ನಂ.7ರಲ್ಲಿ ಕ್ರೀಡಾಂಗಣ ನಿರ್ಮಿಸಲು ಜಾಗ ಸ್ವಾಧೀನ ಪಡಿಸಿಕೊಳ್ಳಲಾಗುತ್ತದೆ ಎಂದು ಕಿಡಿಗೇಡಿಗಳು ಹಬ್ಬಿಸಿರುವ ಸುದ್ದಿಯಿಂದ ತೊಂದರೆ ಎದುರಾಗಿದೆ. ಈ ಜಾಗದಲ್ಲಿ ಕ್ರೀಡಾಂಗಣ ಮಾಡುವ ಯಾವುದೇ ಆಲೋಚನೆ ಇಲ್ಲ. ಎಂಎಲ್‌ಸಿ ಡಾ.ಯತೀಂದ್ರ ಅವರು ಅಂತಿಮವಾಗಿ ಕೆಎಸ್‌ಐಸಿ ಜಾಗವನ್ನು ಕ್ರೀಡಾಂಗಣಕ್ಕಾಗಿ ಗುರುತು ಮಾಡಿದ್ದಾರೆ. ಹಾಗಾಗಿ ಈ ಜಾಗ ಮಾದಿಗ ಸಮುದಾಯದವರಿಗೆ ಮೀಸಲಾಗಿದೆ. ಯಾರೂ ಅನವಶ್ಯಕವಾಗಿ ಭೀತಿಗೊಳಗಾಗುವುದು ಬೇಡ ಎಂದರು.

ಪುರಸಭೆ ಸದಸ್ಯ ಎಲ್.ಮಂಜುನಾಥ್, ಮೆಡಿಕಲ್ ನಾಗರಾಜು, ಮುಖಂಡ ಶ್ರೀಕಂಠ, ಸ್ವಾಮಿ, ಹೇಮಂತ್, ವಕೀಲ ಪ್ರಕಾಶ್, ಸಂದೀಪ್, ರವೀಂದ್ರ ಮನು, ಅನಿಲ್, ಸಂಕೇತ್, ವಿಶ್ವನಾಥ್, ಮೋಹನ್, ಡ್ಯಾನ್ಸ್ ಬಸವರಾಜು, ಪುರಸಭೆ ಸಮುದಾಯ ಸಂಘಟಕ ಮಹದೇವಣ್ಣ ಮತ್ತಿತರಿದ್ದರು.

ಹೆಚ್.ಡಿ.ಕೋಟೆ ಪುರಸಭೆ ಸಾಮಾನ್ಯ ಸಭೆ

ಹಲವು ಚರ್ಚೆ: ಸದಸ್ಯರ ಮಾತಿನ ಚಕಮಕಿ



ಕೋಟೆಯಲ್ಲಿ ಪುರಸಭೆ ಸಾಮಾನ್ಯ ಸಭೆ ನಡೆಯಿತು.



ಹೆಚ್.ಡಿ.ಕೋಟೆ, ಮಾ.6– ಪಟ್ಟಣದ ಪುರಸಭೆಯ ದಿ.ಚಿಕ್ಕಮಾದು ಸಭಾಂಗಣದಲ್ಲಿ ಪುರಸಭಾಧ್ಯಕ್ಷೆ ಶಿವಮ್ಮ ಹಾಗೂ ಉಪಾಧ್ಯಕ್ಷ ಆಸೀಫ್ ಇಕ್ಬಾಲ್ ನೇತೃತ್ವದಲ್ಲಿ ಸಾಮಾನ್ಯ ಸಭೆ ನಡೆಯಿತು. ಈ ವೇಳೆ ಅನೇಕ ವಿಷಯಗಳು ಚರ್ಚೆಗೆ ಒಳಪಟ್ಟು ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಮೊದಲಿಗೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಐಡಿಯಾ ವೆಂಕಟೇಶ್ ಮಾತನಾಡಿ, ನನ್ನ ಅವಧಿಯಲ್ಲಿ ಪಟ್ಟಣದ ಅಭಿವೃದ್ಧಿಗೆ ಕೈಗೊಂಡ ಅನೇಕ ಕಾಮಗಾರಿಗಳಿಗೆ ಮೀಸಲಿಟ್ಟ 1.25 ಕೋಟಿ ರೂ. ಪೈಕಿ 65 ಲಕ್ಷ ರೂ.ಗಳನ್ನು ವಾರ್ಡ್‌ಗಳ ಕಾಮಗಾರಿಗೆ ಬಳಸಲಾಗಿದ್ದು, ಉಳಿದ ಹಣ ಏನಾಯಿತು ಎಂದು ಪ್ರಶ್ನಿಸಿದರು. ಅಲ್ಲದೇ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಮಾಹಿತಿ ನೀಡಿದ ಮುಖ್ಯಾಧಿಕಾರಿಗಳನ್ನು ಸದಸ್ಯರಾದ ಮಿಲ್ ನಾಗರಾಜು, ರಾಜು, ಹರೀಶ್‌ಗೌಡ, ನಂಜಪ್ಪ ತರಾಟೆ ತಗೆದುಕೊಂಡು ಸೂಕ್ತ ಉತ್ತರ ನೀಡಬೇಕು. ಇಲ್ಲದಿದ್ದರೆ ಸಭೆ ಮುಂದೂಡಿ ಎಂದು ಪಟ್ಟು ಹಿಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷೆ ಶಿವಮ್ಮ, ಉಪಾಧ್ಯಕ್ಷ ಆಸೀಫ್, ಸದಸ್ಯರಾದ ಹೆಚ್.ಸಿ. ನರಸಿಂಹಮೂರ್ತಿ, ಮಧು, ಸೋಮಶೇಖರ್, ಶಾಂತಮ್ಮ ಈ ವಿಚಾರವನ್ನು ಮುಂದಿನ ಸಭೆಗೆ ಇಟ್ಟುಕೊಂಡು ನಡಾವಳಿಯಂತೆ ಸಭೆ ನಡೆಸಿ ಎಂದರು. ಇದೇ ವೇಳೆ ಎಲ್ಲಾ ಸದಸ್ಯರು ತಮ್ಮ ವಾರ್ಡ್‌ನ ಮೂಲ ಸೌಕರ್ಯಗಳ ಬಗ್ಗೆ ಚರ್ಚಿಸಿದರು.

ಇದೇ ವೇಳೆ ಹಲವು ಅಭಿವೃದ್ಧಿ ವಿಚಾರಗಳಲ್ಲಿ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಪುರಸಭೆ ನೂತನ ನಾಮ ನಿರ್ದೇಶಿತರಾದ ಹೆಚ್.ಕೆ.ಪ್ರಕಾಶ್, ಸೂರ್ಯ ಕುಮಾರ್, ಅನಿಲ್, ಪಾರ್ಥಸಾರಥಿ, ಸೈಯದ್ ಅಬೀಬ್ ಅವರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಸ್ಥಾಯಿ ಸಮಿತಿ ಸದಸ್ಯರಾದ ಮಧುಕುಮಾರ್, ಸುಹಾಸಿನಿ, ಪ್ರೇಮ್ ಸಾಗರ್, ಲೋಕೇಶ್, ಪುರಸಭಾ ಮುಖ್ಯಾಧಿಕಾರಿ ಸುರೇಶ, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ದರ್ಶಿನಿ, ನಂದಿನಿ, ಶಾಂತಮ್ಮ, ಸರೋಜಮ್ಮ, ನಾಗಮ್ಮ, ಸುಹಾಸಿನಿ, ಕವಿತಾ, ಗೀತಾ, ಸಾಹಿರಾಬಾನು, ಅನಿತಾ, ಮಧುಕುಮಾರ್, ರಾಜು ವಿಶ್ವಕರ್ಮ, ಲೋಕೇಶ್, ನಂಜಪ್ಪ, ಪ್ರೇಮ್ ಸಾಗರ್, ಪುಟ್ಟಬಸವನಾಯಕ, ಮಿಲ್ ನಾಗರಾಜು, ಅಧಿಕಾರಿಗಳಾದ ರೇಷ್ಮಾ, ಪರಮೇಶ್, ರಘು, ಹರೀಶ್, ರಾಣಿ, ಶುಭಾಷ್, ಕೃತಿಕ್, ನಳಿನಿ, ಲಕ್ಷ್ಮಿದೇವಿ, ಸುಬ್ರಹ್ಮಣ್ಯ ಇದ್ದರು.

ಮೈಸೂರಿನಲ್ಲಿ ಶಸ್ತ್ರಸಜ್ಜಿತ ಪೊಲೀಸರ ನೂತನ ನಾಕಾಬಂದಿ ವ್ಯವಸ್ಥೆ

•ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರ ವಿನೂತನ ಪ್ರಯೋಗ •ನಗರ ಪ್ರವೇಶ, ನಿರ್ಗಮನದಲ್ಲಿ ಪೊಲೀಸರ ಹದ್ದಿನಕಣ್ಣು •ಗನ್ ಹಿಡಿದ ಪೊಲೀಸರಿಂದ ತಪಾಸಣೆ •ಜನರಲ್ಲಿ ನಿರ್ಭೀತ ವಾತಾವರಣಕ್ಕಾಗಿ ಪೊಲೀಸರು ಸಜ್ಜು •ಎಲ್ಲೆ ಅಪರಾಧ ಮಾಡಿದರೂ ಸಿಕ್ಕಿ ಬೀಳುವುದು ಗ್ಯಾರಂಟಿ





ಮೈಸೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ, ನಿರ್ಭೀತ ವಾತಾವರಣ ನಿರ್ಮಾಣಕ್ಕೆ ಶಸ್ತ್ರಸಜ್ಜಿತ ಪೊಲೀಸರಿಂದ ನಾಕಾಬಂಧಿ ವ್ಯವಸ್ಥೆ ಜಾರಿ ಮಾಡಲಾಗಿದೆ.

ಮೈಸೂರು, ಮಾ.6(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿ ಜನರಲ್ಲಿ ನಿರ್ಭೀತ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಶಸ್ತ್ರಾಸ್ತ್ರ (ಗನ್) ಹಿಡಿದ ಪೊಲೀಸರಿಂದ ಹೊಸ ನಾಕಾಬಂದಿ ವ್ಯವಸ್ಥೆ ಪರಿಚಯಿಸಲಾಗಿದೆ.

ಉದಯಗಿರಿ ಗಲಾಟೆ ಪ್ರಕರಣ ಹೊರತು ಪಡಿಸಿ ಮೈಸೂರಿನಲ್ಲಿ ಇತ್ತೀಚಿಗೆ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಆದರೂ ನಾವು ಸುರಕ್ಷಿತರಾಗಿದ್ದೇವೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವ ನಿಟ್ಟಿನಲ್ಲಿ ಪೊಲೀಸರು ನಗರದಾದ್ಯಂತ ಹದ್ದಿನಕಣ್ಣಿಟ್ಟಿದ್ದಾರೆ.

ಮೈಸೂರು ನಗರವನ್ನು ಸಂಪರ್ಕಿಸುವ ಬೆಂಗಳೂರು ಹೆದ್ದಾರಿ, ನರಸೀಪುರ ಹೆದ್ದಾರಿ, ನಂಜನಗೂಡು ಹೆದ್ದಾರಿ, ಹುಣಸೂರು ಹೆದ್ದಾರಿ ಸೇರಿದಂತೆ ಹಲವು ಬಡಾವಣೆಗಳಲ್ಲಿ ಶಸ್ತ್ರಾಸ್ತ್ರ ಹಿಡಿದ ಪೊಲೀಸರು ದಿನದ 24 ಗಂಟೆಯೂ ನಾಕಾಬಂದಿ ಹಾಕಿ, ಪರಿಶೀಲನೆ ನಡೆಸುತ್ತಿದ್ದಾರೆ. ಮೈಸೂರು ನಗರ ಪ್ರವೇಶ ಮಾಡುವ ಹಾಗೂ ನಿರ್ಗಮಿಸುವ ಎರಡು ಸ್ಥಳಗಳಲ್ಲಿ ನಾಕಾಬಂದಿ ಇರಲಿದೆ.

ಈ ತನಕ ಪೊಲೀಸರು ಲಾಠಿ ತೋರಿಸಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಆದರೆ ಈಗ ಪೊಲೀಸರ ತಪಾಸಣಾ ವೈಖರಿಯೇ ಬದಲಾಗಿದೆ. ಪ್ರಮುಖ ರಸ್ತೆಹಾಗೂ ಬಡಾವಣೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಶಸ್ತ್ರಹಿಡಿದ ಪೊಲೀಸರು ನಾಕಾಬಂದಿ ಮಾಡಿ ತಪಾಸಣೆ ಮಾಡುತ್ತಿದ್ದಾರೆ.

ಗನ್ ಹಿಡಿದ ಒಬ್ಬ ಪೊಲೀಸ್ ಸಿಬ್ಬಂದಿ ಚಲನವಲನಗಳನ್ನು ಗಮನಿಸುತ್ತಿದ್ದರೆ, ಉಳಿದ ಪೊಲೀಸರು ವಾಹನಗಳನ್ನು ತಡೆದು ತಪಾಸಣೆ ನಡೆಸುತ್ತಿದ್ದಾರೆ. ಈ ಮೂಲಕ ಪೊಲೀಸರು ಪರಿಣಾಮಕಾರಿ ತಪಾಸಣಾ ಕಾರ್ಯವನ್ನು ಕಳೆದ ಮೂರು ದಿನಗಳಿಂದ ಮೈಸೂರಿನಲ್ಲಿ ನಡೆಸುತ್ತಿದ್ದಾರೆ.

ಈ ವೇಳೆ ಹೆಲ್ಮೆಟ್ ಧರಿಸದ ಹಾಗೂ ಇಶ್ಯೂರೆನ್ಸ್ ಪಾವತಿಸದೆ ವಾಹನ ಚಾಲನೆ ಬಗ್ಗೆಯೂ ಪರಿಶೀಲನೆ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳಲ್ಲಿ ತಾವು ಸಿಕ್ಕಿ ಬೀಳಬಾರದು ಎಂದು ಕೆಲವು ಚಾಲಾಕಿಗಳು ನಂಬರ್ ಪ್ಲೇಟ್ ಅಳವಡಿಸಿಲ್ಲ. ಕೆಲವರ ವಾಹನಗಳಿಗೆ ನಂಬರ್ ಪ್ಲೇಟ್ ಇದ್ದರೂ ಅವುಗಳ ಸಂಖ್ಯೆ ಅಸ್ಪಷ್ಟವಾಗಿದೆ. ಇಂತಹ ವಾಹನಗಳನ್ನು ಪೊಲೀಸರು ಪರಿಶೀಲನೆ ನಡೆಸಿ ಸಂಚಾರಿ ಪೊಲೀಸರಿಗೆ ಒಪ್ಪಿಸುತ್ತಿದ್ದಾರೆ.

ತಮ್ಮಲ್ಲಿರುವ ಎಲೆಕ್ಟ್ರಾನಿಕ್ ಉಪಕರಣದಿಂದ ವಾಹನಗಳ ಸಂಖ್ಯೆ ನಮೂದಿಸುವ ಪೊಲೀಸರು ವಾಹನದ ಮಾಲೀಕನ ಸಂಪೂರ್ಣ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ವೇಳೆ ಅಪರಾಧ ಕೃತ್ಯ ಎಸಗಿರುವ ಹಳೆ ಅಪರಾಧಿಗಳು ಸಿಕ್ಕಿ ಬೀಳುವ ಸಾಧ್ಯತೆ ಇದೆ.

ಸಂಚಾರ ನಿಯಮ ಉಲ್ಲಂಘನೆ ಮಾಡಿ ದಂಡ ಪಾವತಿಸದ ವಾಹನ ಸವಾರರನ್ನು ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗೆ ಹೋಗುವಂತೆ ತಾಕೀತು ಮಾಡಲಾಗುತ್ತದೆ. ಜೊತೆಗೆ ಹೀಗೆ ಸಿಕ್ಕಿ ಬೀಳುವ ವಾಹನ ಸವಾರರ ಬಗ್ಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತಿದೆ.

ಈ ತನಕ ಪೊಲೀಸರು ಲಾಠಿ ಹಿಡಿದು ವಾಹನ ತಪಾಸಣೆ ಮಾಡುತ್ತಿದ್ದರು. ಆದರೆ ಈಗ ಶಸ್ತ್ರಹಿಡಿದು ವಾಹನ ತಪಾಸಣೆ ಮಾಡುತ್ತಿದ್ದಾರೆ. ಜೊತೆಗೆ ಎಲ್ಲೂ ಅಹಿತಕರ ಘಟನೆ ನಡೆಯದಂತೆ ಹದ್ದಿನಕಣ್ಣಿಟ್ಟಿದ್ದಾರೆ.

ಕೆಲವರು ಅಪರಾಧ ಕೃತ್ಯ ಎಸಗಿ ರಾಜಾರೋಷದಿಂದ ಓಡಾಡುತ್ತಿದ್ದಾರೆ. ಪೊಲೀಸರು ಎಲ್ಲೊ ಒಂದು ಕಡೆ ಇರುತ್ತಾರೆ. ಇದರಿಂದ ನಾವು ಸೇಫ್ ಅಂತ ತಿಳಿದಿದ್ದರು. ಅಷ್ಟೆ ಅಲ್ಲದೆ ದೂರದಿಂದಲೇ ಪೊಲೀಸರನ್ನು ನೋಡಿ ಬೇರೆ ರಸ್ತೆಯಲ್ಲಿ ಹೋಗುತ್ತಿದ್ದರು. ಆದರೆ ಈಗಿನ ಪೊಲೀಸರ ನಾಕಾಬಂಧಿ ವ್ಯವಸ್ಥೆ ವಿಭಿನ್ನವಾಗಿದೆ. ಯಾವ ರಸ್ತೆಯಲ್ಲಿ ಹೋದರೂ ಒಂದಲ್ಲಾ ಒಂದು ಕಡೆ ಪೊಲೀಸರಿಗೆ ಸಿಕ್ಕಿ ಬೀಳುವ ಪರಿಸ್ಥಿತಿ ಇದೆ. ಇಂತಹ ಅಪರಾಧಿಗಳು ಈಗ ನಾಕಾಬಂದಿ ಹಾಕಿರುವ ಪೊಲೀಸರಿಗೆ ಸಿಕ್ಕಿ ಬೀಳುತ್ತಾರೆ.

ಕಳ್ಳತನ, ಕೊಲೆ, ಸುಲಿಗೆ, ದರೋಡೆ, ಸರಗಳ್ಳತನ, ವಾಹನ ಕಳ್ಳತನ ಸೇರಿದಂತೆ ಹಲವು ಅಪರಾಧ ಕೃತ್ಯ ಎಸಗುವರು ಶಸ್ತ್ರಾಸ್ತ್ರ ಹಿಡಿದಿರುವ ಪೊಲೀಸರ ಭದ್ರತಾ ವ್ಯವಸ್ಥೆ ಗಮನಿಸಿ ಮತ್ತೆ ಅಪರಾಧ ಕೃತ್ಯ ಮಾಡಲು ಹೆದರುತ್ತಾರೆ. ಒಂದು ವೇಳೆ ಅಪರಾಧ ಕೃತ್ಯ ಎಸಗಿದರೆ ಎಸ್ಕೇಪ್ ಆಗಲು ಸಾಧ್ಯವಿರದ ಪರಿಸ್ಥಿತಿ ನೋಡಿ ಮೌನವಹಿಸುತ್ತಾರೆ.

ಮೈಸೂರಿನ 36 ಸ್ಥಳಗಳಲ್ಲಿ ನಾಕಾಬಂದಿ

ಮೈಸೂರಿನ 36 ಸ್ಥಳಗಳಲ್ಲಿ ಪೊಲೀಸರ ನಾಕಾಬಂದಿ ಹಾಕಲಾಗಿದೆ. ನಗರದ ಪ್ರವೇಶ ಮತ್ತು ನಿರ್ಗಮನದ ಎಲ್ಲಾ ಸ್ಥಳಗಳಲ್ಲಿ ನಾಕಾಬಂದಿ ಇರಲಿದೆ. ಶಸ್ತ್ರಾಸ್ತ್ರ ಹಿಡಿದ ಪೊಲೀಸರು ವಾಹನಗಳ ಪರಿಶೀಲನೆ ನಡೆಸುತ್ತಾರೆ. ಇದರಿಂದ ಜನರಲ್ಲಿ ನಾವು ಸುರಕ್ಷಿತರಾಗಿದ್ದೇವೆ ಎಂಬ ಭಾವನೆ ಮೂಡಬೇಕು ಎಂಬುದು ನಮ್ಮ ಉದ್ದೇಶ. ಇದರಿಂದ ಅಪರಾಧ ಕೃತ್ಯ ಎಸಗುವವರಿಗೆ ಎಚ್ಚರಿಕೆ ಕೂಡ ಆಗಲಿದೆ.

ದಿನದ 24 ಗಂಟೆಯೂ ನಾಕಾಬಂಧಿ ಇರುತ್ತದೆ. ನಾಕಾಬಂದಿ ಒಂದೇ ಸ್ಥಳದಲ್ಲಿ ಇರುವುದಿಲ್ಲ. ಆಗಾಗ ಜಾಗ ಬದಲಾಗುತ್ತಾ ಹೋಗುತ್ತದೆ. ಜೊತೆಗೆ ಕೆಲವು ಸ್ಥಳಗಳಲ್ಲಿ ದಿಢೀರ್ ಆಗಿ ಬಂದು ಪೊಲೀಸರು ಪರಿಶೀಲನೆ ಮಾಡುತ್ತಾರೆ. ಆಯಾ ಪೊಲೀಸ್ ಠಾಣೆಯ ಸಿಬ್ಬಂದಿ, ಸಂಚಾರಿ ಪೊಲೀಸರು ಹಾಗೂ ಈಗ ನಾಕಾಬಂದಿಯಲ್ಲಿರುವ ಪೊಲೀಸರು ಕರ್ತವ್ಯದಲ್ಲಿ ಇರುತ್ತಾರೆ. ಇದರಿಂದ ನಗರದ ಯಾವುದೇ ಸ್ಥಳ ನೋಡಿದರೂ ಅಲ್ಲಿ ಪೊಲೀಸರು ಕಾಣಿಸುತ್ತಾರೆ. ಇದರ ಪರಿಣಾಮ ಅಪರಾಧ ಕೃತ್ಯ ಎಸಗುವವರು ಹೆದರುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿ, ಜನರು ನಿರ್ಭೀತಿಯಿಂದ ಇರುವಂತೆ ಮಾಡಲು ನೂತನ ನಾಕಾಬಂಧಿಯ ವ್ಯವಸ್ಥೆ ಮಾಡಲಾಗಿದೆ. - **ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತರು, ಮೈಸೂರು.**

ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಸಾಹಿತ್ಯ–ಸಂಸ್ಕೃತಿಯ ಸಮ್ಮಿಲನ ಕಾರ್ಯಕ್ರಮ

ಮೈಸೂರು, ಮಾ. 6– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಸಾಹಿತ್ಯ–ಸಂಸ್ಕೃತಿಯ ಸಮ್ಮಿಲನ ಕಾರ್ಯಕ್ರಮವನ್ನು ಮಾ. 10 ರಂದು ಬೆಳಗ್ಗೆ 10 ಗಂಟೆಗೆ ರಾಮಕೃಷ್ಣನಗರದ ರಮಾಗೋವಿಂದ ರಂಗಭವನದಲ್ಲಿ ಆಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ರಂಗಕರ್ಮಿ ಹಾಗೂ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್, ಸಮಾಜ ಸೇವಕ ಪೀಲೇಟಿ ಅನುಸೂಯಮ್ಮ, ಕಿವುಡು ಮಕ್ಕಳ ಶಿಕ್ಷಕರಾದ ಪರಿಮಳಾಮೂರ್ತಿ, ಪ್ರಸಾರ ಕ್ಷೇತ್ರದ ಡಾ.ಎಂ.ಎಸ್. ವಿಜಯಾ ಹರನ್, ಶಿಕ್ಷಣ ಹಾಗೂ ಆಧ್ಯಾತ್ಮ ಕ್ಷೇತ್ರದಿಂದ ಸುಮತಿ ಸುಬ್ರಹ್ಮಣ್ಯ, ಸಾಹಿತ್ಯ ಕ್ಷೇತ್ರದಿಂದ ಬಿ.ಕೆ ಮೀನಾಕ್ಷಿ ಅವರಿಗೆ ಮಹಿಳಾ ಸಾಧಕಿ–2025 ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು.

ಕಾರ್ಯಕ್ರಮದ ಉದ್ಘಾಟನೆಯನ್ನು ಮೈ.ವಿ.ವಿ ಕುಲಸಚಿವರಾದ ಎಂ.ಕೆ. ಸವಿತಾ ನೆರವೇರಿಸಲಿದ್ದು, ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್. ಸುಧಾರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮಹಿಳಾ ಅಸ್ಮಿತೆಯ ಬಗ್ಗೆ ವಿಚಾರ ಮಂಥನವನ್ನು ಸಂಸ್ಕೃತ ವಿದ್ವಾಂಸೆ ಡಾ. ಕೆ. ಲೀಲಾಪ್ರಕಾಶ್ ನಡೆಸಿಕೊಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ನೃಪತುಂಗ ಕನ್ನಡ ಶಾಲೆಯ ಕಾರ್ಯದರ್ಶಿ ಪವಿತ್ರಾ ಮಲ್ಲೇಶ್, ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ ಹಾಗೂ ಲೇಖಕ ಎಸ್. ರಾಮಪ್ರಸಾದ್ ಆಗಮಿಸಲಿದ್ದಾರೆ.

ಸ್ನೇಹ ಸಿಂಚನ ಟ್ರಸ್ಟ್‌ನ ಅಧ್ಯಕ್ಷೆ ಹಾಗೂ ಕಸಾಪದ ಕಾರ್ಯದರ್ಶಿ ಮ.ನ.ಲತಾ ಮೋಹನ್, ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ಡಾ.ರತ್ನಾಹಾಲಪ್ಪಗೌಡ, ಸಮಾಜ ಸೇವಕರಾದ ಸುಶೀಲ ಶ್ಯಾಮಸುಂದರ್, ಗೆಳತಿ ಮಹಿಳಾ ಮಂಡಳಿಯ ವಿಜಯಾ ಸುದರ್ಶನ್ ಉಪಸ್ಥಿತರಿರುವರು.

ಮಹಿಳೆಯರಿಂದ ನಾಟಕ, ರೂಪಕ, ಜನಪದ ಹಾಗೂ ಭಕ್ತಿ ನೃತ್ಯ, ಭರತನಾಟ್ಯ, ಕೋಲಾಟ, ಸೀರೆಯಲ್ಲಿ ನೀರೆಯ ನಡಿಗೆ, ಗೀತಗಾಯನ, ಸಮೂಹ ನೃತ್ಯ ಮುಂತಾದವುಗಳನ್ನು ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಮಾತನಾಡುವ ಗೊಂಬೆ ಕಲಾವಿದೆ ಎಂ. ಕಾವ್ಯ ಅವರಿಂದ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮ.ನ. ಲತಾಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ಉಚಿತ ತಪಾಸಣಾ ಶಿಬಿರ

ಮೈಸೂರು, ಮಾ.6– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತ ಆಶ್ರಯದಲ್ಲಿ ಮಾ.11ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ. 94487 53597, ಎಂ.ಎನ್.ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಕರ್ನಾಟಕದಲ್ಲಿ ವೃತ್ತಿಪರ ತೆರಿಗೆ ಹೆಚ್ಚಳ

15 ಸಾವಿರಕ್ಕಿಂತ ಹೆಚ್ಚು ಸಂಬಳ ಇದ್ದವರಿಗೆ ಅನ್ವಯ

ಬೆಂಗಳೂರು, ಮಾ.6– ಕರ್ನಾಟಕ ಸರ್ಕಾರ ಪ್ರತಿ ತಿಂಗಳು ವಿಧಿಸುವ ವೃತ್ತಿಪರ ತೆರಿಗೆಯನ್ನು 200 ರೂಪಾಯಿಂದ 300 ರೂಪಾಯಿಗೆ ಹೆಚ್ಚಳ ಮಾಡಲು ಮುಂದಾಗಿದೆ. ಇದು ಮಾಸಿಕ 15 ಸಾವಿರಕ್ಕಿಂತ ಹೆಚ್ಚಿನ ಆದಾಯ ಗಳಿಸುವ ವೃತ್ತಿಪರರಿಗೆ ಅನ್ವಯವಾಗಲಿದೆ.

ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಇದಕ್ಕಾಗಿ 'ಕರ್ನಾಟಕ ವೃತ್ತಿ, ಕಸುಬು, ಉದ್ಯೋಗಗಳ ಮೇಲಿನ ತೆರಿಗೆ ತಿದ್ದುಪಡಿ ವಿಧೇಯಕ –2025' ಜಾರಿ ಮಾಡಲು ನಿರ್ಧರಿಸಲಾಗಿದೆ. ಉದ್ಯೋಗ, ವೃತ್ತಿ, ವ್ಯಾಪಾರಗಳಿಂದ ಮಾಸಿಕ 15,000 ರೂಪಾಯಿಗಿಂತ ಹೆಚ್ಚು ಆದಾಯ ಗಳಿಸುವವರು ವರ್ಷದ 11 ತಿಂಗಳು ತಲಾ 200 ರೂ.. ಒಂದು ತಿಂಗಳು ಮಾತ್ರ 300 ರೂಪಾಯಿ ಪಾವತಿಸುತ್ತಿದ್ದರು. ಒಟ್ಟಾರೆ ವರ್ಷಕ್ಕೆ 2500 ರೂಪಾಯಿ ಪಾವತಿಸಬೇಕಿತ್ತು. ಇನ್ನು ಹೆಚ್ಚಳ ಬಳಿಕ 2600 ರೂಪಾಯಿ ವೃತ್ತಿ ತೆರಿಗೆ ಪಾವತಿಸಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಪಶು ಆಹಾರ ಉತ್ಪಾದನೆ, ಪೂರೈಕೆ ಮತ್ತು ಮಾರಾಟ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಲು ಹೊಸ ಕಾನೂನು ರೂಪಿಸಲು ನಿರ್ಣಯಿಸಲಾಗಿದೆ. ಈ ಸಂಬಂಧ 'ಕರ್ನಾಟಕ ಪಶು ಆಹಾರ ಮತ್ತು ಪೂರಕ ಮೇವು ತಯಾರಿಕೆ ನಿಯಂತ್ರಣ, ಮಾರಾಟ ಮತ್ತು ವಿತರಣೆ ವಿಧೇಯಕ – 2025' ಅನ್ನು ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಪಶು ಆಹಾರ ಉತ್ಪಾದನಾ ಘಟಕಗಳ ಮೇಲೆ ನಿಗಾ ವಹಿಸಲು ಪ್ರಾಧಿಕಾರ ರಚನೆ ಹಾಗೂ ಪರವಾನಗಿ ನೀಡುವ ಸಂಬಂಧ ಪಶು ಸಂಗೋಪನಾ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಪರಿಣಿತರ ಸಮಿತಿ ರಚನೆಗೆ ಉದ್ದೇಶಿಸಲಾಗಿದೆ.

ಸಂಪುಟ ಸಭೆಯ ಇತರ ತೀರ್ಮಾನಗಳು: ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ದುಡಿಯುವ ಬಂಡವಾಳಕ್ಕಾಗಿ ಬ್ಯಾಂಕ್‌ಗಳಿಂದ ಪಡೆದಿರುವ 22.93 ಕೋಟಿ ಸಾಲಕ್ಕೆ ಸರಕಾರದ ಖಾತರಿಯನ್ನು ವಿಸ್ತರಿಸಲು ನಿರ್ಧಾರ.

ಸಂಜಯಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಆವರಣದ ರೋಬೋಟಿಕ್ ಶಸ್ತ್ರಚಿಕಿತ್ಸಾ ವಿಭಾಗದ ನೂತನ ಕಟ್ಟಡದಲ್ಲಿ 200 ಆಸನಗಳ ಸಾಮರ್ಥ್ಯದ 13.90 ಕೋಟಿ ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು 63.34 ಕೋಟಿಗೆ ಆಡಳಿತಾತ್ಮಕ ಒಪ್ಪಿಗೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ (ತಿದ್ದುಪಡಿ) ವಿಧೇಯಕ–2025ಕ್ಕೆ ಅನುಮೋದನೆ ನೀಡಿದ್ದು, ತನ್ಮೂಲಕ ವಿಶ್ವವಿದ್ಯಾಲಯಕ್ಕೆ ಮಹಾತ್ಮ ಗಾಂಧೀಜಿ ಹೆಸರು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ.

ಅಕ್ರಮವಾಗಿ ಹಸುಗಳ ಸಾಗಾಟ; ಬೊಲೆರೋ ವಾಹನ ವಶಕ್ಕೆ

ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮಾ.6(ಎಸ್‌ಬಿಡಿ)– ಬೊಲೆರೋ ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ ನಾಲ್ಕು ಹಸುಗಳನ್ನು ನಗರದ ಅಶೋಕಪುರಂ ಠಾಣೆ ಪೊಲೀಸರು ರಕ್ಷಿಸಿದ್ದಾರೆ.

ಮಾನಂದವಾಡಿ ರಸ್ತೆ, ಜ್ವಾಲಮಾಲ ಫ್ಲೋರ್‌ಮಿಲ್ ಬಳಿ ಮಾ.4ರಂದು ಸಂಜೆ ವಾಹನ ತಪಾಸಣೆ ವೇಳೆ ಬೊಲೆರೋ ಗೂಡ್ಸ್ ವಾಹನವನ್ನು ತಡೆದು ಪರಿಶೀಲಿಸಿದಾಗ ಅದರಲ್ಲಿ ನಾಲ್ಕು ಹಸುಗಳನ್ನು ಸಾಗಿಸುತ್ತಿರುವುದು ತಿಳಿದುಬಂದಿದೆ. ಪೊಲೀಸರು ಪರಿಶೀಲಿಸುತ್ತಿರುವಾಗಲೇ ಚಾಲಕ ಹಾಗೂ ಮತ್ತೋರ್ವ ವ್ಯಕ್ತಿ ಪರಾರಿಯಾಗಿದ್ದರು. ಇನ್ನಿಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಿಸಿದಾಗ, ಹಸುಗಳ ಬಗ್ಗೆ ಸಮರ್ಪಕ ಮಾಹಿತಿ ನೀಡಿಲ್ಲ.

ಆದ್ದರಿಂದ ಪೊಲೀಸರು ಹಸುಗಳನ್ನು ರಕ್ಷಿಸಿ, ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಸಿಕ್ಕಿಬಿದ್ದ ನಗರದ ವಾಹಿದ್ ಪಾಷಾ, ಸಮೀರ್ ಅಹಮದ್ ಹಾಗೂ ಪರಾರಿಯಾಗಿರುವ ಚಾಲಕ ಕುಮಾರ್ ಹಾಗೂ ಜಾವಿದ್ ವಿರುದ್ಧ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿಜ್ಞಾನ ವಾಸ್ತವಿಕ ನೆಲೆಗಟ್ಟಿನಲ್ಲಿ ನಡೆಸುವ ಸತ್ಯಾನ್ವೇಷಣೆ

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಶಿಶುಪಾಲ ಅಭಿಪ್ರಾಯ



ಮೈಸೂರಿನ ಯುವರಾಜ ಕಾಲೇಜಿನ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಗುರುವಾರ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಶಿಶುಪಾಲ ಉದ್ಘಾಟಿಸಿದರು.

ಮೈಸೂರು, ಮಾ.6(ಬಿಎಲ್‌ಯು)– ವಿಜ್ಞಾನ ಎಂಬುದು ವಾಸ್ತವಿಕ ನೆಲೆಗಟ್ಟಿನ ಆಧಾರದ ಮೇಲೆ ನಡೆಸುವ ಸತ್ಯಾನ್ವೇಷಣೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಶಿಶುಪಾಲ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜೀವನದಲ್ಲಿ ವಿಜ್ಞಾನದ ಪಾತ್ರ– ಯುವಕರ ಪಾಲ್ಗೊಳ್ಳುವಿಕೆ ಕುರಿತು ಮಾತನಾಡಿದ ಅವರು, ವಿಜ್ಞಾನ ತಾತ–ಅಜ್ಜಿಯ ಕಥೆಯಾಗದೆ ವೈಚಾರಿಕತೆ ಹಾಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಂಶೋಧನೆ ಮಾಡುವ ವಿಷಯ ವಸ್ತು ಎಂದು ಹೇಳಿದರು.

ವಿಜ್ಞಾನವೆಂದರೆ ಕುತೂಹಲ ಮೂಡಿಸುವ ಸಂಗ್ರಹಾಲಯವಾಗಿದ್ದು, ಕುತೂಹಲವಿಲ್ಲದಿದ್ದರೆ ವಿಜ್ಞಾನ ವಿಚಾರದ ಬಗ್ಗೆ ಸತ್ಯಾನ್ವೇಷಣೆ ಸಾಧ್ಯವೇ ಇಲ್ಲ. ವಿಶ್ವದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಲ್ಲಾ ಸಾಧಕರಿಗೆ ಮೂಲ ಮಾರ್ಗವೇ ಕುತೂಹಲ. ಯಾವುದಾದರೂ ವಿಚಾರದ ಬಗ್ಗೆ ಕುತೂಹಲ ಮೂಡಿದಾಗ ವಿಜ್ಞಾನಿಗಳು ಅದರ ಸತ್ಯಾನ್ವೇಷಣೆ ಹಾದಿಯಲ್ಲಿ ಸಾಗಿದ್ದಾರೆ. ಇದರ ಫಲಿತಾಂಶ ವಿಶ್ವಕ್ಕೆ ದೊಡ್ಡ ಕೊಡುಗೆಗಳಾಗಿದೆ ಎಂದು ಡಾ.ಶಿಶುಪಾಲ ತಿಳಿಸಿದರು.

ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ಬದ್ಧತೆ ಹಾಗೂ ಮನೋಸ್ಥೈರ್ಯ ಇರಬೇಕು. ಸ್ಟೀಫನ್ ವಿಲಿಯಂ ಹಾಕಿಂಗ್ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ದೈಹಿಕ ಅಂಗವಿಕಲತೆ ಇದ್ದರೂ ವಿಜ್ಞಾನ ಕ್ಷೇತ್ರದಲ್ಲಿ ಮಾಡಿದ ಸಂಶೋಧನೆಯಿಂದ ಸ್ಟೀಫನ್ ವಿಲಿಯಂ ಹಾಕಿಂಗ್ ಅವರನ್ನು ವಿಶ್ವ ಜ್ಞಾನಿ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸಂಶೋಧನೆ ಅಷ್ಟು ಸುಲಭವಾಗಿ ಎಲ್ಲರಿಗೂ ಒಗ್ಗುವುದಿಲ್ಲ. ಕುತೂಹಲವಿರುವ ವ್ಯಕ್ತಿ ಒಂದು ವಿಚಾರದ ಬಗ್ಗೆ ಹಗಲು ರಾತ್ರಿಯೆನ್ನದೆ ಸಂಶೋಧನೆ ನಡೆಸಿದಾಗ ಮಾತ್ರ ಅದರ ಫಲ ದೊರೆಯುತ್ತದೆ. ವಿಶ್ವದ ಬಹಳಷ್ಟು ವಿಜ್ಞಾನಿಗಳು ಸಂಶೋಧನೆಗಾಗಿ ತಮ್ಮ ಜೀವನವನ್ನೆ ಅರ್ಪಿಸಿಕೊಂಡಿದ್ದಾರೆ ಎಂದರು.

ವಿಜ್ಞಾನ ಕ್ಷೇತ್ರದ ಸಂಶೋಧನೆಗೆ ಇಳಿದಾಗ ಹಲವು ಕುತೂಹಲಕಾರಿ ಸಂಗತಿಗಳು ಕಣ್ಮುಂದೆ ಬರುತ್ತವೆ. ಇದರ ಬಗ್ಗೆ ಅಧ್ಯಯನ ನಡೆಸಿದಾಗ ಹಲವು ವಿಚಾರಗಳು ತೆರೆದುಕೊಳ್ಳುತ್ತವೆ. ಇದೇ ಹಾದಿಯಲ್ಲಿ ಸಾಗಿದಾಗ ಆವಿಷ್ಕಾರದಲ್ಲಿ ಯಶಸ್ವಿಯಾಗುತ್ತೇವೆ ಎಂದು ಹೇಳಿದರು.

ವಿಶ್ವದ ಕೆಲವು ವಿಜ್ಞಾನಿಗಳು ಬಡತನ ಇದ್ದರೂ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಇದಕ್ಕೆ ಮಾರಿಯೋ ಕ್ಯಾಪೇಚಿ ಸ್ಪಷ್ಟ ನಿದರ್ಶನ ಎಂದು ಡಾ.ಶಿಶುಪಾಲ ಹೇಳಿದರು. ಇದೇ ವೇಳೆ ತಾವು ಕೆಲಸ ನಿರ್ವಹಿಸುತ್ತಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದ ಡಾ.ಶಿಶುಪಾಲ, ದಾವಣಗೆರೆ ವಿಶ್ವವಿದ್ಯಾನಿಲಯ ಮೈಸೂರು ವಿಶ್ವವಿದ್ಯಾನಿಲಯದ ಸುಪುತ್ರ ಎಂದು ವ್ಯಾಖ್ಯಾನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ನಂತರ ಸ್ಥಾಪನೆಗೊಂಡ ಹಲವು ವಿಶ್ವವಿದ್ಯಾನಿಲಯಗಳಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ ಕೂಡ ಒಂದು ಎಂದು ಅಭಿಪ್ರಾಯಪಟ್ಟರು.

ಯುವರಾಜ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಎಸ್. ಮಹದೇವಮೂರ್ತಿ, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ನಾಗೇಶ್ ಬಾಬು, ಆಡಳಿತಾಧಿಕಾರಿ ಅಜಯ್ ಕುಮಾರ್, ಪ್ರೊ.ವೆಂಕಟೇಶ್ ಹಾಗೂ ಪ್ರೊ.ದೇವಿಕಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರಾಕ್ಷಸ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಕ್ಷಸ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಕ್ಷಸ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
ರಾ ರಾಜಾ(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
FOREST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು, ನಾಳೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ಮಾ.6(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗದ ಶತಮಾನೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ಮಾ.7 ಮತ್ತು 8ರಂದು ರಾಣಿ ಬಹದ್ದೂರ್ ಸಭಾಂಗಣದಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಮನೋವಿಜ್ಞಾನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಹೆಚ್.ಕೆ. ಮಂಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಭಾಗದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಮನೋವಿಜ್ಞಾನ ವಿಭಾಗದ ಹಳೆಯ ವಿದ್ಯಾರ್ಥಿ ಸಂಘದ ವತಿಯಿಂದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿದ್ದು, ನಾಳೆ(ಮಾ.7) ಬೆಳಗ್ಗೆ 11ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ. ಗುಜರಾತ್ ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾನಿಲಯದ ನ್ಯಾಯ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಎಸ್.ಎಲ್. ವಯಾ ಮುಖ್ಯ ಭಾಷಣ ಮಾಡಲಿದ್ದಾರೆ. ಮೈಸೂರು ವಿವಿ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ ಸಂಪತ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮಾ.8 ಸಂಜೆ 4ಕ್ಕೆ ಸಮಾರೋಪ ನಡೆಯಲಿದೆ. ವಿವಿ ಕುಲಸಚಿವರಾದ ಎಂ.ಕೆ. ಸವಿತಾ ಸಮಾರೋಪ ಭಾಷಣ ನೆರವೇರಿಸುವರು, ಶಾಸಕ ಕೆ ಹರೀಶ್‌ಗೌಡ, ಕಾವೇರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಂಸ್ಥಾಪಕ ಡಾ.ಪಿಎಸ್. ಲೋಹಿತ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಎರಡು ದಿನಗಳ ಈ ವಿಚಾರ ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಮನೋವಿಜ್ಞಾನಿ ಪ್ರೊ. ಸಂಜನಾ ಕಿರಣ್, ಪ್ರೊ. ಪ್ರತಾಪ್‌ರೆಡ್ಡಿ, ಪ್ರೊ. ಮೇವಾಸಿಂಗ್, ಪ್ರೊ. ಕೇಶವಕುಮಾರ್, ಪ್ರೊ. ಕಿರಣ್ ಕುಮಾರ್, ಪ್ರೊ. ಸುಮಿತ್ ದತ್ತ, ಪ್ರೊ. ವಿಜಯಲಕ್ಷ್ಮಿ ಅಮ್ಮಿನಾ ಬಾವಿ, ಪ್ರೊ. ಪ್ರಕಾಶ್ ಇನ್ನಿತರರು ವಿಷಯ ಮಂಡನೆ ಮಾಡಲಿದ್ದಾರೆ. ಅಲ್ಲದೆ, ವಿವಿಧ ರಾಜ್ಯಗಳಿಂದ ಸುಮಾರು 300ಕ್ಕೂ ಹೆಚ್ಚು ಸಂಶೋಧಕರು, ಅಧ್ಯಾಪಕರು, ವಿದ್ಯಾರ್ಥಿಗಳು ಆಗಮಿಸಿ ಪಾಲ್ಗೊಳ್ಳಲಿದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಪಿ. ಮಂಜುನಾಥ್, ಡಾ. ಹಿತಾ ಕ್ಲಾಡಿಯಾ ರಾವ್ ಇದ್ದರು.

ಪ್ರಯಾಗ್‌ರಾಜ್‌ಗೆ ಯಶಸ್ವಿ ಸೈಕಲ್ ಸವಾರಿ....



ಕುಂಭಮೇಳದಲ್ಲಿ ಭಾಗವಹಿಸಲು ಇತ್ತೀಚೆಗೆ ಮೈಸೂರಿನಿಂದ ಪ್ರಯಾಗರಾಜ್‌ಗೆ ಹಾಗೂ ಮಾಲಿನ್ಯ ನಿಯಂತ್ರಣ ಕುರಿತು ಜಾಗೃತಿ ಮೂಡಿಸಲು ಅಯೋಧ್ಯೆಯ ರಾಮಮಂದಿರಕ್ಕೆ ಸೈಕಲ್ ಸವಾರಿ ಮಾಡಿ ಮರಳಿದ ಪರಿಸರವಾದಿ ಮಂಜು ಅವರನ್ನು ಮೈಸೂರು ಸೈಕ್ಲಿಂಗ್ ತಂಡದ ವತಿಯಿಂದ ಸನ್ಮಾನಿಸಲಾಯಿತು.

ನಟ್ ಬೋಲ್ಟ್ ಟೈಟ್ ಹೇಳಿಕೆಗೆ ವಿಧಾನಸಭೆಯಲ್ಲಿ ಕೋಲಾಹಲ

ಮೇಕೆದಾಟು ಪ್ರಸ್ತಾಪಿಸಿ ಡಿಕೆಶಿಗೆ ಅಶೋಕ್ ಕೌಂಟರ್

ಬೆಂಗಳೂರು, ಮಾ.6– ಕನ್ನಡ ಚಿತ್ರರಂಗದ ಕುರಿತಂತೆ ಡಿಸಿಎಂ ಡಿಕೆ ಶಿವಕುಮಾರ್ ನೀಡಿರುವ 'ನಟ್ ಬೋಲ್ಟ್ ಟೈಟ್' ಹೇಳಿಕೆ ಭಾರೀ ವಿವಾದ ಪಡೆದು ಕೊಂಡಿದೆ. ಸಿನಿಮಾರಂಗ, ರಾಜಕೀಯ ವಲಯದ ಜೊತೆ ಸಾರ್ವಜನಿಕ ವಲಯದಲ್ಲೂ ಚರ್ಚೆ ಜೋರಾಗಿದೆ. ಇದೀಗ ವಿಧಾನಸಭೆ ಅಧಿವೇಶನದಲ್ಲೂ ಡಿಕೆಶಿ ಹೇಳಿಕೆ ಬಗ್ಗೆ ಚರ್ಚೆಯಾಗಿದೆ. ಸದನದಲ್ಲಿ ನಟ್ ಬೋಲ್ಟು ಟೈಟ್ ಹೇಳಿಕೆ ಭಾರೀ ಸದ್ದು, ಭಾರೀ ಕೋಲಾಹಲ, ವಾಕ್ಸಮರಕ್ಕೆ ಕಾರಣವಾಗಿದೆ. ಡಿಕೆಶಿ ಹೇಳಿಕೆ ಬಗ್ಗೆ ವಿಪಕ್ಷ ನಾಯಕ ಆರ್.ಅಶೋಕ್ ಪ್ರಸ್ತಾಪಿಸಿದರು. ನಾವೇನು ಕಲಾವಿದರಿಗೆ ದುಡ್ಡು ಕೊಡುತ್ತಿದ್ದೇವಾ ನಟ್ಟು ಬೋಲ್ಟು ಟೈಟ್ ಮಾಡೋಕ್ಕೆ? ನಾನು ಮಂತ್ರಿ ಆಗಿದ್ದಾಗಲೂ ಚಲನ ಚಿತ್ರೋತ್ಸವಕ್ಕೆ ಬಂದಿರಲಿಲ್ಲ. ಅಷ್ಟಕ್ಕೇ ಸುದೀಪ್ ಮತ್ತಿತರಿಗೆ ಡಿಕೆಶಿ ನಟ್ಟು ಬೋಲ್ಟು ಟೈಟ್ ಮಾಡ್ತೀನಿ ಅಂತಾರೆ. ನಾವೇನು ಕಲಾವಿದರಿಗೆ ದುಡ್ಡು ಕೊಡ್ತಿದೀವಾ ಅಂತ ಆಕ್ಷೇಪಿಸಿದರು.

ಈ ವೇಳೆ ಅಶೋಕ್ ಮಾತಿಗೆ ಮಂಡ್ಯ ಶಾಸಕ ರವಿ ಗಣಿಗ ಸೇರಿದಂತೆ ಮತ್ತಿತರ ಕಾಂಗ್ರೆಸ್ ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು. ನಟ್ಟು ಬೋಲ್ಟು ಟೈಟ್ ಮಾಡದೇ ಇನ್ನೇನು ಮಾಡಬೇಕು? ನೆಲ ಜಲ ಭಾಷೆ ಕಾರ್ಯಕ್ರಮಕ್ಕೆ ಬರಲ್ಲ ಅಂದರೆ ಇನ್ನೇನು ಮಾಡಬೇಕು ಎಂದು ಡಿಕೆಶಿ ಹೇಳಿಕೆಯನ್ನು ರವಿ ಗಣಿಗ ಸಮರ್ಥಿಸಿಕೊಂಡರು.

ಈ ವೇಳೆ ಮಧ್ಯ ಪ್ರವೇಶಿಸಿದ ಶಾಸಕ ಡಾ.ಅಶ್ವತ್ಥ್ ನಾರಾಯಣ, ಹೆದರಿಸಿ ಬೆದರಿಸೋದು ಯಾಕ್ರೀ..? ಈ ರೀತಿ ನೇರ ಹೆದರಿಸೋದು ಸರ್ಕಾರದ ಕೆಲಸನಾ? ಇದು ಸರ್ಕಾರದ ನಡವಳಿಕೆನಾ. ನೀವು ದುಡ್ಡು ಕೊಟ್ಟು ಜನರನ್ನು ಕರೆದುಕೊಂಡು ಬರಬೇಕು. ಕಲಾವಿದರು



ವಿಧಾನಸಭೆಯಲ್ಲಿ ಆರ್.ಅಶೋಕ್ ಮಾತನಾಡುತ್ತಿರುವುದು.

ಸುಮ್ನೆ ಸನ್ನೆ ಮಾಡಿದರೆ ಸಾಕು ಜನ ಬರ್ತಾರೆ. ಜನ ಬಂದರೆ ಈ ಸರ್ಕಾರ ಉಳಿಯುತ್ತಾ? ಇಷ್ಟ ಬಂದಂಗೆ ಮಾತಾಡಬಹುದಾ ಎಂದು ಗರಂ ಆದರು.

ನೆಲ ಜಲ ಭಾಷೆ ಕಾರ್ಯಕ್ರಮಕ್ಕೆ ಬರದಿದ್ದರೆ ನಟ್ಟೂ ಟೈಟ್ ಮಾಡ್ತೀವಿ ಬೋಲ್ಟೂ ಟೈಟ್ ಮಾಡ್ತೀವಿ ಎಂದು ಕಾಂಗ್ರೆಸ್ ಶಾಸಕ ನರೇಂದ್ರಸ್ವಾಮಿ ಹೇಳಿದರು. ಮಾಡಿ ನೊಡೋಣ, ಕಲಾವಿದರು ಬೀದಿಗೆ ಬಂದರೆ ನೀವಿರಲ್ಲ. ನಿಮ್ ಹಿಂದೆ ಹತ್ತು ಜನ ಬರಲ್ಲ ಅಂದು ಅಶ್ವತ್ಥ್ ನಾರಾಯಣ್ ಟಕ್ಕರ್ ಕೊಟ್ಟರು. ಈ ವೇಳೆ ನರೇಂದ್ರ ಸ್ವಾಮಿ ಹಾಗೂ ಅಶ್ವತ್ಥ್ ನಾರಾಯಣ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಬಿಜೆಪಿಯಿಂದ ಕನ್ನಡಕ್ಕೆ ಅವಮಾನ, ಧಿಕ್ಕಾರ ಎಂದು ಕಾಂಗ್ರೆಸ್ ಸದಸ್ಯರು ಘೋಷಣೆ ಕೂಗಿದರು. ಬಳಿಕ ಮಾತ ನಾಡಿದ ಆರ್.ಅಶೋಕ್, ಡಿಸಿಎಂ ಡಿಕೆಶಿಯ ಮೇಕೆದಾಟು ಪಾದಯಾತ್ರೆ ಮೂಲಕ ಟಾಂಗ್ ಕೊಟ್ಟರು. ಮೇಕೆದಾಟು ಪಾದಯಾತ್ರೆ ಮಾಡ್ದೆ ಯಾರು ಬಂದಿಲ್ಲ ಅಂತಾರೆ. ಯಾಕೆ ಬರಬೇಕು. ಕಾಂಗ್ರೆಸ್ ಬಾವುಟ, ಕೈ ಗುರುತು ಇಟ್ಟುಕೊಂಡು ಹೋದರೆ ಯಾರು ಬರ್ತಾರೆ? ಬರಬೇಕು ಅಂತಾ ನೀವು ಏನು ಅವರಿಗೆ ಧಮ್ಕಿ ಹಾಕೋದು ಎಂದು ಅಶೋಕ್ ತರಾಟೆಗೆ ತೆಗೆದುಕೊಂಡರು. ಸಾಹಿತಿಗಳು, ಕನ್ನಡ ಸಂಘಟನೆಗಳು ಮಾಡಿದ್ದರೆ ಕಲಾವಿದರು ಹೋಗುತ್ತಿದ್ದರು. ಡಿ.ಕೆ.ಶಿವಕುಮಾರ್ ಮಾಡಿದರೆ ಯಾಕೇ ಹೋಗ್ತಾರೆ. ಮೇಕೆದಾಟು ಪಾದಯಾತ್ರೆ ಮಾಡಿದ್ದೇ ಡಿ.ಕೆ.ಶಿವಕುಮಾರ್ ಅವರಿಗಾಗಿ ಎಂದು ಆರೋಪಿಸಿದರು.

ಮೇಕೆದಾಟಲ್ಲಿ ಕೂತ್ಕೊಂಡ್ರು, ಸ್ನಾನ ಮಾಡಿದರು. ಪಂಚೆ ಹಾಕೊಂಡು ನದಿಗೆ ಪೂಜೆನೂ ಮಾಡಿದರು. ಆ ಮೇಲೆ ಆ ಫೋಟೋ ಶೂಟ್ ಮಾಡಿಸಿಕೊಂಡರು. ಇದು ಡಿ.ಕೆ.ಶಿವಕುಮಾರ್ ಕಾರ್ಯಕ್ರಮ. ವಾಟ್ ಈಸ್ ಡಿ.ಕೆ.ಶಿವಕುಮಾರ್, ಶಿವಕುಮಾರ್ ಯಾರೆಂದು ತೋರಿಸಿಕೊಳ್ಳೋಕೆ ಮಾಡಿದ್ದು. ಡಿ.ಕೆ.ಶಿವಕುಮಾರ್ ಪ್ರೋಗ್ರಾಂ ಅದು ಅವರ ಕಾರ್ಯಕ್ರಮಕ್ಕೆ ಹೋಗಿಲ್ಲ ಅಂತಾ ಸೇಡು ತೀರಿಸಿಕೊಂಡರೆ ಯಾವ ನ್ಯಾಯ. ಕಲಾವಿದರು ಎಲ್ಲಾ ಪಕ್ಷದವರ ಪರವೂ ಪ್ರಚಾರ ಮಾಡುತ್ತಾರೆ. ನೀವು ಅವರಿಗೆ ಟೈಟ್ ಮಾಡ್ತೀನಿ ಅಂದರೆ ಹೇಗೆ. ನೀವು ಟೈಟ್ ಮಾಡಬೇಕಾಗಿರುವುದು ಸರ್ಕಾರಕ್ಕೆ. ತಿಂಗಳಿಗೊಮ್ಮೆ ಜಿಲ್ಲಾ ಮಂತ್ರಿಗಳು ಸಭೆ ಮಾಡಬೇಕು ಅಂದ್ರಲ್ಲ ಮುಖ್ಯಮಂತ್ರಿಗಳು, ಯಾವ ಮಂತ್ರಿಗಳು ಎಷ್ಟು ಸಭೆಗಳನ್ನು ಮಾಡಿದ್ದಾರೆ. ಪಾಪ ಬಹಳ ಮಂತ್ರಿಗಳು ಬದಲಾವಣೆ ಆಗುತ್ತೆ ಎಂದು ಕಾಯ್ತಾ ಇದ್ದಾರೆ ಎಂದು ಅಶೋಕ್ ಕೌಂಟರ್ ಕೊಟ್ಟರು.

ಆಧುನಿಕ ಸಮಸ್ಯೆಗಳಿಗೆ ವಚನಗಳೇ ದಿವ್ಯೌಷಧ

ವಿಶ್ರಾಂತ ಪ್ರಾಧ್ಯಾಪಕ ಡಾ. ಎನ್.ಎಂ.ತಳವಾರ ಅಭಿಮತ



'ದೇವರ ದಾಸಿಮಯ್ಯ ಅವರ ವಚನಗಳ ಚಿಂತನೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ವಿಶ್ರಾಂತ ಪ್ರಾಧ್ಯಾಪಕ ಡಾ.ಎನ್.ಎಂ.ತಳವಾರ ಉದ್ಘಾಟಿಸಿದರು.

ಮೈಸೂರು, ಮಾ.6(ಎಂಕೆ)– ವಚನಗಳು ಆಧುನಿಕ ಸಮಸ್ಯೆಗಳಿಗೆ ದಿವ್ಯೌಷಧವಾಗಿವೆ ಎಂದು ವಿಶ್ರಾಂತ ಪ್ರಾಧ್ಯಾಪಕ ಡಾ.ಎನ್.ಎಂ.ತಳವಾರ ಹೇಳಿದರು.

ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಲ್ಲಿ ಶ್ರೀ ಬಸವೇಶ್ವರ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ ಹಾಗೂ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ದೇವರ ದಾಸಿಮಯ್ಯ ಅವರ ವಚನಗಳ ಚಿಂತನೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನದ ದೇವರ ದಾಸಿಮಯ್ಯ ಮೊದಲಾದ ಶಿವಶರಣರು ಎಲ್ಲಾ ಬಗೆಯ ಲೌಕಿಕ ಭೋಗ ಭಾಗ್ಯಗಳನ್ನು ನಿರಾಕರಿಸಿ ಅರಿವಿನ ವಿಸ್ತರಣೆಗೆ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಶರಣರು ತಮ್ಮ ವಚನಗಳು ಶಿವನಿಗೆ ಸಮ ಎಂದು ಭಾವಿಸಿದ್ದರು. ವಿಭಿನ್ನ ಜೀವರಾಶಿಗಳಿಂದ ತುಂಬಿರುವ ಈ ಲೋಕದ ಹಿತ ಕಾಯುವುದು ಶಿವ ತತ್ವವಾಗಿದ್ದು, ಆ ಶಿವತತ್ವವನ್ನು ಅರಿತರೆ ಮನುಷ್ಯ ಮೃಗತ್ವದಿಂದ ಮಾನವನಾಗುತ್ತಾನೆ. ಬಸವಣ್ಣ ಮತ್ತು ಕುವೆಂಪು ಅವರು ಸಾರಿದ ವಿಶ್ವಮಾನವತ್ವ ಸಾಧ್ಯವಾಗುತ್ತದೆ. ಬಯಕೆಗಳೇ ಮನುಷ್ಯನ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದ್ದು, ವಚನಗಳ ಅರ್ಥ ತಿಳಿದು, ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ಸಾಗಿದರೆ ಜೀವನದ ಮೌಲ್ಯ ತಿಳಿಯುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ.ಮೈಲಹಳ್ಳಿ ರೇವಣ್ಣ ಮಾತನಾಡಿ, ವಚನಗಳ ಮೂಲಕ ಸಮಾನತೆ ಮತ್ತು ಸಮ ಸಂಸ್ಕೃತಿಯನ್ನು ಸಾಧಿಸುವುದು ಶರಣರ ಧ್ಯೇಯವಾಗಿತ್ತು. ಈ ನಿಟ್ಟಿನಲ್ಲಿ ಶರಣ ಚಳವಳಿ ಇತಿಹಾಸ ಒಂದು ಸಮ ಸಮಾಜದ ಹೋರಾಟದ ಭಾಗವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಪುಟ್ಟರಾಜ ಮಾತನಾಡಿ, ಇಂದಿನ ಜನರು ಮಾನಸಿಕ ಕ್ಷೋಭೆಗೆ ಒಳಗಾಗುತ್ತಿದ್ದಾರೆ. ಜೀವನದ ಜಂಜಾಟ ಮತ್ತು ಒತ್ತಡಕ್ಕೆ ಸಿಲುಕಿ ಅಸುಖಿಗಳಾಗುತ್ತಿದ್ದಾರೆ. ಆಧುನಿಕ ಮನುಷ್ಯನ ಈ ಸಮಸ್ಯೆಗಳಿಗೆ ಶರಣರ ವಚನಗಳು ಮದ್ದಿನ ರೂಪದಲ್ಲಿ ಕೆಲಸ ಮಾಡುತ್ತವೆ. ಹಾಗಾಗಿ ವಿದ್ಯಾರ್ಥಿಗಳು ವಚನಗಳನ್ನು ಹೆಚ್ಚು ವ್ಯಾಪಕವಾಗಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಪಿ. ಬೆಟ್ಟೇಗೌಡ, ಡಾ.ಆರ್.ಗುರುಸ್ವಾಮಿ, ಡಾ.ಮುರಳೀಧರ, ಪ್ರೊ.ಶೋಭಾರಾಣಿ, ಡಾ.ಯಲ್ಲವ್ವ ಹೆಬ್ಬಳ್ಳಿ ಮತ್ತಿತರರಿದ್ದರು.

ದಲಿತರಿಗೆ ಅನ್ಯಾಯ ಮಾಡಿದ್ದಕ್ಕೆ ನೀವು ಕುಂಟುತ್ತಿದ್ದೀರಿ

ಸಿಎಂ ಸಿದ್ದರಾಮಯ್ಯ ವಿರುದ್ಧ ಛಲವಾದಿ ಆಕ್ಷೇಪಾರ್ಹ ಮಾತು

ಬೆಂಗಳೂರು, ಮಾ.6– ಪರಿಶಿಷ್ಟರ ಹಣ ದುರ್ಬಳಕೆ ವಿರೋಧಿ ಹೋರಾಟ ಸಮಿತಿಯು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಜ್ಯ ಸರಕಾರವನ್ನು ಟೀಕಿಸುವ ಭರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನೀಡಿದ ಆಕ್ಷೇಪಾರ್ಹ ಹೇಳಿಕೆ ತೀವ್ರ ಟೀಕೆ ವ್ಯಕ್ತವಾಗಿದೆ.



ರಾಜ್ಯ ಸರಕಾರ ಎಸ್‌ಸಿಪಿ–ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿದೆ ಎಂದು ಆರೋಪಿಸಿ ಪರಿಶಿಷ್ಟರ ಹಣ ದುರ್ಬಳಕೆ ವಿರೋಧಿ ಹೋರಾಟ ಸಮಿತಿಯು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಛಲವಾದಿ ನಾರಾಯಣಸ್ವಾಮಿ, ಮಂಡಿ ನೋವಿನಿಂದ ಬಳಲುತ್ತಿರುವ ಸಿದ್ದರಾಮಯ್ಯ ಅವರು ವೀಲ್ ಚೇರ್‌ನಲ್ಲಿ ಓಡಾಡುತ್ತಿರುವ ಬಗ್ಗೆ ಲೇವಡಿ ಮಾಡಿದರು. ದಲಿತರ 25 ಸಾವಿರ ಕೋಟಿ ರೂ. ದುರ್ಬಳಕೆಯಾಗಿದೆ. ನಮ್ಮ ಜನರಿಗೆ ಅನ್ಯಾಯ ಮಾಡಿದ್ದಕ್ಕೆ ನೀವು ಕುಂಟುತ್ತಿದ್ದೀರಿ. ಜನರಿಗೆ ಅನ್ಯಾಯ ಮಾಡಿದ್ದಕ್ಕೆ ನಿಮಗೆ ಈ ಸ್ಥಿತಿ ಬಂದಿದೆ. ದಲಿತರ ಹಣ ದುರುಪಯೋಗ ಮಾಡಿಕೊಂಡಿದ್ದಕ್ಕೆ ಇಂದು ವೀಲ್ ಚೇರ್‌ನಲ್ಲಿ ಬರುವಂತಾಗಿದೆ.

ಪರಿಶಿಷ್ಟರಲ್ಲಿ ವಿದ್ಯಾವಂತರು ಹೆಚ್ಚಾಗಿದ್ದಾರೆ. ನಿರುದ್ಯೋಗ ಸಹ ಹೆಚ್ಚಾಗಿದೆ. ಪೇಪರ್‌ಗಳಲ್ಲಿ ಅಷ್ಟೇ ಗ್ಯಾರಂಟಿ ಇದೆ. ನಮಗೆ ಆ ಗ್ಯಾರಂಟಿ ಸಿಗುತ್ತಿಲ್ಲ. ಸರಕಾರ ಗ್ಯಾರಂಟಿಗಳನ್ನು ಕೊಟ್ಟೇ ಇಲ್ಲ. ದಲಿತರು ಬೀದಿಯಲ್ಲಿ ಕುಳಿತಿದ್ದೇವೆ. ಸಿದ್ದರಾಮಯ್ಯ ಗುಲಾಮಗಿರಿಯ ಸುಖದ ಸಂಭ್ರಮ ಮಾಡುತ್ತಿದ್ದಾರೆ. ದಲಿತರಿಗೆ ಅನ್ಯಾಯ ಮಾಡಿದ್ದಕ್ಕೆ ಅವರು ಈಗ ಕುಂಟುವ ಹಾಗಾಗಿದೆ. ದಲಿತರ ಹಣ ನುಂಗಿದ್ದಕ್ಕೆ ಅವರ ಗಂಟಲು ಸರಿಯಿಲ್ಲ, ಗಂಟಲಲ್ಲಿ ಸಿಕ್ಕಿ ಹಾಕಿಕೊಂಡಿದೆ. ನಮ್ಮ ಜನರಿಗೆ ಅನ್ಯಾಯ ಮಾಡಿ ಓಡಾಡಲು ಹೋದರಲ್ಲಾ ಅದಕ್ಕೆ ಅವರು ಕುಂಟುತ್ತಾ ಇರೋದು. ಈಗ ವೀಲ್ ಚೇರ್ ಬಂದಿದೆ, ಮುಂದೆ ವೀಲ್ ಚೇರ್ ಹೋಗಿ ಬೇರೆ ಚೇರ್ ಬರುತ್ತದೆ ಎಂದು ಟೀಕಿಸಿದರು.

ಮಡಿಕೇರಿ–ಪಣತೂರು ಮಾರ್ಗದಲ್ಲಿ ಬಾಕಿ ಉಳಿದಿರುವ ರಸ್ತೆ ನಿರ್ಮಾಣ ಪ್ರಕ್ರಿಯೆ ಆರಂಭಿಸಲು ಕ್ರಮ ಕೈಗೊಳ್ಳಿ

ಕೇಂದ್ರ ಸಚಿವ ನಿತೀನ್ ಗಡ್ಕರಿ ಅವರಿಗೆ ಮೈಸೂರು–ಕೊಡಗು ಸಂಸದ ಯದುವೀರ ಒಡೆಯರ್ ಮನವಿ

ಮೈಸೂರು, ಮಾ.6(ಪಿಎಂ)– ಮಡಿಕೇರಿ–ಪಣತೂರು (ಕೇರಳ ಗಡಿ) ಮಾರ್ಗದಲ್ಲಿ ಬಾಕಿ ಉಳಿದಿರುವ ರಸ್ತೆ ನಿರ್ಮಾಣ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಆರಂಭಿಸುವ ಜೊತೆಗೆ ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತೀನ್ ಗಡ್ಕರಿ ಅವರಿಗೆ ಮೈಸೂರು ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದ್ದಾರೆ.



ಯದುವೀರ ಒಡೆಯರ್

ಮಡಿಕೇರಿ ಜಿಲ್ಲೆಯ ಭಾಗಮಂಡಲ ಹೋಬಳಿಯ ಕುಂದಚೇರಿಯ ನಿವಾಸಿಗಳು ಸದರಿ ಮಾರ್ಗದಲ್ಲಿ ಬಾಕಿ ಇರುವ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಿ, ಶೀಘ್ರ ಪೂರ್ಣಗೊಳಿಸುವಂತೆ ನನಗೆ ಮನವಿ ಸಲ್ಲಿಸಿದ್ದಾರೆ. ರಸ್ತೆ ನಿಮಾಣಕ್ಕಾಗಿ ಸಮೀಕ್ಷೆ ಈಗಾಗಲೇ ಪೂರ್ಣಗೊಂಡಿದೆ. ಆದರೆ ನಿರ್ಮಾಣ ಕಾಮಗಾರಿ ಮಾತ್ರ ಪ್ರಾರಂಭವಾಗಿಲ್ಲ ಎಂದು ಸ್ಥಳೀಯ ನಿವಾಸಿಗಳು ನನಗೆ ತಿಳಿಸಿದ್ದಾರೆ.

ಈ ವಿಳಂಬದಿಂದ ಸದರಿ ಪ್ರದೇಶದ ಜನರಿಗೆ ಅನಾನುಕೂಲ ಉಂಟಾಗಿದೆ. ಆ ಮೂಲಕ ಅವರ ಸಂಪರ್ಕ, ವ್ಯಾಪಾರ ಸೇರಿದಂತೆ ಅಭಿವೃದ್ಧಿ ಮೇಲೆ ವ್ಯತಿರೀಕ್ತ ಪರಿಣಾಮ ಉಂಟಾಗಿದೆ. ಸ್ಥಳೀಯ ಪ್ರಯಾಣಿಕರು ಮತ್ತು ಅಂತರ ರಾಜ್ಯ ಪ್ರಯಾಣಕ್ಕೆ ಈ ರಸ್ತೆಯ ಪ್ರಾಮುಖ್ಯತೆ ಗಮನದಲ್ಲಿಟ್ಟುಕೊಂಡು ನಿರ್ಮಾಣ ಪ್ರಕ್ರಿಯೆ ತ್ವರಿತವಾಗಿ ಆರಂಭಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಯದುವೀರ ಒಡೆಯರ್ ತಮ್ಮ ಮನವಿಯಲ್ಲಿ ಕೇಂದ್ರ ಸಚಿವರನ್ನು ಕೋರಿದ್ದಾರೆ.

ಪಿಇಎಸ್ ವಿವಿ ಸಂಸ್ಥಾಪಕ ಎಂ.ಆರ್.ದೊರೆಸ್ವಾಮಿ ಇನ್ನಿಲ್ಲ

ಬೆಂಗಳೂರು, ಮಾ.6– ಪಿಇಎಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಹಾಗೂ ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್.ದೊರೆಸ್ವಾಮಿ ಅವರು ಬೆಂಗಳೂರಿನ ಬನಶಂಕರಿ 2ನೇ ಹಂತದಲ್ಲಿರುವ ತಮ್ಮ ಸ್ವಗೃಹದಲ್ಲಿ ಗುರುವಾರ ಸಂಜೆ ನಿಧನರಾಗಿದ್ದಾರೆ.



ಅವರಿಗೆ 89 ವರ್ಷ ವಯಸ್ಸಾಗಿತ್ತು. ಶ್ರೀಯುತರು ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನದವರೆಗೆ ಸ್ವಗೃಹದಲ್ಲಿ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದು, ನಾಳೆ (ಮಾ.7) ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಪ್ರಮುಖ ಗಣ್ಯರು ದೊರೆಸ್ವಾಮಿ ಅವರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ. ನಾಳೆ ಪಿಇಎಸ್ ವಿಶ್ವವಿದ್ಯಾಲಯದ ಎಲ್ಲಾ ತರಗತಿಗಳನ್ನು ರದ್ದುಗೊಳಿಸಲಾಗಿದೆ. ದೊರೆಸ್ವಾಮಿ ಅವರು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ 2013ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ನೇಮಕವಾದರು. ನಂತರ ರಾಜ್ಯ ಸರ್ಕಾರದಲ್ಲಿ ಉನ್ನತ ಶಿಕ್ಷಣಗಳ ಸುಧಾರಣಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ ತರಬೇಕಾದ ಅಮೂಲಾಗ್ರ ಬದಲಾವಣೆಗಳ ಬಗ್ಗೆಯೂ ಸಲಹೆ ನೀಡಿದ್ದರು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ರಾಜ್ಯದಲ್ಲಿ ಶಾಸಕರು ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಮಾಡುವ ಯೋಜನೆಯ ಜಾರಿಗೆ ಕಾರಣೀಭೂತರಾಗಿದ್ದಾರೆ.

ತಿದ್ದುಪಡಿ

ದಿನಾಂಕ: 5–3–2025 ರಂದು 'ಮೈಸೂರು ಮಿತ್ರ' ಪುಟ–12ರಲ್ಲಿ ಪ್ರಕಟವಾಗಿದ್ದ ಸಿಎಫ್‌ಟಿಆರ್‌ಐ ಶಾಲೆ, ಮೈಸೂರು (ಆಂಗ್ಲ ಮಾಧ್ಯಮ) ಯಾದವಗಿರಿ, ಮೈಸೂರು ಈ ಜಾಹೀರಾತಿನಲ್ಲಿ ಕ್ರ.ಸಂ.:01, ಹುದ್ದೆಯ ಹೆಸರು: ಆಂಗ್ಲ ಶಿಕ್ಷಕರು, ವಿದ್ಯಾರ್ಹತೆ: ಬಿ.ಎ/ಎಂ.ಎ, ಬಿ.ಎಡ್, ಜೊತೆಗೆ, 'ಆಂಗ್ಲಭಾಷೆ' ಪ್ರಮುಖ ವಿಷಯವಾಗಿರಬೇಕು, ಖಾಲಿ ಹುದ್ದೆಗಳು:01 ಅನುಭವ: ಸಿಬಿಎಸ್‌ಇ ಶಾಲೆಯಲ್ಲಿ 3 ವರ್ಷದ ಬೋಧನಾ ಅನುಭವ ಇರುವವರಿಗೆ ಆದ್ಯತೆ ಎಂದು ಓದಿಕೊಳ್ಳುವುದು.

–ಕಾರ್ಯದರ್ಶಿಗಳು
ಸಿಎಫ್‌ಟಿಆರ್‌ಐ ವಿದ್ಯಾಸಂಸ್ಥೆ, ಮೈಸೂರು

PUBLIC NOTICE

It is hereby bring to the notice of the Public at large that, my clients **(1) M/s.SRI BAPUJI CONSTRUCTION PRIVATE LIMITED,** Represented by its Managing Director Sri. J. Bapuji, **(2) Sri VEERABHADRAIAH (3) Sri THYAGARAJU and (4) Sri JAYARAM** have purchased the property bearing Sy.No.65 measuring 3 Acres 0-16 guntas and Sy.No.120 measuring to an extent of 1 acre both are situated at Shyadanahalli Village, Mysore Taluk and District by virtue of registered sale deed dated 16-02-2019. The aforesaid land is acquired by KIADB by virtue of Preliminary Notification dated 24-02-1975 following the final notification dated 28-04-1977. After acquisition of the land, it was allotted to one M/s. Mandya Chemicals, subsequently, M/s. Mandya Chemicals sold to M/s. Deccan Group and thereupon, M/s. Deccan Group sold to my clients under the sale deed dated 16-02-2019. Fraudulently, one **Mr. Basavaraju E.,** S/o. Late Eraiah and **Mr.Narayana V.,** S/o. Venkatappa M.K. have created the sale deed to my client's property under the sale deed dated 14-08-2024. Subsequently, in a fraudulent manner, an order of conversion dated 18-02-2025 also obtained from the Deputy Commissioner, Mysuru. My clients have rightly obtained an order of status-quo with regard to status of the land and also as well as possession to the schedule property in W.P.No.4524/2025 before the Hon'ble High Court of Karnataka. Further my clients have also challenged the of conversion pertains to said and before the Karnataka Appellate Tribunal, Bengaluru. Further my clients also intend to initiate criminal proceedings against the aforesaid Mr. Basavaraju E., S/o. Late Eraiah and Mr. Narayana V., S/o. Venkatappa M.K. Therefore under the said circumstances, my clients requested the public at large, not to pursue any transactions with the said Mr. Basavaraju E., S/o. Late Eraiah and Mr. Narayana V., S/o. Venkatappa M.K. pertains to the schedule property is concerned. Besides this notification also, if anybody intend to proceed transaction with the said persons, it is upto your risk and consequences.

SCHEDULE PROPERTY

All the piece and parcel of the agricultural property bearing Sy.No.65 measuring to an extent of 3 acres 16 guntas and Sy.No.120 measuring 1 acre, in all total 4 Acres 0-16 guntas both are situated at Shyadanahally Village, Kasaba Hobli, Mysore Taluk and District, now East Taluk, Bangalore bounded on:
East by: Property belongs to Sy.No.125.
West by: Property belongs to Sy.No.30.
North by: Property belongs to Sy.No.125
South by: Property belongs to Sy.No.120

Sd/- NARASIMHARAJU, Bsc., LLB.,
ADVOCATE, #3, 2nd Floor, Thimmaiah Chambers, 1st Cross, 1st Main, Gandhinagar, Bengaluru-560009
Mob: 9972000092, 7892826297
E-mail: rajuadv1977@gmail.com

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ಕಛೇರಿ

ಮೈಸೂರು ಜಿಲ್ಲೆ, ಮೈಸೂರು–570011

E:Mail:-moini.dd.mysore3@gmail.com

ಸಂ:–ಸಿಬ್ಬಂದಿ(2)/ಹೊ.ಗು/ಬಾ.ಜ/93/2024–25 ದಿನಾಂಕ:03.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲೆಯ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳ ಕಛೇರಿಗಳಿಗೆ ಅಗತ್ಯವಿರುವ ಬಾಂದು ಜವಾನರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಂಬಂಧ ಅಧಿಕೃತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜಿನಲ್ಲಿ ನಿಗಧಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಹೊಂದಿರುವ ಸಂಸ್ಥೆಯವರು ಟೆಂಡರ್ ಗಳನ್ನು ಸಲ್ಲಿಸಬಹುದಾಗಿದೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಪಾವತಿಸಿ **ದಿನಾಂಕ:–15.03.2025** ರಂದು ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿದ ಟೆಂಡರ್ ಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು, ಮೈಸೂರು.

DIPR/DDMYS/1392/KSMCA/1023/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಮೈಸೂರು

ಸಂ:ಕರಾಸಾ/ಕಾನಿಅ/ಮೈ/ಕಿಅ/510/2024–25 ದಿನಾಂಕ:05.03.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ. 09/10/11/12/2024–25

ಕರ್ನಾಟಕ ಲೋಕೋಪಯೋಗಿ ಇಲಾಖೆ/ಸಿ.ಪಿ.ಡಬ್ಲ್ಯೂ.ಡಿನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http://kppp.karnataka.gov.in ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ(ರೂ.ಗಳಲ್ಲಿ)
1	ಮಡಿಕೇರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು.	474.60	7,11,900/-
2	ಹುಣಸೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು.	415.04	6,22,560/-
3	ನಾಗಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು.	582.29	8,73,435/-
4	ಪುತ್ತೂರು ಪ್ರಾದೇಶಿಕ ಸಾರಿಗೆ ಅಧಿಕಾರಿ ಗಳ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು.	652.05	9,78,075/-

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **21.03.2025.** 2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ : **10.03.2025** ರ ನಂತರ ಪಡೆಯಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿ ಮಂಟಪ, ಮೈಸೂರು ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ : **0821–2498828.**

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಮೈಸೂರು

ವಾಸಾಸಂಇ/ವಾಪ್ರ/ಜಿಎ/5508/2024–25